<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 56(105) |
| **ಸದಸ್ಯರ ಹೆಸರು** | : **ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : 12-09-2022 |
| **ಉತ್ತರಿಸುವ ಸಚಿವರು** | : **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಹಾಗೂ ಸಕಾಲ ಸಚಿವರು** |

| | | |
|---|---|---|
| ಅ. | ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿರುವ ನಿರ್ದಿಷ್ಟ ಹುದ್ದೆ (Specified Post) ಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವುವು; | <u>ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿರುವ ನಿರ್ದಿಷ್ಟ ಹುದ್ದೆಗಳ ಸಂಖ್ಯೆಯ ವಿವರ</u><br><u>ಪ್ರಾಥಮಿಕ ಶಿಕ್ಷಣ ವಿಭಾಗದ ಹುದ್ದೆಗಳು:-</u><br>1 ಸಿಆರ್‌ಪಿ(ಪ್ರಾಥಮಿಕ) 4103<br>2 ಬಿಆರ್‌ಪಿ(ಪ್ರಾಥಮಿಕ) 612<br>3 ಶಿಕ್ಷಣ ಸಂಯೋಜಕರು (ಪ್ರಾಥಮಿಕ) 380<br>4 ತಾಂತ್ರಿಕ ಸಹಾಯಕರು (ಪ್ರಾಥಮಿಕ) 03<br><br>**ಪ್ರೌಢಶಾಲಾ ವಿಭಾಗದ ಹುದ್ದೆಗಳ ವಿವರ**<br>**1.** ಇ.ಸಿ.ಓ 547<br>**2.** ಬಿಆರ್‌ಪಿ 404<br>**3.** ತಾಂತ್ರಿಕ ಸಹಾಯಕರು 26<br><br>**ಪ್ರೌಢಶಾಲಾ ಮುಖ್ಯ ಶಿಕ್ಷಕರ ಬಿ ವೃಂದದ ಹುದ್ದೆಗಳು**<br><br>ವಿಷಯ ಪರಿವೀಕ್ಷಕರು 196<br>ಎ.ಪಿ.ಸಿ.ಓ 74<br>ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ) 174<br>ಬಿ.ಆರ್.ಸಿ 204<br>ಒಟ್ಟು ಹುದ್ದೆಗಳು 648 |
| ಆ. | ಸದರಿ ನಿರ್ದಿಷ್ಟ (Specified Post) ಹುದ್ದೆಗಳನ್ನು ಭರ್ತಿ ಮಾಡಲು ಇರುವ ನಿಯಮಗಳೇನು; (ಆದೇಶ ಪ್ರತಿಯೊಂದಿಗೆ ಮಾಹಿತಿ ಒದಗಿಸುವುದು) | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) 2020 ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020ರ ಉದ್ಧೃತ ಅಂಶದ ಸೇಕ್ಷನ್.8(1)ರಲ್ಲಿ ಎಲ್ಲಾ ನಿರ್ದಿಷ್ಟ ಹುದ್ದೆಗಳನ್ನು ಅಂಥ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಿದ ಪರೀಕ್ಷೆಯ ಮೂಲಕ ಸಿದ್ದಪಡಿಸಿದ ಶ್ರೇಯಾಂಕ ಪಟ್ಟಿ ( MERIT LIST ) ಆಧಾರದ ಮೇಲೆ ಶಿಕ್ಷಕರನ್ನು ಕೌನ್ಸಲಿಂಗ್ ಮೂಲಕ ಮಾತ್ರವೇ ಸ್ಥಳ ನಿಯುಕ್ತಿಗೊಳಿಸುವ ಮುಖಾಂತರ ಭರ್ತಿ ಮಾಡತಕ್ಕದ್ದು. ಪರಂತು ರಾಜ್ಯ ಸರ್ಕಾರವು ತನ್ನ ವಿವೇಚನೆಯಲ್ಲಿ ನಿಯಮಿಸಲಾದ ಪರೀಕ್ಷೆಯನ್ನು ಉತ್ತೀರ್ಣನಾದ ಮತ್ತು ಅರ್ಹತಾ ಮಾಪನವನ್ನು ಪೂರೈಸಿರುವ ಯಾವೊಬ್ಬ ಶಿಕ್ಷಕರನ್ನು ನಿರ್ದಿಷ್ಟ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಬಹುದು |

| | | |
|---|---|---|
| | | ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ ಇಪಿ8 ಇಟಿಆರ್ 2020 ದಿನಾಂಕ:22/07/2020 ರ 28(iii) ರ ಅಧಿನಿಯಮದಲ್ಲಿ ಸಾಮಾನ್ಯ ವರ್ಗಾವಣೆ ಪೂರ್ಣಗೊಂಡ ನಂತರ, ಖಾಲಿ ಸ್ಥಾನಗಳೆಂದು ನಿರ್ದಿಷ್ಟಪಡಿಸಿದ ಯಾವುದಾದರೂ ಹುದ್ದೆಗಳು ಹಾಗೆ ಇದ್ದರೆ, ಸರ್ಕಾರವು, ಗೊತ್ತುಪಡಿಸಿದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವಂಥ ಅರ್ಹ ಶಿಕ್ಷಕರನ್ನು ನೇಮಿಸಬಹುದು. ಸರ್ಕಾರಿ ಅಧಿನಿಯಮ **(ಅನುಬಂಧ-1)**ರಲ್ಲಿರಿಸಿದೆ.<br>ಆಯುಕ್ತರ ಕಛೇರಿಯ ಜ್ಞಾಪನ ಸಂಖ್ಯೆ.ಸಿ3(4)ನಿಹುಅಪ/77/2020-21 ದಿನಾಂಕ:07/12/2021ರ 4 ಹಾಗೂ 4(10)ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು ಭರ್ತಿ ಮಾಡಲು ಇರುವ ವಿಧಾನ ಮತ್ತು ಷರತ್ತುಗಳನ್ನು ವಿವರಿಸಲಾಗಿದೆ **(ಅನುಬಂಧ-2)ರಲ್ಲಿಸಿದೆ.**<br>ಸರ್ಕಾರದಅಧಿಸೂಚನೆ ಸಂಖ್ಯೆಇಡಿ 16 ಇಟಿಆರ್ 2017 ಬೆಂಗಳೂರು ದಿನಾಂಕ: 18-12-2017ರಲ್ಲಿ ಪ್ರಾಥಮಿಕ ಶಿಕ್ಷಣ ವಿಭಾಗದ ನಿರ್ದಿಷ್ಟಪಡಿಸಿದ ಹುದ್ದೆಗಳಾದ ಸಿಆರ್‌ಪಿ, ಬಿಆರ್‌ಪಿ ಮತ್ತು ಶಿಕ್ಷಣ ಸಂಯೋಜಕರ ಹಾಗೂ ಪ್ರೌಢ ಶಾಲಾ ಸಹ ಶಿಕ್ಷಕರ ಇ.ಸಿ.ಓ, ಬಿ.ಆರ್.ಪಿ ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರ ಬಿ ವೃಂದದ ವಿಷಯ ಪರಿವೀಕ್ಷಕರು ,ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ) ಹುದ್ದೆಗಳಿಗೆ ಪರೀಕ್ಷಾ ವಿಧಾನ ಮತ್ತು ಪಠ್ಯಕ್ರಮಗಳನ್ನು ನಿಗಧಿಪಡಿಸಲಾಗಿರುತ್ತದೆ.<br>ಅಂಥಹ ಹುದ್ದೆಗಳಿಗೆ ಸ್ಥಳ ನಿಯುಕ್ತಿಗಾಗಿ ಕನಿಷ್ಠ 3 ವರ್ಷ ಮತ್ತು ಗರಿಷ್ಠ ಅವಧಿ 5 ವರ್ಷಗಳಾಗಿರತಕ್ಕದ್ದು. |
| ಇ. | ಬೆಂಗಳೂರಿನ ಆಯುಕ್ತರ ಕಛೇರಿಯಲ್ಲಿ ಮಂಜೂರಾಗಿರುವ ನಿರ್ಧಿಷ್ಟ ಹುದ್ದೆ (Specified Post) ಗಳ ಸಂಖ್ಯೆ ಎಷ್ಟು; ಅವು ಯಾವುವು; ಅವುಗಳನ್ನು ಭರ್ತಿ ಮಾಡಲು ಇರುವ ನಿಯಮಗಳೇನು; (ಆದೇಶದ ಪ್ರತಿಗಳೊಂದಿಗೆ ವಿವರ ನೀಡುವುದು) | ಆಯುಕ್ತರ ಕಛೇರಿಗೆ ನಿರ್ದಿಷ್ಟಪಡಿಸಿದ ಹುದ್ದೆಗಳು ಮಂಜೂರಾಗಿರುವುದಿಲ್ಲ.<br>ಕೇಂದ್ರ ಕಛೇರಿಯಲ್ಲಿ ಖಾಲಿಯಾಗುವ ಹುದ್ದೆಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ.ಇಪಿ8 ಇಟಿಆರ್ 2020 ದಿನಾಂಕ:22/07/2020 ರಂತೆ 28(iv) ರಲ್ಲಿ ವಿವರಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಅಪರ ಆಯುಕ್ತರ ಕಛೇರಿ, ಎಸ್‌ಎಸ್‌ಎ ಮತ್ತು ಆರ್‌ಎಮ್‌ಎಸ್‌ಎ ಮುಖ್ಯ ಕಛೇರಿಗಳಲ್ಲಿ ಡಿಎಸ್‌ಇಆರ್‌ಟಿ, ಕೆಎಸ್‌ಇಇಬಿ, ಸಿಟಿಇಗಳು, ಡಿಡಿಪಿಐ ಗಳಂತಹ ಇಲಾಖೆಗಳಂತಹ ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯ ಮಟ್ಟದ ಕಛೇರಿಗಳಲ್ಲಿನ ಹುದ್ದೆಗಳನ್ನು, ಕೌನ್ಸಲಿಂಗ್ ಪ್ರಕ್ರಿಯೆಯ ಹೊರಗಿನ ಹುದ್ದೆಗಳಾಗಿರತಕ್ಕದ್ದು.<br>ಅಂದರೆ ಇಂಥಹ ಹುದ್ದೆಗಳನ್ನು ಸರ್ಕಾರದಿಂದ ವರ್ಗಾವಣೆಯ ಮೂಲಕ ಮಾತ್ರ ತುಂಬಬಹುದಾಗಿದೆ. ಮುಂದುವರೆದು ತಾಂತ್ರಿಕ ಸಹಾಯಕ ಹುದ್ದೆಗಳಿಗೆ ಸಂಬಂಧಿಸಿದಂತೆ ಯಾವುದೇ ಪರೀಕ್ಷಾ ವಿಧಾನ ಮತ್ತು ಪಠ್ಯಕ್ರಮ ಇಲ್ಲದ ಕಾರಣ ಈ ಸಂಬಂಧ ಪರಿಶೀಲನೆಯಲ್ಲಿದೆ. |

| | | |
|---|---|---|
| ಈ. | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET) ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ (Lecturer) ಹುದ್ದೆಯು ನಿರ್ದಿಷ್ಟ ಹುದ್ದೆ (Specified Post) ಅಡಿಯಲ್ಲಿ ಬರುತ್ತದೆಯೇ; | ಬರುವುದಿಲ್ಲ. |
| ಉ. | ಸದರಿ (DIET) ನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು ಬೇರೆ ಕಛೇರಿಯಲ್ಲಿ ಇರುವ ನಿರ್ದಿಷ್ಟ ಹುದ್ದೆಗಾಗಿ ಪರೀಕ್ಷೆ ಬರೆಯಲು ಅರ್ಹರಿರುತ್ತಾರೆಯೇ; ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು ? (ಈ ಸಂಬಂಧ ಆದೇಶ ಪ್ರತಿಗಳೊಂದಿಗೆ ಸಂಪೂರ್ಣ ವಿವರ ಒದಗಿಸುವುದು) | ಅರ್ಹರಾಗುತ್ತಾರೆ.<br>ಆಯುಕ್ತಾಲಯದ ಜ್ಞಾಪನ ಸಂಖ್ಯೆ:ಸಿ3(4)ನಿಹುಅಪ /77/2020-21 ದಿನಾಂಕ:07/12/2021ರ 4 ಹಾಗೂ 4(10)ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು ಭರ್ತಿ ಮಾಡಲು ಇರುವ ವಿಧಾನ ಮತ್ತು ಷರತ್ತುಗಳನ್ನು ವಿವರಿಸಲಾಗಿದೆ **(ಅನುಬಂಧ-3)**ರಲ್ಲಿಸಿದೆ. |

**ಸಂಖ್ಯೆ: ಇಪಿ 52 ಪಿಎಂಎ 2022**

**(ಬಿ.ಸಿ. ನಾಗೇಶ್)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**

**ಹಾಗೂ ಸಕಾಲ ಸಚಿವರು**

ಅನುಬಂಧ - 1

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ– IV<br>**Part– IV** | ಬೆಂಗಳೂರು, ಶುಕ್ರವಾರ, ೨೭, ಮಾರ್ಚ್, ೨೦೨೦ (ಚೈತ್ರ ೭, ಶಕವರ್ಷ ೧೯೪೨)<br>**Bengaluru, FRIDAY, 27, MARCH, 2020 (Chaithra 7, ShakaVarsha 1942)** | ನಂ.೧೧೨<br>**No. 112** |
|---|---|---|

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

### ಅಧಿಸೂಚನೆ

### ಸಂಖ್ಯೆ: ಸಂವ್ಯಶಾಇ 12 ಶಾಸನ 2020, ಬೆಂಗಳೂರು ದಿನಾಂಕ: 27.03.2020.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020 ಇದಕ್ಕೆ 2020ರ ಮಾರ್ಚ್ ತಿಂಗಳ 26ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 04 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 04**

(2020ರ ಮಾರ್ಚ್ ತಿಂಗಳ 27ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020**

(2020ರ ಮಾರ್ಚ್ ತಿಂಗಳ 26ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಲಭ್ಯತೆಯನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ಶಿಕ್ಷಕರ ವರ್ಗಾವಣೆಯನ್ನು ನಿಯಂತ್ರಿಸಲು ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಶಿಕ್ಷಕರ ವರ್ಗಾವಣೆಯನ್ನು ನಿಯಂತ್ರಿಸುವುದು ಮತ್ತು ಅದಕ್ಕೆ ಸೇರಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

(ಎ) "ನೇಮಕಾತಿ" ಎಂದರೆ, ನೇರ ನೇಮಕಾತಿ, ವಿಲೀನಗೊಳಿಸುವಿಕೆ ಅಥವಾ ಮುಂಬಡ್ತಿಯ ಮೂಲಕ ನೇಮಕಾತಿ;

(ಬಿ) "ನೇಮಕಾತಿ ಪ್ರಾಧಿಕಾರ" ಎಂದರೆ, ಶಿಕ್ಷಕನ ಹುದ್ದೆಗೆ ನೇಮಕ ಮಾಡಲು ಸಕ್ಷಮವಾದ ಪ್ರಾಧಿಕಾರ;

(ಸಿ) "ಸಕ್ಷಮ ಪ್ರಾಧಿಕಾರ" ಎಂದರೆ, ನಿಯಮಿಸಬಹುದಾದಂತೆ ಶಿಕ್ಷಕರ ವರ್ಗಾವಣೆ ಆದೇಶವನ್ನು ಮಾಡಲು ಸಕ್ಷಮವಾದ ಪ್ರಾಧಿಕಾರ;

(ಡಿ) "ಕನಿಷ್ಠ ಸೇವಾವಧಿ"ಎಂದರೆ, ಆತನು ಮರು-ನಿಯೋಜನೆ ಹೊಂದಿರುವ ಶಾಲೆಯಲ್ಲಿ ಸಲ್ಲಿಸಿದ ಸೇವೆಯೂ ಒಳಗೊಂಡಂತೆ ಮೂರು ವರ್ಷಗಳ ನಿರಂತರ ಸೇವೆ;

(ಇ) "ಆದ್ಯತೆಯ ಕ್ರಮ" ಎಂದರೆ, ಕೌನ್ಸಿಲಿಂಗ್ ಉದ್ದೇಶಕ್ಕಾಗಿ, ನಿಯಮಿಸಬಹುದಾದ ಮಾನದಂಡದ ಅನುಸಾರವಾಗಿ ಶಿಕ್ಷಕನು ಗಳಿಸಿದ ಕೃಪಾಂಕದ (weighted score) ಆಧಾರದ ಮೇಲೆ ಸಿದ್ಧಪಡಿಸಿದ ಶಿಕ್ಷಕರ ಆದ್ಯತಾ ಪಟ್ಟಿ;

(ಎಫ್) "ಮರು-ನಿಯೋಜನೆ" ಎಂದರೆ, ಶಿಷ್ಯ-ಶಿಕ್ಷಕನ ಅನುಪಾತದ ಮತ್ತು ರಾಜ್ಯಸರ್ಕಾರವು ನಿರ್ದಿಷ್ಟಪಡಿಸಿದ ಇತರ ಮಾಪನಗಳ ಅನುಸಾರವಾಗಿ ಯಾವುದೇ ಹುದ್ದೆಯನ್ನು, ಅದು ಹೆಚ್ಚುವರಿಯಾಗಿರುವ ಶಾಲೆಯಿಂದ, ಅದು ಕೊರತೆ ಇರುವ ಯಾವುದೇ ಶಾಲೆಗೆ ಮರುನಿಯೋಜನೆ ಮಾಡುವುದು;

(ಜಿ) "ಅನುಸೂಚಿ" ಎಂದರೆ ಈ ಅಧಿನಿಯಮಕ್ಕೆ ಲಗತ್ತಾದ ಅನುಸೂಚಿ;

(ಎಚ್) "ನಿರ್ದಿಷ್ಟಪಡಿಸಲಾದ ಹುದ್ದೆಗಳು" ಎಂದರೆ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಶೈಕ್ಷಣಿಕ ಸಹ ಸಂಯೋಜಕ, ತಾಂತ್ರಿಕ ಸಹಾಯಕ, ಕ್ಷೇತ್ರ ಸಂಪನ್ಮೂಲ ಸಂಯೋಜಕ, ಸಹಾಯಕ ಪ್ರಾಜೆಕ್ಟ್ ಸಂಯೋಜಕ, ವಿಷಯ ನಿರೀಕ್ಷಕ ಮತ್ತು ಸಹಾಯಕ ನಿರ್ದೇಶಕ (ಮಧ್ಯಾಹ್ನದ ಊಟ) ಹುದ್ದೆಗಳು ಮತ್ತು ಈ ಬಗ್ಗೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಅಂಥ ಇತರ ಹುದ್ದೆಗಳು;

(ಐ) "ಶಿಕ್ಷಕ" ಎಂದರೆ, ಪ್ರಾಥಮಿಕ ಶಾಲೆ ಅಥವಾ ಪ್ರೌಢಶಾಲೆ ಅಥವಾ ಸಂಯೋಜಿತ ಪ್ರೌಢಶಾಲೆ ಅಥವಾ ಸಂಯೋಜಿತ ಜೂನಿಯರ್ ಕಾಲೇಜಿನಲ್ಲಿ ಶಿಕ್ಷಕರ ಹುದ್ದೆಗಳ ಪ್ರವರ್ಗಕ್ಕೆ ಅಥವಾ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ರಾಜ್ಯ ಸಿವಿಲ್ ಸೇವೆಗಳಿಗೆ ಸೇರಿದ ಅಂಥ ಇತರ ಹುದ್ದೆಗಳಿಗೆ ನೇಮಕವಾದ ವ್ಯಕ್ತಿ;

(ಜೆ) "ವರ್ಗಾವಣೆ" ಎಂದರೆ, ಕಾರ್ಯನಿರ್ವಹಿಸುತ್ತಿರುವ ಒಂದು ಸ್ಥಳದಿಂದ ಕಾರ್ಯನಿರ್ವಹಿಸುತ್ತಿರುವ ಮತ್ತೊಂದು ಸ್ಥಳಕ್ಕೆ ಅದೇ ವೃಂದದಲ್ಲಿ ಶಿಕ್ಷಕನನ್ನು ಸ್ಥಳ ನಿಯುಕ್ತಿಗೊಳಿಸುವುದು;

(ಕೆ) "ಜ್ಯೇಷ್ಠತೆಯ ಘಟಕ" ಎಂದರೆ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜ್ಯೇಷ್ಠತೆಯ ಘಟಕವು ಶೈಕ್ಷಣಿಕ ಜಿಲ್ಲೆಯಾಗಿರುತ್ತದೆ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಜ್ಯೇಷ್ಠತೆಯ ಘಟಕವು ಕಂದಾಯ ವಿಭಾಗವಾಗಿರುತ್ತದೆ; ಮತ್ತು

(ಎಲ್) "ವಲಯ" ಎಂದರೆ, ರಾಜ್ಯ ಸರ್ಕಾರವು ಪರಿಭಾಷಿಸಿ ಮತ್ತು ನಿಯಮಿಸಿದಂತೆ ವಲಯ-ಎ, ವಲಯ-ಬಿ ಮತ್ತು ವಲಯ-ಸಿ.

**3. ವಲಯ - ಸಿ ಗೆ ಶಿಕ್ಷಕನ ಕಡ್ಡಾಯ ನೇಮಕಾತಿ.-** (1) ಶಿಕ್ಷಕನ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಯ ಮೇಲೆ ಮೊದಲ ಸ್ಥಳ ನಿಯುಕ್ತಿಯನ್ನು ಮಾಡುವಾಗ, ಪ್ರತಿಯೊಂದು ನೇಮಕಾತಿ ಪ್ರಾಧಿಕಾರವು, ಮೊದಲಿಗೆ ವಲಯ-ಸಿ ನಲ್ಲಿನ ಖಾಲಿ ಹುದ್ದೆಗಳನ್ನು ತುಂಬತಕ್ಕದ್ದು ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಶೇಕಡಾ ಇಪ್ಪತ್ತಕ್ಕಿಂತ ಹೆಚ್ಚಿನ ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಿಗೆ ಆದ್ಯತೆಯ ಮೇಲೆ ಭರ್ತಿ ಮಾಡುವುದಕ್ಕೆ ಪ್ರಾಶಸ್ತ್ಯ ನೀಡತಕ್ಕದ್ದು.

(2) ವಲಯ-ಸಿ ಯಲ್ಲಿ ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಯ ಮೇಲೆ ಸ್ಥಳನಿಯುಕ್ತಿಗೊಳಿಸಲು ಯಾವುದೇ ಖಾಲಿ ಹುದ್ದೆಯು ಲಭ್ಯವಿಲ್ಲದಿದ್ದಲ್ಲಿ, ಕನಿಷ್ಠ ಸೇವಾವಧಿಯನ್ನು ಪೂರೈಸಿರುವ ವಲಯ-ಸಿ ನಲ್ಲಿ ಕಾರ್ಯನಿರ್ವಹಿಸುತ್ತಿರುವ,

ಸಮ್ಮತಿಸಿರುವ ಶಿಕ್ಷಕರ ಆದ್ಯತೆಯ ಕ್ರಮದಲ್ಲಿ ವಲಯ-ಬಿ ಗೆ ಮತ್ತು ವಲಯ-ಬಿ ಇಂದ ವಲಯ-ಎ ಗೆ ವರ್ಗಾವಣೆ ಮಾಡುವುದರ ಮೂಲಕ ಖಾಲಿಹುದ್ದೆಯನ್ನು ಸೃಜನೆ ಮಾಡಬಹುದು:

ಪರಂತು, ಪ್ರಾರಂಭಿಕ ನೇಮಕಾತಿ ಅಥವಾ ಬಡ್ತಿಯ ಮೇಲೆ ವಲಯ-ಸಿ ಗೆ ಶಿಕ್ಷಕನ ಸ್ಥಳನಿಯುಕ್ತಿಯು ವಲಯ-ಸಿ ಅಡಿಯಲ್ಲಿ ಯಾವುದೇ ಪ್ರದೇಶವನ್ನು ಒಳಗೊಳ್ಳದ ಜ್ಯೇಷ್ಠತೆಯ ಘಟಕಕ್ಕೆ ನೇಮಕವಾದ ಶಿಕ್ಷಕನಿಗೆ ಅನ್ವಯವಾಗತಕ್ಕದ್ದಲ್ಲ:

ಮತ್ತು ಪರಂತು, (1) ರಿಂದ (2)ನೇ ಉಪಪ್ರಕರಣಗಳ ಅಡಿಯಲ್ಲಿನ ಪ್ರಕ್ರಿಯೆಯನ್ನು ಕೈಗೊಂಡ ತರುವಾಯವೂ ವಲಯ-ಸಿ ನಲ್ಲಿ ಯಾವುದೇ ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದಲ್ಲಿ, ಆಗ ಶಿಕ್ಷಕನನ್ನು ವಲಯ-ಬಿ ಅಥವಾ ವಲಯ-ಎ ಯ ಕ್ರಮದಲ್ಲಿ ಒಂದು ಶಾಲೆಗೆ ಸ್ಥಳನಿಯುಕ್ತಿ ಮಾಡಬಹುದು:

ಅಲ್ಲದೇ ಪರಂತು, ಒಬ್ಬ ಶಿಕ್ಷಕನು ವಲಯ-ಸಿ ನಲ್ಲಿ ನಿರಂತರವಾಗಿ ಹತ್ತು ವರ್ಷಗಳಿಗೂ ಅಥವಾ ಸಂಚಿತವಾಗಿ ವಲಯ-ಸಿ ನಲ್ಲಿ ಹದಿನೈದು ವರ್ಷಗಳಿಗೂ ಹೆಚ್ಚಾಗಿ ಈಗಾಗಲೇ ಸೇವೆ ಸಲ್ಲಿಸಿದ್ದಲ್ಲಿ, ಅಂಥ ಶಿಕ್ಷಕನನ್ನು ಬಡ್ತಿಯ ಮೇಲೆ ಅಂಥ ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಕೌನ್ಸಿಲಿಂಗ್ ಮೂಲಕ ವಲಯ-ಬಿ ಅಥವಾ ವಲಯ-ಎ ಯಲ್ಲಿನ ಶಾಲೆಗೆ ಕ್ರಮದಲ್ಲಿ ಸ್ಥಳನಿಯುಕ್ತಿ ಮಾಡಬಹುದು.

**4. ಶಿಕ್ಷಕರ ಸಮರ್ಪಕ ಮರುಹಂಚಿಕೆ (rationalisation).-** (1) ಪ್ರತಿ ಪರ್ಯಾಯ (alternate) ವರ್ಷವೂ ಮಂಜೂರಾದ ಹುದ್ದೆಗಳು ಮತ್ತು ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು, ರಾಜ್ಯ ಸರ್ಕಾರವು ಕಾಲ-ಕಾಲಕ್ಕೆ ನಿಗದಿಪಡಿಸಿದ ಶಿಷ್ಯ-ಶಿಕ್ಷಕ ಅನುಪಾತದ ಆಧಾರದ ಮೇಲೆ ಸಮರ್ಪಕವಾಗಿ ಮರುಹಂಚಿಕೆ ಮಾಡತಕ್ಕದ್ದು.

(2) ಸಮರ್ಪಕ ಮರುಹಂಚಿಕೆ ಮಾಡಿದ ತರುವಾಯ ಯಾವುದೇ ಶಾಲೆಯಲ್ಲಿ ಶಿಕ್ಷಕನ ಹೆಚ್ಚುವರಿ ಹುದ್ದೆಗಳನ್ನು ಅವು ಕೊರತೆ ಇರುವ ಯಾವುದೇ ಶಾಲೆಗೆ ಮರು ನಿಯೋಜನೆಮಾಡತಕ್ಕದ್ದು. ಹಾಗೆ ನಿರ್ಧರಿಸಲಾದ ಹೆಚ್ಚುವರಿ ಶಿಕ್ಷಕರನ್ನು, ನಿಯಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು, ಆದ್ಯತೆಯ ಕ್ರಮದ ಆಧಾರದ ಮೇಲೆಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡತಕ್ಕದ್ದು.

**5. ವಲಯವಾರು ವರ್ಗಾವಣೆಗಳು.-** ಪ್ರತಿ ಪರ್ಯಾಯ ವರ್ಷದಲ್ಲಿ,-

(i) ವಲಯ-ಸಿ ನಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಿಲ್ಲದ ಮತ್ತು ವಲಯ-ಎ ನಲ್ಲಿ ನಿರಂತರವಾಗಿ ಹತ್ತು ವರ್ಷಗಳಿಗೂ ಹೆಚ್ಚಿನ ಸೇವೆಯನ್ನು ಸಲ್ಲಿಸಿರುವ ಪ್ರತಿಯೊಬ್ಬ ಶಿಕ್ಷಕನನ್ನು, ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ವಲಯ-ಸಿ ಅಥವಾ ವಲಯ-ಬಿ ಗೆ ವರ್ಗಾವಣೆ ಮಾಡತಕ್ಕದ್ದು.

(ii) (i)ನೇ ಉಪಖಂಡದ ಅಡಿಯಲ್ಲಿ ವಲಯ-ಸಿಗೆ ವರ್ಗಾವಣೆಗೊಂಡ ಶಿಕ್ಷಕನ ಸ್ಥಳ ನಿಯುಕ್ತಿಗಾಗಿ ಯಾವುದೇ ಖಾಲಿ ಹುದ್ದೆಯು ಲಭ್ಯವಿಲ್ಲದಿದ್ದಲ್ಲಿ, ವಲಯ-ಸಿ ಅಥವಾ ವಲಯ-ಬಿ ನಲ್ಲಿ ಕನಿಷ್ಠ ಸೇವಾವಧಿಯನ್ನು ಪೂರೈಸಿರುವ ಸಮ್ಮತಿಸಿರುವ ಶಿಕ್ಷಕರನ್ನು ಆದ್ಯತೆಯ ಕ್ರಮದಲ್ಲಿ ವಲಯ-ಎ ಗೆ ವರ್ಗಾವಣೆ ಮಾಡುವುದರ ಮೂಲಕ ಖಾಲಿ ಹುದ್ದೆಯನ್ನು ಸೃಜನೆ ಮಾಡಬಹುದು.

**6. ಕೋರಿಕೆಯ ವರ್ಗಾವಣೆ.-** ಒಂದು ಶಾಲೆಯಲ್ಲಿ ಕನಿಷ್ಠ ಸೇವಾ ಅವಧಿಯನ್ನು ಸಲ್ಲಿಸಿರುವ ಶಿಕ್ಷಕನಿಗೆ, ಖಾಲಿ ಹುದ್ದೆಗಳ ಲಭ್ಯತೆಗೆ ಮತ್ತು ನಿಯಮಿಸ ಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಯನ್ನು ಕೋರುವ ಆಯ್ಕೆಯನ್ನು ನೀಡತಕ್ಕದ್ದು:

ಪರಂತು, ಸಮರ್ಪಕ ಮರುಹಂಚಿಕೆ ಅಥವಾ ವಲಯವಾರು ವರ್ಗಾವಣೆಯ ಪರಿಣಾಮವಾಗಿ ಒಂದು ಶಾಲೆಯಿಂದ ಮತ್ತೊಂದಕ್ಕೆ ಶಿಕ್ಷಕನ ವರ್ಗಾವಣೆಯಾದ ಪ್ರಕರಣದಲ್ಲಿ, ಒಂದು ಶಾಲೆಯಲ್ಲಿ ಕನಿಷ್ಠ ಸೇವೆಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಹಿಂದಿನ ಶಾಲೆಯಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸತಕ್ಕದ್ದು:

ಮತ್ತು ಪರಂತು, ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಆರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕನು, ಕಲ್ಯಾಣ ಕರ್ನಾಟಕಪ್ರದೇಶದ ಹೊರಗೆ ವರ್ಗಾವಣೆಯನ್ನು ಕೋರುವುದಕ್ಕಾಗಿ, ಎಲ್ಲಾ ಇತರ ಅರ್ಹತಾ ಷರತ್ತುಗಳ ಜೊತೆಗೆ ಆ ಪ್ರದೇಶದಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನೂ ಕೂಡ ಪೂರೈಸಿರತಕ್ಕದ್ದು.

**7. ಕೌನ್ಸೆಲಿಂಗ್ ಮೂಲಕ ವರ್ಗಾವಣೆ.-** (1) 4, 5 ಮತ್ತು 6ನೇ ಪ್ರಕರಣಗಳ ಅಡಿಯಲ್ಲಿ ಶಿಕ್ಷಕರ ವರ್ಗಾವಣೆಯನ್ನು ವರ್ಷದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳ ಸಾರ್ವತ್ರಿಕ ವರ್ಗಾವಣೆಯ ವೇಳೆಯು ಸಾಮಾನ್ಯವಾಗಿ ಗಣಕೀಕೃತ ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಡೆಸತಕ್ಕದ್ದು:

ಪರಂತು ಏಪ್ರಿಲ್ ಮತ್ತು ಮೇ ತಿಂಗಳಿನ ತರುವಾಯವೂ ವಿಶೇಷ ಸನ್ನಿವೇಶಗಳಲ್ಲಿ ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಾಜ್ಯ ಸರ್ಕಾರದ ನಿರ್ದೇಶನದ ಮೇಲೆ ವರ್ಗಾವಣೆಯನ್ನು ಮಾಡಬಹುದು:

ಮತ್ತು ಪರಂತು ಯಾವೊಬ್ಬ ಶಿಕ್ಷಕನು ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಒಂದು ಸ್ಥಳವನ್ನು ಆಯ್ಕೆ ಮಾಡದಿದ್ದರೆ ಮತ್ತು ಅದನ್ನು ಶಿಷ್ಯ-ಶಿಕ್ಷಕ ಅನುಪಾತದ ಆಧಾರದ ಮೇಲೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಭರ್ತಿ ಮಾಡುವುದು ಅಗತ್ಯವಾಗಿದ್ದರೆ, ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು ಕನಿಷ್ಠ ಸೇವಾವಧಿಯನ್ನು ಪೂರೈಸಿದ ಯಾವೊಬ್ಬ ಶಿಕ್ಷಕನನ್ನು ಅಂಥ ಸ್ಥಳಕ್ಕೆ ವರ್ಗಾವಣೆ ಮಾಡಬಹುದು.

ಮತ್ತು ಪರಂತು ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಅಡಿಯಲ್ಲಿ ಗಂಭೀರವಾದ ದಂಡನೆಗೆ ಒಳಗಾಗಿರುವ ಅಥವಾ ಕಾನೂನಿನ ನ್ಯಾಯಾಲಯದಲ್ಲಿ ಕ್ರಿಮಿನಲ್ ಚಾರ್ಜುಗಳನ್ನು ಎದುರಿಸುತ್ತಿರುವ ಶಿಕ್ಷಕನನ್ನು, ಆತನು ಕನಿಷ್ಠ ಸೇವಾವಧಿಯನ್ನು ಪೂರೈಸಿರದಿದ್ದರೂ ಸಹ ಸಿ-ವಲಯದಲ್ಲಿನ ಯಾವುದೇ ಖಾಲಿಜಾಗಕ್ಕೆ ವರ್ಗಾವಣೆ ಮಾಡತಕ್ಕದ್ದು:

ಅಲ್ಲದೆ ಪರಂತು ಈ ಅಧಿನಿಯಮದ 5 ಮತ್ತು 6ನೇ ಪ್ರಕರಣಗಳ ಅಡಿಯಲ್ಲಿ, ಒಂದು ವರ್ಷದಲ್ಲಿ ಯಾವುದೇ ವೃಂದಕ್ಕ ಮತ್ತು ಯಾವುದೇ ಜೇಷ್ಠತಾ ಘಟಕದಲ್ಲಿ ಮಾಡಲಾದ ವರ್ಗಾವಣೆಗಳ ಒಟ್ಟು ಸಂಖ್ಯೆಯು ಶೇಕಡಾ ಹದಿನೈದರಷ್ಟನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಅಂಥ ಕೆಳಮಿತಿಯನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, ನಾಲ್ಕನೇ ಪರಂತುಕದಲ್ಲಿ ನಿಯಮಿಸಲಾದ ಮಿತಿಯು ಪರಸ್ಪರ ವರ್ಗಾವಣೆಗಳಿಗೆ ಮತ್ತು 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (i) ರಿಂದ (iv)ನೇ ಖಂಡಗಳಲ್ಲಿ ಪರಿಭಾಷಿಸಿದ ವಿಶೇಷ ಪ್ರವರ್ಗಗಳ ಅಡಿಯಲ್ಲಿ ಮಾಡಿದ ವರ್ಗಾವಣೆಗಳಿಗೆ ಅನ್ವಯಿಸತಕ್ಕದ್ದಲ್ಲ.

(2) ಜ್ಯೇಷ್ಠತಾ ಘಟಕದ ಹೊರಗಿನ ಸ್ಥಳಕ್ಕೆ ಪರಸ್ಪರ ವರ್ಗಾವಣೆಯನ್ನು ಆ ವಲಯಕ್ಕೆ ವರ್ಗಾಯಿಸಬೇಕಾದ ಅರ್ಹವಾಗಿರುವ ಮತ್ತು ಐದು ವರ್ಷಗಳ ಬಾಕಿ ಉಳಿದ ಸೇವೆಯನ್ನು ಹೊಂದಿರುವ ಅನ್ಯಥಾ, ಇಬ್ಬರೂ ಶಿಕ್ಷಕರು ಏಳು ವರ್ಷಗಳ ಕನಿಷ್ಠ ಸೇವೆಯನ್ನು ಪೂರೈಸಿರುವ ಷರತ್ತಿಗೆ ಒಳಪಟ್ಟು ಸೇವೆಯಲ್ಲಿ ಒಂದು ಸಲಕ್ಕಿಂತ ಹೆಚ್ಚಲ್ಲದಂತೆ ಅನುಮತಿಸತಕ್ಕದ್ದು. ಆತನು ಜ್ಯೇಷ್ಠತೆಯನ್ನು ರಕ್ಷಿಸಿಕೊಳ್ಳಲು ಅರ್ಹನಾಗಿರತಕ್ಕದ್ದಲ್ಲ ಮತ್ತು ನಿಯಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಜೇಷ್ಠತಾ ಘಟಕದ ಒಳಗೆ ಶಿಕ್ಷಕನ ಪರಸ್ಪರ ವರ್ಗಾವಣೆಯ ಸಂದರ್ಭದಲ್ಲಿ ಆ ಹುದ್ದೆಗೆ ವರ್ಗಾವಣೆ ಮಾಡಲು ಆತನು ಅನ್ಯಥಾ ಅರ್ಹನಾಗಿರತಕ್ಕದ್ದು.

(3) ಸಕ್ಷಮ ಪ್ರಾಧಿಕಾರವು, ಎಲ್ಲಾ ಜಿಲ್ಲೆಗಳಲ್ಲಿ ಖಾಲಿಹುದ್ದೆಗಳ ಶೇಕಡಾವಾರನ್ನು ಸಾಧ್ಯವಾದಷ್ಟು ಮಟ್ಟಿಗೆ ಸಮಾನವಾಗಿ ಹಂಚಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**8. ನಿರ್ದಿಷ್ಟ ಹುದ್ದೆಗಳಿಗೆ ಶಿಕ್ಷಕರ ವರ್ಗಾವಣೆ.-** (1) ಎಲ್ಲಾ ನಿರ್ದಿಷ್ಟ ಹುದ್ದೆಗಳನ್ನು ಅಂಥ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಾದ ಪರೀಕ್ಷೆಯ ಮೂಲಕ ಸಿದ್ಧಪಡಿಸಿದ ಶ್ರೇಯಾಂಕ ಪಟ್ಟಿಯ (merit list) ಆಧಾರದ ಮೇಲೆ ಶಿಕ್ಷಕನನ್ನು ಕೌನ್ಸಿಲಿಂಗ್ ಮೂಲಕ ಮಾತ್ರವೇ ಸ್ಥಳನಿಯುಕ್ತಿಗೊಳಿಸುವ ಮುಖಾಂತರ ಭರ್ತಿ ಮಾಡತಕ್ಕದ್ದು:

ಪರಂತು ರಾಜ್ಯ ಸರ್ಕಾರವು ತನ್ನ ವಿವೇಚನೆಯಲ್ಲಿ ನಿಯಮಿಸಲಾದ ಪರೀಕ್ಷೆಯನ್ನು ಉತ್ತೀರ್ಣನಾದ ಮತ್ತು ಅರ್ಹತಾ ಮಾಪನವನ್ನು ಪೂರೈಸಿರುವ ಯಾವೊಬ್ಬ ಶಿಕ್ಷಕನನ್ನು ನಿರ್ದಿಷ್ಟ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಬಹುದು.

(2) ಅಂಥ ಹುದ್ದೆಗಳಿಗೆ ಸ್ಥಳನಿಯುಕ್ತಿಗಾಗಿ ಕನಿಷ್ಠ ಮತ್ತು ಗರಿಷ್ಠ ಅವಧಿಗಳು ಅನುಕ್ರಮವಾಗಿ ಮೂರು ವರ್ಷಗಳು ಮತ್ತು ಐದು ವರ್ಷಗಳಾಗಿರತಕ್ಕದ್ದು.

**9. ವರ್ಗಾವಣೆ ಸಮಯದಲ್ಲಿ ಕುಂದುಕೊರತೆಗಳ ನಿವಾರಣೆ.-** ಸಾರ್ವಜನಿಕ ಶಿಕ್ಷಣದ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಇಲಾಖಾ ಅಧಿಕಾರಿಯನ್ನು ಆತನ ಅಧಿಕಾರವ್ಯಾಪ್ತಿಯೊಳಗಿನ ಎಲ್ಲಾ ವರ್ಗಾವಣೆ ಪ್ರಕ್ರಿಯೆಯನ್ನು ಮೇಲ್ವಿಚಾರಿಸಲು ಮತ್ತು ಯಾವುದೇ ಲಿಖಿತ ದೂರುಗಳನ್ನು ಆಲಿಸಲು ಕುಂದುಕೊರತೆ ನಿವಾರಣೆ ಅಧಿಕಾರಿಯನ್ನಾಗಿ ಗೊತ್ತುಪಡಿಸತಕ್ಕದ್ದು ಹಾಗೂ ಏಳು ದಿನಗಳ ಒಳಗಾಗಿ ಆದೇಶಗಳನ್ನು ಹೊರಡಿಸತಕ್ಕದ್ದು. ಕುಂದುಕೊರತೆ ನಿವಾರಣೆ ಅಧಿಕಾರಿಯು ಹೊರಡಿಸಿದ ಆದೇಶದ ವಿರುದ್ಧ ಮೇಲ್ಮನವಿಯನ್ನು ಬೆಳಗಾವಿ ವಿಭಾಗಕ್ಕಾಗಿ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ, ಧಾರವಾಡ; ಕಲಬುರಗಿ ವಿಭಾಗಕ್ಕಾಗಿ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ, ಕಲಬುರಗಿ ಮತ್ತು ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕಾಗಿ ನಿರ್ದೇಶಕ (ವರ್ಗಾವಣೆ ಘಟಕ), ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು ಇವರುಗಳಲ್ಲಿ ಮಾಡತಕ್ಕದ್ದು. ಯಾವುದೇ ಅಧಿಕಾರಿಯು ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಯಾವುದೇ ಉಪಬಂಧಗಳ ಉಲ್ಲಂಘಿಸಿದ ಸಂದರ್ಭದಲ್ಲಿ, ಅದನ್ನು ಸಂಬಂಧಿತ ಶಿಸ್ತು ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು.

**10. ಸಮರ್ಪಕ ಮರುಹಂಚಿಕೆ; ವಲಯವಾರು ವರ್ಗಾವಣೆಗಳಿಂದ ವಿನಾಯಿತಿಗಳು ಮತ್ತು ಕೋರಿಕೆ ವರ್ಗಾವಣೆಗಳಿಗೆ ಆದ್ಯತೆ.-** (1) ಸಮರ್ಪಕ ಮರುಹಂಚಿಕೆ; ವಲಯವಾರು ವರ್ಗಾವಣೆಗಳಿಂದ ವಿನಾಯಿತಿಗಳು ಮತ್ತು ಕೋರಿಕೆ ವರ್ಗಾವಣೆಗಳಿಗೆ ಆದ್ಯತೆಯು (2) ರಿಂದ (5)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು ಈ ಮುಂದಿನಂತಿದೆ,-

(i) ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ (spouse) ಅಥವಾ ಮಕ್ಕಳು, ಶಿಕ್ಷಕನು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನೊಳಗೆ ಚಿಕಿತ್ಸೆಯು ಲಭ್ಯವಿಲ್ಲದ ಕೊನೆಯಹಂತದ (terminal) ಖಾಯಿಲೆ ಅಥವಾ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ;

(ii) ಅಂಗವೈಕಲ್ಯಗಳುಳ್ಳ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ (2016ರ ಕೇಂದ್ರ ಅಧಿನಿಯಮ 49) 2ನೇ ಪ್ರಕರಣದ (ಆರ್) ಖಂಡದಲ್ಲಿ ಪರಿಭಾಷಿಸಿದಂತೆ ಗುರುತಿಸಿದ ಮಟ್ಟದ ಅಂಗವೈಕಲ್ಯದ (Bench mark disability) ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ (Spouse) ಅಥವಾ ಮಕ್ಕಳು;

(iii) 12 ವರ್ಷಗಳ ಒಳಗಿನ ಅವಲಂಬಿತ ಮಕ್ಕಳನ್ನು ಹೊಂದಿರುವ ವಿಧವ ಅಥವಾ ವಿಧುರ ಅಥವಾ ವಿಚ್ಛೇದಿತ ಶಿಕ್ಷಕ;

(iv) ಭಾರತೀಯರ ಕ್ಷಣಾದಳಗಳು ಅಥವಾ ಅರೆ ಮಿಲಿಟರಿ ದಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೈನಿಕ ಅಥವಾ ನಿವೃತ್ತಿ ಹೊಂದಿದ ಅಥವಾ ಶಾಶ್ವತವಾಗಿಅಂಗವಿಕಲರಾದ ಅಥವಾ ಮೃತ ಸೈನಿಕರ ಪತಿ ಅಥವಾ ಪತ್ನಿಯಾಗಿರುವ (Spouse) ಶಿಕ್ಷಕ;

(v) ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರ ಪತಿ ಅಥವಾ ಪತ್ನಿಯಾಗಿರುವ (Spouse) ಶಿಕ್ಷಕ;

(vi) ಮಹಿಳಾ ಶಿಕ್ಷಕರ ಸಂದರ್ಭದಲ್ಲಿ ಐವತ್ತು ವರ್ಷಗಳು ಮತ್ತು ಪುರುಷ ಶಿಕ್ಷಕರ ಸಂದರ್ಭದಲ್ಲಿ ಐವತ್ತೈದು ವರ್ಷಗಳನ್ನು ಮೀರಿದ ಶಿಕ್ಷಕರು;

(vii) ಗರ್ಭಿಣಿ ಶಿಕ್ಷಕಿ ಅಥವಾ ಒಂದು ವರ್ಷದ ಒಳಗಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ.

(2) (i) ರಿಂದ (iv)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು ಸಮರ್ಪಕ ಮರುಹಂಚಿಕೆ ಮತ್ತು ವಲಯವಾರು ವರ್ಗಾವಣೆ ಎರಡಕ್ಕೂ ಹಾಗೂ ಕೋರಿಕೆ ವರ್ಗಾವಣೆ ಅಡಿಯಲ್ಲಿ ಆದ್ಯತೆಗೆ ಕೂಡಾ ಅರ್ಹರಾಗತಕ್ಕದ್ದು. ಆದ್ಯತೆಗಳನ್ನು ಶಿಕ್ಷಕನ ಸೇವಾಅವಧಿಯಲ್ಲಿ ಒಂದು ಬಾರಿ ಮಾತ್ರವೇ ಕ್ಲೇಮು ಮಾಡತಕ್ಕದ್ದು.

(3) (i) ರಿಂದ (iv)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳನ್ನು ವಿಶೇಷ ಪ್ರವರ್ಗಗಳೆಂದು ವರ್ಗೀಕರಿಸಲಾಗಿದೆ. ಈ ಪ್ರವರ್ಗಗಳ ಅಡಿಯಲ್ಲಿ ಮಾಡಲಾದ ವರ್ಗಾವಣೆಗಳನ್ನು 7ನೇ ಪ್ರಕರಣದ ಅಡಿಯಲ್ಲಿನಿರ್ದಿಷ್ಟಪಡಿಸಿದ ಶೇಕಡಾ ಹದಿನೈದರ ವರ್ಗಾವಣೆ ಮಿತಿಗಳ ಅಡಿಯಲ್ಲಿ ಲೆಕ್ಕ ಹಾಕತಕ್ಕದ್ದಲ್ಲ.

(4) (vi) ಮತ್ತು (vii)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು ಸಮರ್ಪಕ ಮರುಹಂಚಿಕೆ ಮತ್ತು ವಲಯವಾರು ವರ್ಗಾವಣೆಗಳಅಡಿಯಲ್ಲಿನ ವಿನಾಯತಿಗಳಿಗೆಮಾತ್ರವೇ ಅರ್ಹರಾಗತಕ್ಕದ್ದು.

(5) (v)ನೇ ಪ್ರವರ್ಗದ ಅಡಿಯಲ್ಲಿ ಬರುವ ಶಿಕ್ಷಕರಿಗೆ ಕೋರಿಕೆ ವರ್ಗಾವಣೆಯ ಅವಧಿಯಲ್ಲಿ ಪ್ರಾಶಸ್ತ್ಯವನ್ನು ನೀಡತಕ್ಕದ್ದು. ಶಿಕ್ಷಕನು, ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಲ್ಲದೆ ಬೇರೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿಗ ಮಾತ್ರವೇ ವರ್ಗಾವಣೆಯನ್ನು ಕೋರುವುದಕ್ಕೆ ಅನುಮತಿಸಬಹುದು. ಇಬ್ಬರೂ ಅದೇ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಆಗ ಆದ್ಯತೆಯ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಅವರು ಅರ್ಹರಾಗತಕ್ಕದ್ದಲ್ಲ:

ಪರಂತು, ಸಮರ್ಪಕ ಮರು ಹಂಚಿಕೆ ಮತ್ತು ವಲಯವಾರು ವರ್ಗಾವಣೆಗಳ ಅವಧಿಯಲ್ಲಿ ಹೆಚ್ಚುವರಿ ಶಿಕ್ಷಕನನ್ನು ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನೊಳಗೆ ಸ್ಥಳನಿಯುಕ್ತಿಗೊಳಿಸತಕ್ಕದ್ದು.

**11. ಮ್ಯಾನ್ಯುಯಲ್ ಕೌನ್ಸಿಲಿಂಗ್‌ನ ನಿಷೇಧ.-** ಮ್ಯಾನ್ಯುಯಲ್ ಕೌನ್ಸಿಲಿಂಗ್ ನ ಮೂಲಕ ಕೈಗೊಂಡ ವರ್ಗಾವಣೆಗಳು ನಿಷೇಧವಾಗತಕ್ಕದ್ದು ಮ್ಯಾನ್ಯುಯಲ್ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗಳನ್ನು ಮಾಡಿದಲ್ಲಿ, ಅವುಗಳನ್ನು ಅನೂರ್ಜಿತ ಮತ್ತು ಶೂನ್ಯವೆಂದು ಪರಿಗಣಿಸತಕ್ಕದ್ದು ಮತ್ತು ಅಂಥ ವರ್ಗಾವಣೆಗಳಿಗೆ ಹೊಣೆಗಾರರಾದ ಅಧಿಕಾರಿಗಳು ಶಿಸ್ತುಕ್ರಮಕ್ಕೆ ಗುರಿಯಾಗತಕ್ಕದ್ದು.

12. ದಂಡಗಳು.-ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಯಾವೊಬ್ಬ ಅಧಿಕಾರಿ ಅಥವಾ ಸಿಬ್ಬಂದಿಯು ಕ್ರಮವಹಿಸಿದರೆ ಅಥವಾ ಆದೇಶವನ್ನು ಮಾಡಿದಲ್ಲಿ, ಅಂಥ ಅಧಿಕಾರಿ ಅಥವಾ ಸಂದರ್ಭಾನುಸಾರವಾಗಿ ಸಿಬ್ಬಂದಿಯು ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಅಡಿಯಲ್ಲಿ ಶಿಸ್ತಿನ ಕ್ರಮಕ್ಕೆ ಗುರಿಯಾಗತಕ್ಕದ್ದು.

**13. ಅಪರಾಧಗಳ ಸಂಜ್ಞೇಯತೆ.-** ಯಾವ ನ್ಯಾಯಾಲಯವೂ, ಸರ್ಕಾರಿ ರಾಜ್ಯಪತ್ರದಲ್ಲಿ ಈ ಬಗ್ಗೆ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರದಿಂದ ಅಧಿಕಾರಪಡೆದ ಒಬ್ಬ ಅಧಿಕಾರಿಯು ಲಿಖಿತ ದೂರಿನ ಮೇಲಲ್ಲದೆ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

**14. ಇತರ ಕಾನೂನುಗಳ ಮೇಲೆ ಅಧಿನಿಯಮದ ಅಧ್ಯಾರೋಹಿ ಪರಿಣಾಮ.-** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾಗಿ ಏನೇ ಇದ್ದರೂ ಅಧ್ಯಾರೋಹಿ ಪರಿಣಾಮವನ್ನು ಹೊಂದಿರತಕ್ಕದ್ದು.

**15. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವ ಆದೇಶವನ್ನೂ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಮಾಡತಕ್ಕದ್ದಲ್ಲ.

**16. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.-** ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಮೂದನ್ನು ಸೇರಿಸಬಹುದು, ಮಾರ್ಪಡಿಸಬಹುದು ಅಥವಾ ತೆಗೆದುಹಾಕಬಹುದು.

**17. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ, ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಕೈಗೊಳ್ಳಲು ಅವಕಾಶವಿರತಕ್ಕದ್ದಲ್ಲ.

**18. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆ ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದ ತರುವಾಯ ನಿಯಮವನ್ನು ರಚಿಸಿದ ಕಾರಣಗಳನ್ನು ನಿರ್ದಿಷ್ಟವಾಗಿ ತಿಳಿಸುವ ಹೇಳಿಕೆಯೊಂದನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು ಮತ್ತು (3)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಮಾರ್ಪಾಟಿಗೊಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವು, ಈ ಅಧಿನಿಯಮದ ಅಡಿಯಲ್ಲಿ ಅದು ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಿದ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

**19. ತಾತ್ಕಾಲಿಕ ಉಪಬಂಧಗಳು.-** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ಹಾಗೂ ಯಾವ ವಿಷಯಗಳ ಮುಂದುವರಿಕೆಗಾಗಿ ಈ ಅಧಿನಿಯಮವನ್ನು ಜಾರಿಗೆ ತರಲಾಗಿದೆಯೋ ಅಥವಾ ಉಪಬಂಧ ಕಲ್ಪಿಸಲಾಗಿದೆಯೋ ಅದಕ್ಕೆ ಸಂಬಂಧಪಟ್ಟ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 ರ (2007ರ ಕರ್ನಾಟಕ ಅಧಿನಿಯಮ 29) ಅಡಿಯಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ರಚಿಸಿದ ಅಥವಾ ಹೊರಡಿಸಿದ ಯಾವುದೇ

ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕಗಳು ಅವು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯದಿಂದ ಅಥವಾ ತೆಗೆದುಕೊಂಡ ಯಾವುದೇ ಕ್ರಮದಿಂದ ಅಥವಾ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕದಿಂದ ರದ್ದಾದ ಹೊರತು ಮತ್ತು ರದ್ದಾಗುವವರೆಗೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ಅವುಗಳನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ರಚಿಸಿದ್ದರೆ ಅಥವಾ ಹೊರಡಿಸಿದ್ದರೆ ಅಥವಾ ನೇಮಿಸಿದ್ದರೆ, ಹೇಗೋ ಹಾಗೆ ಜಾರಿಯಲ್ಲಿ ಮುಂದುವರಿಯತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು.

**20. ನಿರಸನ ಮತ್ತು ಉಳಿಸುವಿಕೆಗಳು.-** ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಅಥವಾ ಪ್ರಾಂಶುಪಾಲರಿಗೆ ಸಂಬಂಧಿಸಿದ ಉಪಬಂಧಗಳನ್ನು ಹೊರತುಪಡಿಸಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ನ್ನು (2007ರ ಕರ್ನಾಟಕ ಅಧಿನಿಯಮ 29) ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು ,-

(ಎ) ಸದರಿ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದಕ್ಕಾದರೂ ಅಥವಾ ಕೈಗೊಂಡ ಯಾವುದೇ ಕ್ರಮಕ್ಕಾದರೂ; ಅಥವಾ

(ಬಿ) ಸದರಿ ಅಧಿನಿಯಮದ ಪೂರ್ವ ಕಾರ್ಯಾಚರಣೆ ಅಥವಾ ಅದರಡಿಯಲ್ಲಿ ಯುಕ್ತವಾಗಿ ಏನನ್ನೋ ಮಾಡಿದ್ದರೂ ಅಥವಾ ಬಾಧಿತವಾಗಿದ್ದರೂ; ಅಥವಾ

(ಸಿ) ಸದರಿ ಅಧಿನಿಯಮದ ಅಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಲಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆ ಯಿದ್ದರೂ ; ಅಥವಾ

(ಡಿ) ಸದರಿ ಅಧಿನಿಯಮದ ಅಡಿಯಲ್ಲಿ ಎಸಗಿದ ಯಾವುದೇ ಅಪರಾಧದ ಸಂಬಂಧದಲ್ಲಿ ವಿಧಿಸಿದ ಯಾವುದೇ ದಂಡ ಅಥವಾ ಶಿಕ್ಷೆಯಿದ್ದರೂ,

- ಅವುಗಳಿಗೆ ಪರಿಣಾಮ ಬೀರತಕ್ಕದ್ದಲ್ಲ:

ಮತ್ತು ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ III) 6ನೇ ಪ್ರಕರಣದ ಉಪಬಂಧಗಳು ಸದರಿ ಅಧಿನಿಯಮದ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

**ಅನುಸೂಚಿ**

**(2 ಮತ್ತು 16ನೇ ಪ್ರಕರಣ ನೋಡಿ)**

| ಕ್ರಮ ಸಂಖ್ಯೆ | ಶಿಕ್ಷಕರ ವೃಂದ |
|---|---|
| I | **ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಹುದ್ದೆಗಳು** |
| 1. | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ |
| 2 | ಮಾದರಿ ಹಿರಿಯ ಪ್ರಾಥಮಿಕ ಶಾಲೆ/ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಿರಿಯ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ |
| 3 | ಪ್ರಾಥಮಿಕ ಶಾಲಾ ಸಹಾಯಕ ಉಪಾಧ್ಯಾಯ/ ಉಪಾಧ್ಯಾಯಿನಿ ಈ ಮುಂದಿನ ಪ್ರವರ್ಗಗಳನ್ನು ಒಳಗೊಂಡಿರುತ್ತದೆ:<br>(i) ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿವರೆಗೆ)<br>(ii) ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿವರೆಗೆ) |
| 4 | ಸಂಗೀತ ಶಿಕ್ಷಕ |
| 5 | ದೈಹಿಕ ಶಿಕ್ಷಣ ಶಿಕ್ಷಕ |
| 6 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ/ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚಿತ್ರಕಲೆ ಶಿಕ್ಷಕ/ ಯಾವುದೇ ಇತರ ವಿಶೇಷ |

| | |
|---|---|
| | ಶಿಕ್ಷಕರು |
| II | ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಹುದ್ದೆಗಳು: |
| 1. | ಸರ್ಕಾರಿ ಹಿರಿಯ ಪ್ರಾಥಮಿಕ / ವಿವಿಧೋದ್ದೇಶ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ ಮತ್ತು ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ/ ಸಂಯೋಜಿತ ಪದವಿ ಪೂರ್ವ ಕಾಲೇಜು/ ಕರ್ನಾಟಕ ಪಬ್ಲಿಕ್ ಶಾಲೆ/ ಸಂಯೋಜಿತ ಪ್ರೌಢ ಶಾಲೆಯ ಉಪ ಪ್ರಾಂಶುಪಾಲರನ್ನೂ ಒಳಗೊಂಡಂತೆ ಯಾವುದೇ ಹೆಸರಿನಿಂದ ಕರೆಯಲಾಗುವ ಸರ್ಕಾರಿ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ, ಇದು ಈ ಮುಂದಿನ ಹುದ್ದೆಗಳ ಪ್ರವರ್ಗಗಳನ್ನು ಒಳಗೊಳ್ಳುವುದು |
| 2 | ಸೆಕೆಂಡರಿ ಶಾಲಾ ಸಹಾಯಕ (ಗ್ರೇಡ್-I) |
| 3. | ಸೆಕೆಂಡರಿ ಶಾಲಾ ಸಹಾಯಕ (ಗ್ರೇಡ್-II) |
| 4. | ಈ ಮುಂದಿನ ಹುದ್ದೆಗಳ ಪ್ರವರ್ಗಗಳನ್ನು ಒಳಗೊಂಡಿರುವ ಸರ್ಕಾರಿ ಪ್ರೌಢಶಾಲೆ, ಸಂಯೋಜಿತ ಪದವಿ-ಪೂರ್ವ ಕಾಲೇಜು, ಸಂಯೋಜಿತ ಪ್ರೌಢಶಾಲೆಯಲ್ಲಿ ಪದವೀಧರ ಸಹಾಯಕ ಉಪಾಧ್ಯಾಯ/ ಉಪಾಧ್ಯಾಯಿನಿ, ಎಂದರೆ:-<br>(i) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಕಲಿಕಾ ಮಾಧ್ಯಮಗಳಲ್ಲಿ ಕಲಾ ಸಹಾಯಕ ಉಪಾಧ್ಯಾಯ;<br>(ii) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಕಲಿಕಾ ಮಾಧ್ಯಮಗಳಲ್ಲಿ ಭೌತಿಕ ವಿಜ್ಞಾನದಲ್ಲಿ ಸಹಾಯಕ ಉಪಾಧ್ಯಾಯ;<br>(iii) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಕಲಿಕಾ ಮಾಧ್ಯಮಗಳಲ್ಲಿ ಜೀವಶಾಸ್ತ್ರ ವಿಜ್ಞಾನದಲ್ಲಿ ಸಹಾಯಕ ಉಪಾಧ್ಯಾಯ,<br>(iv) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಭಾಷಾ ಸಹಾಯಕ. |
| 5. | ಸರ್ಕಾರಿ ಪ್ರೌಢಶಾಲೆಗಳು ಮತ್ತು ಸಂಯೋಜಿತ ಪದವಿ-ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕ |
| 6. | ನಾಟಕ ಶಿಕ್ಷಕ |
| 7. | ನೃತ್ಯ ಶಿಕ್ಷಕ |
| 8. | ಚಿತ್ರಕಲೆ ಶಿಕ್ಷಕ |
| 9. | ಸಂಗೀತ ಶಿಕ್ಷಕ |
| 10. | ಎಲ್ಲಾ ವಿಶೇಷ ಶಿಕ್ಷಕರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಕೆ.ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

PARLIAMENTARY AFFAIRS AND LEGISLAITON SECRETARIAT

**NOTIFICATION**

**No. DPAL 12 SHASANA 2020, Bengaluru, dated: 27.03.2020**

Ordered that the translation of ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020 (2020ರ ಕರ್ನಾಟಕ ಅಧಿನಿಯಮ ಸಂಖ್ಯೆ:04) in the English language, be published as authorised by the Governor of Karnataka under clause (3) of Article 348 of the constitution of India in the Karnataka Gazette for general information.

The following translation of ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020 (2020ರ ಕರ್ನಾಟಕ ಅಧಿನಿಯಮ ಸಂಖ್ಯೆ:04) in the English language is published in the Official Gazette under the authority of the Governor of Karnataka under clause (3) of Article 348 of the Constitution of India.

**KARNATAKA ACT NO. 04 OF 2020**

**(First Published in the Karnataka Gazette Extra-ordinary on the 27th day of March, 2020)**

## THE KARNATAKA STATE CIVIL SERVICES (REGULATION OF TRANSFER OF TEACHERS) ACT, 2020

**(Received the assent of the Governor on the 26th day of March, 2020)**

An Act to provide for regulation of transfer of teachers so as to ensure the availability of teachers in Government Primary school sand Government High schools.

Whereas it is expedient to provide for regulation of transfer of teachers so as to ensure the availability of teachers in Government Primary Schools and Government High schools and for the matters connected therewith or incidental thereto;

Be it enacted by the Karnataka State Legislature in the seventy first year of the Republic of India, as follows:-

**1.Short title and commencement.-**(1) This Act may be called the Karnataka State Civil Services (Regulation of transfer of teachers) Act, 2020.

(2) It shall come into force on such date as the State Government may by notification, appoint.

**2. Definitions.-**In this Act, unless the context otherwise requires,-

(a) "**Appointment**" means appointment by direct recruitment, by absorption or by promotion;

(b) "**Appointing authority**" means the authority competent to make appointment to the post of a teacher;

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಪಿ 8 ಇಟಿಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
6ನೇ ಮಹಡಿ, ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 22/07/2020.

**ಅಧಿಸೂಚನೆ**

**ಕರ್ನಾಟಕ ಅಧಿಸೂಚನೆ ಸಂಖ್ಯೆ: ಇಪಿ 8 ಇಟಿಆರ್ 2020, ದಿನಾಂಕ; 09–07–2020 ರ**

**ಕನ್ನಡ ಅನುವಾದ ದಿನಾಂಕ: 17–06–2020.**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 4)ರ 18ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಮಾಡಲು ಉದ್ದೇಶಿಸಿರುವ ಈ ಮುಂದಿನ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 18ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅದರಿಂದ ಭಾದಿತರಾಗಲು ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ದಿನಾಂಕ: 09–07–2020 ರಂದು ಪ್ರಕಟಿಸಿದೆ, ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ; ಮತ್ತು ಸಾರ್ವಜನಿಕರಿಂದ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿದೆ;

ಈಗ, ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 ರ(2020 ರ ಕರ್ನಾಟಕ ಅಧಿನಿಯಮ ಸಂಖ್ಯೆ 4) 18ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿರುತ್ತದೆ, ಎಂದರೆ:–

**ನಿಯಮಗಳು**

1. **ಶೀರ್ಷಿಕೆ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಅವು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**– (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) 'ಅಧಿನಿಯಮ' ಎಂದರೆ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 4);

(ಬಿ) 'ಮಕ್ಕಳು' ಎಂದರೆ, ಶಿಕ್ಷಕನ ಅವಲಂಬಿತ ಮತ್ತು ಅವಿವಾಹಿತ ಮಕ್ಕಳು;

(ಸಿ) 'ಪ್ರಕರಣ' ಎಂದರೆ, ಅಧಿನಿಯಮದ ಪ್ರಕರಣ;

Scanned with CamScanner

(ಡಿ) 'ಖಾಲಿ ಹುದ್ದೆಗಳು' ಎಂದರೆ, ಸಂದರ್ಭಾನುಸಾರ, ಸರ್ಕಾರದಿಂದ ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ನಿಬಂಧನೆಗನುಸಾರವಾಗಿ ಖಾಲಿ ಇರುವ ಹುದ್ದೆ ಮತ್ತು ಅಗತ್ಯಪಡಿಸಿರುವ ನಿರ್ದಿಷ್ಟ ಪ್ರವರ್ಗ ಅಥವಾ ಆ ವಿಷಯದ ಶಿಕ್ಷಕ ಹುದ್ದೆ.

(ಇ) 'ವಲಯ' ಎಂದರೆ.-

(i) ವಲಯ-ಎ. ಎಲ್ಲಾ ಮಹಾನಗರ-ಪಾಲಿಕೆಗಳು, ನಗರ-ಪಾಲಿಕೆಗಳು, ನಗರ-ಸಭೆ, ಪುರ-ಸಭೆ, ಪಟ್ಟಣ-ಪಂಚಾಯಿತಿ, ಅಧಿಸೂಚಿತ ಪ್ರದೇಶಗಳು, ಪಟ್ಟಣ ಪಂಚಾಯತಿ ಪ್ರದೇಶಗಳು ಮತ್ತು ತಾಲ್ಲೂಕು ಕೇಂದ್ರ ಸ್ಥಾನದ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳನ್ನು ಒಳಗೊಳ್ಳುತ್ತದೆ.

(ii) ವಲಯ-ಬಿ. ಬೆಂಗಳೂರು ನಗರ ಎಲ್ಲೆ ವ್ಯಾಪ್ತಿಯಿಂದ 20 ಕೀ.ಮಿ, ಇತರ ನಗರಪಾಲಿಕೆ ವ್ಯಾಪ್ತಿಯಿಂದ 15 ಕೀ.ಮಿ. ಜಿಲ್ಲಾ ಕೇಂದ್ರ ಸ್ಥಾನದಿಂದ, ನಗರಪಾಲಿಕೆ ವ್ಯಾಪ್ತಿಯಿಂದ 10 ಕೀ. ಮೀ. ಮತ್ತು ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ, ಅಧಿಸೂಚಿತ ಪ್ರದೇಶಗಳು
ತಾಲ್ಲೂಕು ಕೇಂದ್ರ ಕಚೇರಿಗಳಿಂದ 5 ಕೀ. ಮೀ. ವ್ಯಾಪ್ತಿಯೊಳಗೆ ಬರುವ ಪ್ರದೇಶಗಳನ್ನು ಒಳಗೊಳ್ಳುತ್ತದೆ.

(iii) ವಲಯ-ಸಿ. ಇದು, ವಲಯ-ಎ ಮತ್ತು ವಲಯ-ಬಿ, ಅಡಿಯಲ್ಲಿ ಬರುವ ಪ್ರದೇಶಗಳನ್ನು ಹೊರತುಪಡಿಸಿದ ಪ್ರದೇಶಗಳನ್ನು ಒಳಗೊಳ್ಳುತ್ತದೆ.

(2) ಈ ನಿಯಮಗಳಲ್ಲಿ ಬಳಸಿದ ಆದರೆ ಪರಿಭಾಷಿಸದೆ ಇರುವ ಪದಗಳು ಮತ್ತು ಪದಾವಳಿಗಳು, ಅಧಿನಿಯಮದಲ್ಲಿ ಅವುಗಳಿಗೆ ನೀಡಿದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

3. **ಸಕ್ಷಮ ಪ್ರಾಧಿಕಾರ.-** ಸಕ್ಷಮ ಪ್ರಾಧಿಕಾರ, ಸೇವೆ ಸಲ್ಲಿಸುತ್ತಿರುವ ಸಮಾಂತರ ಹುದ್ದೆಗಳು ಒಳಗೊಂಡು ಶಿಕ್ಷಕರ ವರ್ಗಾವಣೆಗೆ ಸಕ್ಷಮ ಪ್ರಾಧಿಕಾರ, ಮುಂದಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

**ಕೋಷ್ಟಕ**

| **ಶಿಕ್ಷಕರ ಪ್ರವರ್ಗ** | **ಸಕ್ಷಮ ಪ್ರಾಧಿಕಾರ** | |
|---|---|---|
| | **ಜಿಲ್ಲೆಯ ಒಳಗೆ ವರ್ಗಾವಣೆ** | **ಜಿಲ್ಲೆಯ ಹೊರಗೆ ವರ್ಗಾವಣೆ** |
| ಮುಖ್ಯೋಪಾಧ್ಯಾಯರು ಒಳಗೊಂಡು ಪ್ರಾಥಮಿಕ ಶಾಲಾ ಶಿಕ್ಷಕ | ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು (ಆಡಳಿತ) | (1) ಅದೇ ವಿಭಾಗದೊಳಗೆ ವರ್ಗಾವಣೆಗೆ: ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ವಿಭಾಗೀಯ ಜಂಟಿ ನಿರ್ದೇಶಕರು<br>(2) ವಿಭಾಗ ಹೊರಗೆ ವರ್ಗಾವಣೆಗೆ: ನಿರ್ದೇಶಕರು (ಪ್ರಾಥಮಿಕ ಶಿಕ್ಷಣ). |
| ಪ್ರೌಢಶಾಲಾ ಶಿಕ್ಷಕ | ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣದ ಇಲಾಖೆ ಉಪನಿರ್ದೇಶಕರು (ಆಡಳಿತ) | (1) ವಿಭಾಗದ ವ್ಯಾಪ್ತಿಯೊಳಗೆ ವರ್ಗಾವಣೆಗೆ; ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ವಿಭಾಗೀಯ ಜಂಟಿ ನಿರ್ದೇಶಕರು.<br>(2) ವಿಭಾಗದ ಹೊರಗೆ ವರ್ಗಾವಣೆಗೆ: ನಿರ್ದೇಶಕರು (ಪ್ರೌಢ ಶಿಕ್ಷಣ) ಬೆಂಗಳೂರು |
| ಪ್ರೌಢ ಶಾಲೆ ಮುಖ್ಯ ಶಿಕ್ಷಕರ ಮತ್ತು ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರೌಢ | | (1) ವಿಭಾಗದೊಳಗೆ ವರ್ಗಾವಣೆಗೆ.-<br>(ಎ) ಬೆಂಗಳೂರು ಮತ್ತು ಮೈಸೂರು ವಿಭಾಗಗಳು: ಜಂಟಿ ನಿರ್ದೇಶಕರು (ಆಡಳಿತ) ಬೆಂಗಳೂರು:<br>(ಬಿ) ಬೆಳಗಾವಿ ವಿಭಾಗ: ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಅಪರ ಆಯುಕ್ತರ |

Scanned with CamScanner

| | | |
|---|---|---|
| ಶಿಕ್ಷಣದ ಇತರ ಹುದ್ದೆಗಳು | | ಕಚೇರಿ ಧಾರವಾಡ;<br>(ಸಿ) ಕಲಬುರಗಿ ವಿಭಾಗ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಚೇರಿ.<br>(2) ವಿಭಾಗದ ಹೊರಗಿನ ವರ್ಗಾವಣೆಗೆ ಜಂಟಿ ನಿರ್ದೇಶಕರು (ಆಡಳಿತ) ಬೆಂಗಳೂರು. |

**ಟಿಪ್ಪಣಿ:** ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಅಥವಾ ಸರ್ಕಾರದಿಂದ ಅಧಿಸೂಚಿಸಲಾದ ಯಾರೇ ಇತರ ಅಧಿಕಾರಿ, ಸೇವೆ ಸಲ್ಲಿಸುತ್ತಿರುವ ಸಮನಾದ ಹುದ್ದೆಗಳು ಒಳಗೊಂಡು ಮೇಲಿನ **ಕೋಷ್ಟಕದಲ್ಲಿ** ನಿರ್ದಿಷ್ಟಪಡಿಸಿದ **ಶಿಕ್ಷಕರ** ಪ್ರವರ್ಗಗಳ ವರ್ಗಾವಣೆಗೆ 'ಶಿಕ್ಷಕರ ಪ್ರಕ್ರಿಯೆ ನಿಯಂತ್ರಣಾಧಿಕಾರಿ' ಆಗಿರತಕ್ಕದ್ದು.

**4. ಶಿಕ್ಷಕರ ವೇಯ್ಟೆಡ್ ಅಂಕಗಳ (ಸೇವಾ ಅಂಕಗಳ) ಲೆಕ್ಕಾಚಾರ.**– (ಎ) **ಶಿಕ್ಷಕರ ವರ್ಗಾವಣೆ ಉದ್ದೇಶಕ್ಕಾಗಿ**=(ಸಿ ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ x3ಅಂಕ) + (ಬಿ ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ x2ಅಂಕ) + (ಎ ವಲಯದಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ x1ಅಂಕ)+ (**ಮೂರು ವರ್ಷಗಳಿಗೆ** ಮೀರಿ ಹಾಲಿ ಶಾಲೆಯಲ್ಲಿ ಸಲ್ಲಿಸಿದ ಸೇವೆಯ ವರ್ಷಗಳ ಸಂಖ್ಯೆ x1ಅಂಕ).

**ಟಿಪ್ಪಣಿ.**– ಆರು ತಿಂಗಳ (180 ದಿನಗಳ) ಹಾಗೂ ಮೇಲಿನ ಸೇವೆಯನ್ನು ಒಂದು ಪೂರ್ಣ ವರ್ಷವೆಂದು ಪರಿಗಣಿಸತಕ್ಕದ್ದು. ಆರು ತಿಂಗಳಿಗಿಂತ (180 ದಿನಗಳು) ಕಡಿಮೆ ಸೇವೆಯನ್ನು 'ಶೂನ್ಯ' ವರ್ಷದ ಸೇವೆಯೆಂದು ಪರಿಗಣಿಸತಕ್ಕದ್ದು.

(ಬಿ) ಸೇವಾ ಅಂಕಗಳನ್ನು (ವೇಯ್ಟೆಡ್ ಅಂಕಗಳು) ಇಲಾಖೆಯ ವೆಬ್‌ಸೈಟ್‌ನಲ್ಲಿ, **ಶಿಕ್ಷಕರಿಗೆ** ಸಂಬಂಧಪಟ್ಟ ವೇತನ ಬಟವಾಡೆ ಮಾಡುವ ಅಧಿಕಾರಿಯು, (ಇದರಲ್ಲಿ ಇನ್ನು ಮುಂದೆ ಡಿಡಿಓ ಎಂದು ಉಲ್ಲೇಖಿಸಲಾಗಿದೆ) ಹಿಂದಿನ ವರ್ಷದ ಡಿಸೆಂಬರ್ ತಿಂಗಳವರೆಗೂ ನವೀಕರಿಸಿದ ಶಿಕ್ಷಕನ ಸೇವಾ ವಿವರಗಳ ಆಧಾರದ ಮೇಲೆ ಗಣನೆಗೆ ತೆಗೆದುಕೊಳ್ಳತಕ್ಕದ್ದು.

(ಸಿ) ಯಾರೇ ಇಬ್ಬರು **ಶಿಕ್ಷಕರ** ಅಂಕ, ಒಂದೇ ಆಗಿದ್ದರೆ, ಆಗ **ಜ್ಯೇಷ್ಠತೆಯನ್ನು** ಜನ್ಮ ದಿನಾಂಕದ ಆಧಾರದ ಮೇಲೆ ನಿರ್ಧರಿಸುವುದು. ಜನ್ಮ ದಿನಾಂಕವು ಸಹ ಒಂದೇ ಆಗಿದ್ದರೆ ಆಗ ಸೇವೆಗೆ ಸೇರಿದ ದಿನಾಂಕದ ಆಧಾರದ ಮೇಲೆ ಜ್ಯೇಷ್ಠತೆಯನ್ನು ನಿರ್ಧರಿಸುವುದು.

(ಡಿ) ಇಲಾಖೆಯು, ತನ್ನ ವೆಬ್‌ಸೈಟ್‌ನಲ್ಲಿ, ಪ್ರತಿಯೊಂದು ವರ್ಷದ ಜನವರಿಯ ಮೊದಲ ಹದಿನೈದು ದಿನದಲ್ಲಿ ಎಲ್ಲಾ ಶಿಕ್ಷಕರ ವೇಯ್ಟೆಡ್ ಅಂಕಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸತಕ್ಕದ್ದು. ಎಲ್ಲಾ ಶಿಕ್ಷಕರು, ಕೃಪಾಂಕಗಳಲ್ಲಿ ಯಾವುದೇ ವ್ಯತ್ಯಾಸಗಳು ಉಂಟಾದ ಸಂದರ್ಭಗಳಲ್ಲಿ ಅವರ ಸೇವಾ ವಿವರಗಳನ್ನು ಸರಿಪಡಿಸುವುದಕ್ಕಾಗಿ ಅರ್ಜಿ ಸಲ್ಲಿಸುವ ಆಯ್ಕೆಯನ್ನು ಹೊಂದಿರತಕ್ಕದ್ದು. ಸರಿಪಡಿಸುವುದಕ್ಕಾಗಿ ಅರ್ಜಿಯನ್ನು, ಸಿಂಧುವಾದ ದಸ್ತಾವೇಜುಗಳೊಂದಿಗೆ ಸಂಬಂಧಪಟ್ಟ ಡಿಡಿಓ ಗೆ ಸಲ್ಲಿಸತಕ್ಕದ್ದು. ಶಿಕ್ಷಕನು, ಸಿಂಧುವಾದ ದಸ್ತಾವೇಜುಗಳನ್ನು ಹಾಜರುಪಡಿಸುವ ಮೂಲಕ ಇತರ ಶಿಕ್ಷಕರ ಕೃಪಾಂಕಕ್ಕೆ ಆಕ್ಷೇಪಣೆಯನ್ನು ಸಹ ಸಲ್ಲಿಸಬಹುದು. ಸರಿಪಡಿಸುವುದಕ್ಕಾಗಿ ಅಥವಾ ಆಕ್ಷೇಪಣೆಗಳಿಗಾಗಿ ಸಲ್ಲಿಸುವ ಅರ್ಜಿಯನ್ನು ಜನವರಿ ಮುಕ್ತಾಯವರೆಗೂ ಸಲ್ಲಿಸತಕ್ಕದ್ದು. ಜನವರಿತಿಂಗಳ ನಂತರ ಸರಿಪಡಿಸುವುದಕ್ಕಾಗಿ ಅಥವಾ ಆಕ್ಷೇಪಣೆಗಾಗಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ.

(ಇ) ಸಂಬಂಧಪಟ್ಟ ಡಿಡಿಓ ಇವರು, ಸರಿಪಡಿಸುವ ಅಥವಾ ಆಕ್ಷೇಪಣೆಯ ಪ್ರತಿಯೊಂದು ಅರ್ಜಿಯನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು ಸಿಂಧುವಾದ ನ್ಯಾಯಸಮರ್ಥದೊಂದಿಗೆ ಅರ್ಜಿಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ

Scanned with CamScanner

ಮೂಲಕ ಅಗತ್ಯ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಅದನ್ನು ಫೆಬ್ರವರಿ 15 ರೊಳಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

(ಎಫ್) ಸಂಬಂಧಪಟ್ಟ ಡಿಡಿಪಿಐ ರವರು ಆದೇಶವನ್ನು ಹೊರಡಿಸಿದ ನಂತರ, ಆತನು ಅಂತಿಮ ಕ್ರಮಾಂಕಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು. ಒಂದು ಬಾರಿ ಅಂತಿಮ ಕ್ರಮಾಂಕಗಳನ್ನು ಪ್ರಕಟಿಸಿದಲ್ಲಿ ವರ್ಗಾವಣೆಯ ಪ್ರಕ್ರಿಯೆಯು ಮುಗಿಯುವವರೆಗೂ ಅದನ್ನು ಪರಿಗಣಿಸತಕ್ಕದ್ದು.

(ಜಿ) ಅನಿವಾರ್ಯ ಕಾರಣಗಳ ನಿಮಿತ್ತ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಮೇಲಿನ ಪ್ರಕ್ರಿಯೆ ಪೂರ್ಣಗೊಳ್ಳದಿದ್ದರೆ ಅದನ್ನು, ವರ್ಗಾವಣೆ ಸೂಚಿಯ ಪ್ರಕಟಣೆಯ ಮುನ್ನ ಪೂರ್ಣಗೊಳಿಸತಕ್ಕದ್ದು.

**5. ವರ್ಗಾವಣೆ ಪರಿಮಿತಿಗಳು.**- ಅಧಿನಿಯಮದ 7ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ವರ್ಗಾವಣೆ ಪರಿಮಿತಿಯು ಈ ಮುಂದಿನಂತೆ ಇರತಕ್ಕದ್ದು:-

| ಕ್ರ.ಸಂ | ವರ್ಗಾವಣೆ ವಿಧ | ಉಪ ಪರಿಮಿತಿ |
|---|---|---|
| 1 | ಕೋರಿಕೆ ವರ್ಗಾವಣೆ (ಜಿಲ್ಲೆಯ ಒಳಗೆ) | 7% |
| 2 | ವಲಯ ವರ್ಗಾವಣೆ | 4% |
| 3 | ಕೋರಿಕೆ ವರ್ಗಾವಣೆ (ವಿಭಾಗದ ಒಳಗೆ) | 2% |
| 4 | ಕೋರಿಕೆ ವರ್ಗಾವಣೆ (ವಿಭಾಗದ ಹೊರಗೆ) | 2% |

**6. ವರ್ಗಾವಣೆ (ಅನುಸೂಚಿ) ವೇಳಾಪಟ್ಟಿ**- (1) ವರ್ಗಾವಣೆಗಳನ್ನು, ಪ್ರತಿ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸಾಮಾನ್ಯವಾಗಿ ಕೈಗೊಳ್ಳತಕ್ಕದ್ದು.

(2) ಸರ್ಕಾರವು, ವರ್ಗಾವಣಾ ನಿಯಂತ್ರಣ ಅಧಿಕಾರಿಯ ಶಿಫಾರಸ್ಸುಗಳ ಮೇಲೆ, ವರ್ಗಾವಣೆ ಪ್ರಕ್ರಿಯೆಯನ್ನು ಅದು ಸೂಕ್ತವೆನಿಸಿದಲ್ಲಿ, (1) ನೇ ಉಪ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿ ನಂತರವೂ ವರ್ಗಾವಣೆಗಳನ್ನು ಕೈಗೊಳ್ಳಲು ಅನುಮತಿಸಬಹುದು.

(3) ಪ್ರತಿ ವರ್ಷ ವರ್ಗಾವಣೆ ಪ್ರಕ್ರಿಯೆ ನಿಯಂತ್ರಣ ಅಧಿಕಾರಿಯು, ಮುಂದಿನ ಪ್ರಮುಖ ಹಂತಗಳನ್ನು ಹೊಂದಿರುವ ವರ್ಗಾವಣೆ ಪ್ರಕ್ರಿಯೆಗಳಿಗೆ ವೇಳಾಪಟ್ಟಿಯನ್ನು ಪ್ರಕಟಿಸತಕ್ಕದ್ದು:-

(ಎ) ಜಿಲ್ಲೆಯೊಳಗೆ ಮಂಜೂರಾದ ಹುದ್ದೆಗಳ ಮರು ನಿಯುಕ್ತಿ ಕ್ರಮಗಳು;

(ಬಿ) ಖಾಲಿ ಹುದ್ದೆಗಳ ಅಧಿಸೂಚನೆ;

(ಸಿ) ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆಗೆ (Rationalization) ಅಥವಾ ವಲಯ ವರ್ಗಾವಣೆ ಅಡಿಯಲ್ಲಿ ವರ್ಗಾವಣೆ ಮಾಡಬೇಕಾದ ಶಿಕ್ಷಕರ ಕರಡು ಪಟ್ಟಿಯ ಅಧಿಸೂಚನೆ;

(ಡಿ) ಕೋರಿಕೆ ವರ್ಗಾವಣೆ ಮತ್ತು ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆಗೆ ಅಥವಾ ವಲಯ ವರ್ಗಾವಣೆಯಿಂದ ವಿನಾಯಿತಿಗೆ ಅರ್ಜಿಯನ್ನು ಆಹ್ವಾನಿಸುವುದು;

(ಇ) ವಿನಾಯಿತಿಗೊಳಿಸುವ ಶಿಕ್ಷಕರ ಪಟ್ಟಿ ಮತ್ತು ಆದ್ಯತೆ ನೀಡುವ ಶಿಕ್ಷಕರ ಪಟ್ಟಿಯನ್ನು ಅಂತಿಮಗೊಳಿಸುವುದು;

(ಎಫ್) ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಡಿಯಲ್ಲಿ ವರ್ಗಾಯಿಸಬೇಕಾದ ಶಿಕ್ಷಕರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು;

Scanned with CamScanner

(ಜಿ) ತಾಲೂಕಿನೊಳಗೆ ಮತ್ತು ಜಿಲ್ಲೆಯೊಳಗೆ ಶಿಕ್ಷಕರನ್ನು ಸಮರ್ಪಕ ಮರುಹಂಚಿಕೆಗೊಳಿಸುವುದು;

(ಎಚ್) ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವರ್ಗಾವಣೆ;

(ಐ) ವಲಯ ವರ್ಗಾವಣೆ ಅಡಿಯಲ್ಲಿ ವರ್ಗಾಯಿಸಬೇಕಾದ ಶಿಕ್ಷಕರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು;

(ಜೆ) ಭಾವಿತ ಖಾಲಿ ಸ್ಥಾನಗಳೊಂದಿಗೆ ಪರಿಷ್ಕೃತ ಖಾಲಿ ಹುದ್ದೆಗಳ ಅಧಿಸೂಚನೆ;

(ಕೆ) ಜಿಲ್ಲೆಯೊಳಗೆ ಕೋರಿಕೆ ವರ್ಗಾವಣೆಗಳು;

(ಎಲ್) ವಲಯ ವರ್ಗಾವಣೆಗಳು;

(ಎಂ) ಜಿಲ್ಲೆಯ ಹೊರಗೆ ಕೋರಿಕೆ ವರ್ಗಾವಣೆಗಳು (ವಿಭಾಗದೊಳಗೆ);

(ಎನ್) ವಿಭಾಗದ ಹೊರಗೆ ಕೋರಿಕೆ ವರ್ಗಾವಣೆಗಳು;ಮತ್ತು

(ಒ) ಪರಸ್ಪರ ವರ್ಗಾವಣೆಗಳು.

**ಟಿಪ್ಪಣಿ.-** "ಶಿಕ್ಷಕರ ಹುದ್ದೆಗಳ ಮರು ಹಂಚಿಕೆ ಮತ್ತು ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಬಳಕೆಗೆ ಸ್ಥಳನಿಯುಕ್ತಿ"ಮತ್ತು "ವಲಯ ವರ್ಗಾವಣೆಗಳನ್ನು" ಪ್ರತಿಯೊಂದು ಪರ್ಯಾಯ ವರ್ಷದಲ್ಲಿ ಕೈಗೊಳ್ಳತಕ್ಕದ್ದು. "ಶಿಕ್ಷಕರ ಹುದ್ದೆಗಳ ಮರು ನಿಯೋಜನೆ ಮತ್ತು ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಬಳಕೆಗೆ ಸ್ಥಳನಿಯುಕ್ತಿ" ಕೈಗೊಂಡ ವರ್ಷದಲ್ಲಿ"ವಲಯ ವರ್ಗಾವಣೆಗಳನ್ನು" ಕೈಗೊಳ್ಳತಕ್ಕದ್ದಲ್ಲ ಮತ್ತು ವಲಯ ವರ್ಗಾವಣೆಗಳನ್ನು ಕೈಗೊಂಡಲ್ಲಿ ಶಿಕ್ಷಕರ ಮರುನಿಯೋಜನೆ ಮತ್ತು ಸುವ್ಯವಸ್ಥೆಗೊಳಿಸುವಿಕೆ ಮಾಡತಕ್ಕದ್ದಲ್ಲ.

7. **ಜಿಲ್ಲೆಯೊಳಗೆ ಮಂಜೂರಾದ ಹುದ್ದೆಗಳ ಮರುನಿಯೋಜನೆ.-** ಪ್ರತಿಯೊಂದು ಪರ್ಯಾಯ ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯಾಬಲದ ಆಧಾರದ ಮೇಲೆ ಜಿಲ್ಲೆಯಲ್ಲಿ ಮಂಜೂರಾದ ಹುದ್ದೆಗಳನ್ನು ಶಾಲಾವಾರು ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆ ಮಾಡತಕ್ಕದ್ದು. ಹೆಚ್ಚುವರಿ ಹುದ್ದೆಗಳನ್ನು, ಈ ಉದ್ದೇಶಕ್ಕಾಗಿ ಸರ್ಕಾರದಿಂದ ಅಧಿಸೂಚಿಸಲಾದ ಪ್ರಕ್ರಿಯೆ ಪ್ರಕಾರ ಅಗತ್ಯವಿರುವ ಶಾಲೆಗಳಿಗೆ ಮರು ನಿಯೋಜಿಸತಕ್ಕದ್ದು. ಪ್ರಕ್ರಿಯೆ ಪೂರ್ಣಗೊಂಡ ನಂತರ, ಜಿಲ್ಲೆಯ ಉಪನಿರ್ದೇಶಕರು ಆಯಾ ಶೈಕ್ಷಣಿಕ ವರ್ಷಕ್ಕೆ ಪ್ರತಿಯೊಂದು ಶಾಲೆಯಲ್ಲಿ ಮಂಜೂರಾದ ಹುದ್ದೆಗಳಿಗೆ ಸಂಬಂಧಿಸಿದಂತೆ ಆದೇಶಗಳನ್ನು ನೀಡತಕ್ಕದ್ದು.

8. **ಖಾಲಿ ಹುದ್ದೆಗಳ ಅಧಿಸೂಚನೆ.-** ಹುದ್ದೆಯನ್ನು ಮರು ನಿಯೋಜಿಸಿದ ನಂತರ, ಸಂಬಂಧಪಟ್ಟ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಡಿಡಿಪಿಐ) ಜಿಲ್ಲೆಯಲ್ಲಿನ ತಾಲ್ಲೂಕುವಾರು ಖಾಲಿ ಹುದ್ದೆಗಳನ್ನು ಅಧಿಸೂಚಿಸತಕ್ಕದ್ದು.

9. **ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಥವಾ ವಲಯ ವರ್ಗಾವಣೆ ಅಡಿಯಲ್ಲಿ ವರ್ಗಾಯಿಸಬೇಕಾದ ಶಿಕ್ಷಕರ ಕರಡು ಪಟ್ಟಿಯ ಅಧಿಸೂಚನೆ.-** ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಥವಾ ವಲಯ ವರ್ಗಾವಣೆಯ ಅಡಿಯಲ್ಲಿ ವರ್ಗಾಯಿಸಬೇಕಾದ ಶಿಕ್ಷಕರ ಕರಡು ಪಟ್ಟಿಯನ್ನು ಸಂಬಂಧಪಟ್ಟ ಜಿಲ್ಲೆಯ ಡಿಡಿಪಿಐ ರವರಿಂದ ಅಧಿಸೂಚಿಸತಕ್ಕದ್ದು.

(i) ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಡಿಯಲ್ಲಿ ವರ್ಗಾಯಿಸಬೇಕಾದ ಶಿಕ್ಷಕರ ಕರಡು ಪಟ್ಟಿಯನ್ನು ಸಿದ್ಧಪಡಿಸುವಾಗ, ಶಾಲೆಯಲ್ಲಿ ಒಂದು ವಿಷಯದ ಹುದ್ದೆ ಹೆಚ್ಚುವರಿ ಎಂದು ಕಂಡು ಬಂದಲ್ಲಿ, ಆಗ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆ ವಿಷಯದ ಎಲ್ಲ ಶಿಕ್ಷಕರನ್ನು ಪಟ್ಟಿಯಲ್ಲಿ ಸೇರಿಸತಕ್ಕದ್ದು.

Scanned with CamScanner

(ii) ವಲಯ ವರ್ಗಾವಣೆ ಅಡಿಯಲ್ಲಿ ವರ್ಗಾಯಿಸಬೇಕಾದ ಶಿಕ್ಷಕರ ಕರಡು ಪಟ್ಟಿಯನ್ನು ಸಿದ್ಧಪಡಿಸುವಾಗ. ವಲಯ-ಎ ರಲ್ಲಿ ನಿರಂತರವಾಗಿ ಹತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ. ವಲಯ-ಸಿ ರಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸದೆ ಇರುವ ಮತ್ತು ನಿರ್ದಿಷ್ಟಪಡಿಸಿದ ವಯಸ್ಸಿನ ಮಿತಿಯೊಳಗೆ ಇರುವ ಎಲ್ಲ ಶಿಕ್ಷಕರನ್ನು ಪಟ್ಟಿಯಲ್ಲಿ ಸೇರಿಸತಕ್ಕದ್ದು.

**10. ವಿನಾಯಿತಿಗಳು ಮತ್ತು ಆದ್ಯತೆಗಳು.-**

(1) ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಡಿಯಲ್ಲಿ ಮತ್ತು ವಲಯ ವರ್ಗಾವಣೆಯಡಿ ವಿನಾಯಿತಿಗೆ ಹಾಗೂ ಕೋರಿಕೆ ವರ್ಗಾವಣೆಗಳ ಆದ್ಯತೆಗಾಗಿ 10ನೇ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದಂತೆ ಷರತ್ತುಗಳನ್ನು ಪಾಲಿಸತಕ್ಕದ್ದು.

(2) ವಿನಾಯಿತಿಗಳು/ಒದಗಿಸಲಾದ ಮತ್ತಷ್ಟು ಆದ್ಯತೆಗಳ ಕ್ಲೇಮಿನಲ್ಲಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳು ಈ ಕೆಳಗಿನಂತಿವೆ, ಎಂದರೆ.-

| ಕ್ರಸಂ | ವಿನಾಯಿತಿ ಅಥವಾ ಆದ್ಯತೆ ಕ್ಲೇಮು | ಪೂರಕ ದಾಖಲೆಗಳು |
|---|---|---|
| 1 | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅನುದಾನಿತ ಸಂಸ್ಥೆಯ ನೌಕರನನ್ನು ವಿವಾಹವಾಗಿರುವ ಶಿಕ್ಷಕ | ಸಂಗಾತಿಯ ನೇಮಕಾತಿ ಪ್ರಾಧಿಕಾರದಿಂದ ಪ್ರಮಾಣಪತ್ರ |
| 2 | ತಾಲೂಕಿನೊಳಗೆ ಚಿಕಿತ್ಸೆ ಸಿಗದಿರುವ ಮಾರಕ ಕಾಯಿಲೆ ಅಥವಾ ಗಂಭೀರ ಕಾಯಿಲೆಯಿಂದ ಬಳಲುತ್ತಿರುವ ಶಿಕ್ಷಕ ಅಥವಾ ಪತಿ/ಪತ್ನಿ ಅಥವಾ ಮಕ್ಕಳು ಮತ್ತು ಶೇಕಡಾ 40ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಗವೈಕಲ್ಯವಿರುವ ಶಿಕ್ಷಕ ಅಥವಾ ಪತಿ/ಪತ್ನಿ ಅಥವಾ ಮಕ್ಕಳು | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣಪತ್ರ |
| 3 | ಗರ್ಭಿಣಿ ಶಿಕ್ಷಕಿ ಅಥವಾ ಒಂದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣಪತ್ರ |
| 4 | ಅವಲಂಬಿತ ಮಕ್ಕಳೊಂದಿಗೆ ಇರುವ ವಿಧವೆ ಅಥವಾ ವಿಧುರ ಶಿಕ್ಷಕ | ಸಂಗಾತಿಯ ಮರಣ ಪ್ರಮಾಣ ಪತ್ರ ಮತ್ತು ಮರು ವಿವಾಹ ಮಾಡಿಕೊಳ್ಳದಿರುವ ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ್ |
| 5 | ಭಾರತೀಯ ರಕ್ಷಣಾ ಪಡೆಗಳ ಅಥವಾ ಅರೆಸೇನಾ ಪಡೆಗಳ ಹಾಲಿ ಅಥವಾ ಮಾಜಿಸೈನಿಕ ಅಥವಾ ಶಾಶ್ವತವಾಗಿ ಅಂಗವಿಕಲನಾದ ಅಥವಾ ಮೃತ ಸೈನಿಕನ ಪತ್ನಿ ಅಥವಾ ಸಂದರ್ಭಾನುಸಾರ ಸಂಗಾತಿ. | ಕಮಾಂಡಿಂಗ್ ಆಫೀಸರ್ ಅಥವಾ ನಿರ್ದೇಶಕರು. ಸೈನಿಕ ಕಲ್ಯಾಣ ಮಂಡಳಿಯಿಂದ ಪ್ರಮಾಣಪತ್ರ |

Scanned with CamScanner

| | | |
|---|---|---|
| 6 | ಅವಲಂಬಿತ ಮಕ್ಕಳೊಂದಿಗೆ ಇರುವ ವಿವಾಹ ವಿಚ್ಛೇದಿತ ಶಿಕ್ಷಕ/ಶಿಕ್ಷಕಿ. | ನ್ಯಾಯಾಲಯದ ಡಿಕ್ರಿ ಮತ್ತು ಅವಲಂಬಿತ ಮಗು ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ್.ಮತ್ತು ಮರುವಿವಾಹವಾಗದೇ ಇರುವುದು.<br>ಮುಸ್ಲಿಮರಾಗಿದ್ದಲ್ಲಿ ಮಸೀದಿ ಸಮಿತಿಯಿಂದ ನೀಡಲಾದ ಖುಲನಾಮಾ, ತಲಾಖ್-ನಾಮ. ಅಥವಾ ತಲಾಕ್-ಇ-ಮುಬಾರತ್ ಮತ್ತು ಅವಲಂಬಿತ ಮಗು ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ್ ಹಾಗೂ ಮರುವಿವಾಹವಾಗದೇ ಇರುವುದು. |
| 7 | ಐವತ್ತು ವರ್ಷಗಳ ವಯೋಮಾನದ ಮಹಿಳಾ ಶಿಕ್ಷಕಿಯರು ಅಥವಾ ಐವತ್ತೈದು ವರ್ಷಗಳ ವಯೋಮಾನದ ಪುರುಷ ಶಿಕ್ಷಕರು | ಸೇವಾ ರಿಜಿಸ್ಟರ್ ಪ್ರಕಾರ ಡಿಡಿಪಿ ರವರಿಂದ ನೀಡಲಾದ ಪ್ರಮಾಣಪತ್ರ. |

11. **ಕೋರಿಕೆ ವರ್ಗಾವಣೆಗೆ ಅರ್ಜಿ ಆಹ್ವಾನಿಸುವುದು ಮತ್ತು ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಥವಾ ವಲಯ ವರ್ಗಾವಣೆಯಿಂದ ವಿನಾಯಿತಿಯನ್ನು ಪಡೆಯಲು ಅರ್ಜಿಯನ್ನು ಆಹ್ವಾನಿಸುವುದು:-** ಕನಿಷ್ಠ ಸೇವಾ ಅವಧಿಯನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಶಿಕ್ಷಕನಿಗೆ ವರ್ಗಾವಣೆ ಪ್ರಕ್ರಿಯೆ ನಿಯಂತ್ರಣ ಅಧಿಕಾರಿಯಿಂದ ಅಧಿಸೂಚಿಸಲಾದ ಕಾಲಾವಧಿಯೊಳಗೆ ಕೋರಿಕೆಯ ವರ್ಗಾವಣೆಗೆ ಮತ್ತು/ಅಥವಾ ಸುವ್ಯವಸ್ಥೆಗೊಳಿಸುವಿಕೆ/ವಲಯ ವರ್ಗಾವಣೆಯಿಂದ ವಿನಾಯಿತಿಯನ್ನು ಪಡೆಯಲು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ಅವಕಾಶವನ್ನು ಒದಗಿಸತಕ್ಕದ್ದು.

(i) ಶಿಕ್ಷಕರ ವರ್ಗಾವಣೆಗಾಗಿ ಕೋರಿಕೆಯ ಅರ್ಜಿಯನ್ನು ಸಲ್ಲಿಸುವಾಗ, 10ನೇ ನಿಯಮದ ಮೇರೆಗೆ ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ ಅಧಿನಿಯಮದ 10ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ವರ್ಗಗಳ ಮೇರೆಗೆ ಆದ್ಯತೆಯನ್ನು ಸಹ ಕೋರಬಹುದು;

(ii) 10ನೇ ನಿಯಮದಲ್ಲಿ, ನಿರ್ದಿಷ್ಟಪಡಿಸಲಾದ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಮರ್ಪಕ ಮರುಹಂಚಿಕೆ/ವಲಯ ವರ್ಗಾವಣೆಯಿಂದ ವಿನಾಯಿತಿ ಪಡೆಯುವ ಅರ್ಜಿಯಿಂದಲೂ ಸಹ ಆನ್‌ಲೈನ್‌ನಲ್ಲಿ ಕ್ಲೇಮು ಮಾಡತಕ್ಕದ್ದು;

(iii) ಆದ್ಯತೆ ಅಥವಾ ವಿನಾಯಿತಿಯನ್ನು ಕಾಲಮಿತಿಯೊಳಗೆ ಕ್ಲೇಮು ಮಾಡದಿದ್ದರೆ, ಆಗ ಅದನ್ನು ನಂತರ ಹಂತದಲ್ಲಿ ಪರಿಗಣಿಸತಕ್ಕದ್ದಲ್ಲ; ಮತ್ತು

(iii) ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಥವಾ ವಲಯ ವರ್ಗಾವಣೆಗಳ ಮೇರೆಗೆ ವರ್ಗಾವಣೆಗೆ ಗುರುತಿಸಲಾದ ಶಿಕ್ಷಕರು, ಕೋರಿಕೆಯ ವರ್ಗಾವಣೆಗಾಗಿ ಅರ್ಜಿಯನ್ನು ಸಹ ಸಲ್ಲಿಸಬಹುದು. ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಥವಾ ವಲಯ ವರ್ಗಾವಣೆಗೆ ಮುಂಚೆ ಅವರು ಕಾರ್ಯನಿರ್ವಹಿಸುತ್ತಿರುವ ಶಾಲೆಯ ಆಧಾರದ ಮೇಲೆ ಅವರ ಅರ್ಹತೆ ಮತ್ತು ಕ್ರಮಾಂಕವನ್ನು ಪರಿಗಣಿಸತಕ್ಕದ್ದು.

12. **"ವಿನಾಯಿತಿಯನ್ನು ಪಡೆಯುವ ಶಿಕ್ಷಕರ ಪಟ್ಟಿ" ಮತ್ತು ಆದ್ಯತೆಯನ್ನು ನೀಡಿರುವ ಶಿಕ್ಷಕರ ಪಟ್ಟಿಯನ್ನು ಅಂತಿಮಗೊಳಿಸುವುದು.-**

Scanned with CamScanner

(i) ಶಿಕ್ಷಕರ ಸಮರ್ಪಕ ಮರುಹಂಚಿಕೆ/ವಲಯ ವರ್ಗಾವಣೆಯ ಮೇರೆಗೆ ವರ್ಗಾವಣೆಗಾಗಿ ಕೋರಿಕೆ ಅರ್ಜಿಯನ್ನು ಮತ್ತು ವಿನಾಯಿತಿಗಾಗಿ ಅರ್ಜಿಯನ್ನು ಸಲ್ಲಿಸುವುದಕ್ಕಾಗಿ ನಿಗದಿಪಡಿಸಲಾದ ಅಂತಿಮ ದಿನಾಂಕದ ನಂತರ, ಸಂಬಂಧ ಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಆದ್ಯತೆ ಅಥವಾ ವಿನಾಯತಿಯ ಪ್ರತಿಯೊಂದು ಅರ್ಜಿಯನ್ನು ಪರಿಶೀಲಿಸತಕ್ಕದ್ದು.

(ii) ಕ್ಷೇತ್ರ ಶಿಕ್ಷಣಾಧಿಕಾರಿ, 10ನೇ ನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ದಸ್ತಾವೇಜುಗಳನ್ನು ಸಲ್ಲಿಸುವ ಆಧಾರದ ಮೇಲೆ ಆದ್ಯತೆ ಅಥವಾ ವಿನಾಯಿತಿಯ ಅರ್ಹ ಸಂದರ್ಭಗಳ ತೀರ್ಮಾನಕ್ಕೆ ಬರತಕ್ಕದ್ದು.

(iii) ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ದಾಖಲೆಗಳ ವಿಶ್ವಾಸರ್ಹತೆ (ಸತ್ಯಾಸತ್ಯತೆ) ಅಥವಾ ನೈಜತೆಗೆ ಸಂಬಂಧಿಸಿದಂತೆ ಯಾವುದೇ ಸಂಶಯಗಳು ಉಂಟಾದರೆ, ಆತನು ಸಕ್ಷಮ ಪ್ರಾಧಿಕಾರದೊಂದಿಗೆ ಮರುಪರಿಶೀಲನೆ ಮಾಡತಕ್ಕದ್ದು.

(iv) ನಂತರ ಕ್ಷೇತ್ರ ಶಿಕ್ಷಣಾಧಿಕಾರಿಯು ಆನ್‌ಲೈನ್‌ನಲ್ಲಿ ಹಾಗೂ ಕಚೇರಿ ಸೂಚನಾ ಫಲಕದಲ್ಲಿ ಮುಂದಿನವುಗಳನ್ನು ಪ್ರಕಟಿಸತಕ್ಕದ್ದು.

(ಎ) ಕರಡು ಅರ್ಹ ಆದ್ಯತಾ ಪಟ್ಟಿ;

(ಬಿ) ಕಾರಣಗಳೊಂದಿಗೆ ಅನರ್ಹ ಕರಡು ಆದ್ಯತಾ ಪಟ್ಟಿ;

(ಸಿ) ವಿನಾಯಿತಿ ಪಡೆದ ಕರಡು ಅರ್ಹತಾ ಪಟ್ಟಿ;

(ಡಿ) ಕಾರಣಗಳೊಂದಿಗೆ ವಿನಾಯತಿ ಪಡೆಯಲು ಅನರ್ಹತಾ ಕರಡು ಪಟ್ಟಿ;

(ಇ) ಯಾವೊಬ್ಬ ಶಿಕ್ಷಕನಿಂದ ಆಕ್ಷೇಪಣೆಗಳಿಗೆ ಐದು ಕೆಲಸದ ದಿನಗಳನ್ನು ನೀಡುವುದು;

(ಎಫ್) ಕ್ಷೇತ್ರ ಶಿಕ್ಷಣಾಧಿಕಾರಿ ಅಧಿಸೂಚನೆಯಲ್ಲಿ ಉದ್ಭವಿಸುವ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಿದ ಕೊನೆಯ ದಿನಾಂಕದ ತರುವಾಯ, ಮುಕ್ತವಾಗಿ ಅಹವಾಲು ಸಲ್ಲಿಸಲು ಹಾಗೂಆಲಿಸಲು ದಿನಾಂಕವನ್ನು ಸಹ ನಮೂದಿಸುವುದು; ಮತ್ತು

(ಜಿ) ಸ್ಪಷ್ಟವಾದ ಐದು ಕೆಲಸದ ದಿನಗಳ ತರುವಾಯ, ಶಿಕ್ಷಕರ ಕ್ರಮಾಂಕದ ಆಧಾರದ ಮೇಲೆ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(v) ಅರ್ಹವಾಗಿರುವ ಅಥವಾ ಅನರ್ಹವಾಗಿರುವ ಸಂದರ್ಭಗಳಲ್ಲಾಗಲಿ ಆಕ್ಷೇಪಣೆ ಹೊಂದಿರುವ ಯಾರೇ ಶಿಕ್ಷಕ, ಪೂರಕ ದಸ್ತಾವೇಜುಗಳ ಸಹಿತವಾಗಿ ಆನ್‌ಲೈನ್‌ನಲ್ಲಿ ದಾಖಲಿಸಬಹುದು.

(vi) ಕ್ಷೇತ್ರ ಶಿಕ್ಷಣಾಧಿಕಾರಿ, ಎಲ್ಲಾ ಆನ್‌ಲೈನ್ ಆಕ್ಷೇಪಣೆಗಳನ್ನು ಪರಿಶೀಲಿಸತಕ್ಕದ್ದು, ಮತ್ತು "ಮುಕ್ತವಾಗಿ ಆಲಿಸುವ ದಿನಾಂಕದಂದು" ಅವರ ಅಹವಾಲುಗಳನ್ನು ಆಲಿಸಿ ಮೌಖಿಕ ಆದೇಶಗಳನ್ನು ಹೊರಡಿಸತಕ್ಕದ್ದು. ಮೌಖಿಕ ಆದೇಶಗಳನ್ನು ವರ್ಗಾವಣೆ ಪೋರ್ಟಲ್ ಮೇಲೆ ಮತ್ತು ಸೂಚನಾ ಫಲಕದ ಮೇಲೆ ಪ್ರಕಟಿಸತಕ್ಕದ್ದು.

(vii) ಆದೇಶಗಳನ್ನು ಹೊರಡಿಸಿದ ತರುವಾಯ, ಕ್ಷೇತ್ರ ಶಿಕ್ಷಣಾಧಿಕಾರಿ,–

(ಎ) ಅಂತಿಮ ಆದ್ಯತಾ ಪಟ್ಟಿ; ಹಾಗೂ

(ಬಿ) ಅಂತಿಮ ವಿನಾಯಿತಿ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

Scanned with CamScanner

ಮೂಲಕ ಅಗತ್ಯ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಅದನ್ನು ಫೆಬ್ರವರಿ 15 ರೊಳಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.

(ಎಫ್) ಸಂಬಂಧಪಟ್ಟ ಡಿಡಿಪಿ ರವರು ಆದೇಶವನ್ನು ಹೊರಡಿಸಿದ ನಂತರ, ಆತನು ಅಂತಿಮ ಕ್ರಮಾಂಕಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು. ಒಂದು ಬಾರಿ ಅಂತಿಮ ಕ್ರಮಾಂಕಗಳನ್ನು ಪ್ರಕಟಿಸಿದಲ್ಲಿ ವರ್ಗಾವಣೆಯ ಪ್ರಕ್ರಿಯೆಯು ಮುಗಿಯುವರೆಗೂ ಅದನ್ನು ಪರಿಗಣಿಸತಕ್ಕದ್ದು.

(ಜಿ) ಅನಿವಾರ್ಯ ಕಾರಣಗಳ ನಿಮಿತ್ತ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಮೇಲಿನ ಪ್ರಕ್ರಿಯೆ ಪೂರ್ಣಗೊಳ್ಳದಿದ್ದರೆ ಅದನ್ನು ವರ್ಗಾವಣೆ ಸೂಚಿಯ ಪ್ರಕಟಣೆಯ ಮುನ್ನ ಪೂರ್ಣಗೊಳಿಸತಕ್ಕದ್ದು.

5. **ವರ್ಗಾವಣೆ ಪರಿಮಿತಿಗಳು.**– ಅಧಿನಿಯಮದ 7ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ವರ್ಗಾವಣೆ ಪರಿಮಿತಿಯು ಈ ಮುಂದಿನಂತೆ ಇರತಕ್ಕದ್ದು:-

| ಕ್ರ.ಸಂ | ವರ್ಗಾವಣೆ ವಿಧ | ಉಪ ಪರಿಮಿತಿ |
|---|---|---|
| 1 | ಕೋರಿಕೆ ವರ್ಗಾವಣೆ (ಜಿಲ್ಲೆಯ ಒಳಗೆ) | 7% |
| 2 | ವಲಯ ವರ್ಗಾವಣೆ | 4% |
| 3 | ಕೋರಿಕೆ ವರ್ಗಾವಣೆ (ವಿಭಾಗದ ಒಳಗೆ) | 2% |
| 4 | ಕೋರಿಕೆ ವರ್ಗಾವಣೆ (ವಿಭಾಗದ ಹೊರಗೆ) | 2% |

6. **ವರ್ಗಾವಣೆ (ಅನುಸೂಚಿ) ವೇಳಾಪಟ್ಟಿ**– (1) ವರ್ಗಾವಣೆಗಳನ್ನು ಪ್ರತಿ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸಾಮಾನ್ಯವಾಗಿ ಕೈಗೊಳ್ಳತಕ್ಕದ್ದು.

(2) ಸರ್ಕಾರವು, ವರ್ಗಾವಣಾ ನಿಯಂತ್ರಣ ಅಧಿಕಾರಿಯ ಶಿಫಾರಸ್ಸುಗಳ ಮೇಲೆ, ವರ್ಗಾವಣೆ ಪ್ರಕ್ರಿಯೆಯನ್ನು ಅದು ಸೂಕ್ತವೆನಿಸಿದಲ್ಲಿ, (1) ನೇ ಉಪ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿ ನಂತರವೂ ವರ್ಗಾವಣೆಗಳನ್ನು ಕೈಗೊಳ್ಳಲು ಅನುಮತಿಸಬಹುದು.

(3) ಪ್ರತಿ ವರ್ಷ ವರ್ಗಾವಣೆ ಪ್ರಕ್ರಿಯೆ ನಿಯಂತ್ರಣ ಅಧಿಕಾರಿಯು, ಮುಂದಿನ ಪ್ರಮುಖ ಹಂತಗಳನ್ನು ಹೊಂದಿರುವ ವರ್ಗಾವಣೆ ಪ್ರಕ್ರಿಯೆಗಳಿಗೆ ವೇಳಾಪಟ್ಟಿಯನ್ನು ಪ್ರಕಟಿಸತಕ್ಕದ್ದು:-

(ಎ) ಜಿಲ್ಲೆಯೊಳಗೆ ಮಂಜೂರಾದ ಹುದ್ದೆಗಳ ಮರು ನಿಯುಕ್ತಿ ಕ್ರಮಗಳು;

(ಬಿ) ಖಾಲಿ ಹುದ್ದೆಗಳ ಅಧಿಸೂಚನೆ;

(ಸಿ) ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆಗೆ (Rationalization) ಅಥವಾ ವಲಯ ವರ್ಗಾವಣೆ ಅಡಿಯಲ್ಲಿ ವರ್ಗಾವಣೆ ಮಾಡಬೇಕಾದ ಶಿಕ್ಷಕರ ಕರಡು ಪಟ್ಟಿಯ ಅಧಿಸೂಚನೆ;

(ಡಿ) ಕೋರಿಕೆ ವರ್ಗಾವಣೆ ಮತ್ತು ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆಗೆ ಅಥವಾ ವಲಯ ವರ್ಗಾವಣೆಯಿಂದ ವಿನಾಯಿತಿಗೆ ಅರ್ಜಿಯನ್ನು ಆಹ್ವಾನಿಸುವುದು;

(ಇ) ವಿನಾಯಿತಿಗೊಳಿಸುವ ಶಿಕ್ಷಕರ ಪಟ್ಟಿ ಮತ್ತು ಆದ್ಯತೆ ನೀಡುವ ಶಿಕ್ಷಕರ ಪಟ್ಟಿಯನ್ನು ಅಂತಿಮಗೊಳಿಸುವುದು;

(ಎಫ್) ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಡಿಯಲ್ಲಿ ವರ್ಗಾಯಿಸಬೇಕಾದ ಶಿಕ್ಷಕರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು;

Scanned with CamScanner

(viii) ಆದೇಶದಿಂದ ಬಾಧಿತನಾದ ಯಾರೇ ಶಿಕ್ಷಕ ಆದೇಶವನ್ನು ಪ್ರಕಟಿಸಿದ ದಿನಾಂಕದಿಂದ ಮೂರು ಕೆಲಸದ ದಿನಗಳೊಳಗಾಗಿ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನು ಸಂಪರ್ಕಿಸತಕ್ಕದ್ದು.

13. **ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವುದರ ಮೇರೆಗೆ ವರ್ಗಾವಣೆ ಮಾಡಬೇಕಾದ ಶಿಕ್ಷಕರ ಅಂತಿಮ ಪಟ್ಟಿಯನ್ನು ತಯಾರಿಸುವುದು ಮತ್ತು ಪ್ರಕಟಿಸುವುದು.**– (1) ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವುದರ ಮೇರೆಗೆ ವಿನಾಯಿತಿ ನೀಡಬೇಕಾದ ಶಿಕ್ಷಕರ ಪಟ್ಟಿಯನ್ನು ಅಂತಿಮಗೊಳಿಸಿದ ತರುವಾಯ ಶಾಲೆಯಲ್ಲಿ ಆ ವಿಷಯದ ಅತ್ಯಂತ ಕಿರಿಯ ಶಿಕ್ಷಕನನ್ನು, ವಿನಾಯಿತಿ ನೀಡಿರುವ ಶಿಕ್ಷಕರನ್ನು ಹೊರತುಪಡಿಸಿ, ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವುದರಮೇರೆಗೆ ವರ್ಗಾವಣೆ ಮಾಡಲು ಪರಿಗಣಿಸತಕ್ಕದ್ದು. ಆ ವಿಷಯದ ಎಲ್ಲಾ ಶಿಕ್ಷಕರು ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವುದರಿಂದ ವಿನಾಯಿತಿಗೆ ಅರ್ಹರಾದರೆ, ಆಗ ಗಂಭೀರ ಕಾಯಿಲೆಗೆ ಒಳಗಾಗಿರುವ ಅಥವಾ ದೈಹಿಕವಾಗಿ ಅಂಗವಿಕಲರಾದ ಶಿಕ್ಷಕರನ್ನು ಹೊರತುಪಡಿಸಿ, ವಿನಾಯಿತಿ ಷರತ್ತನ್ನು ಪರಿಗಣಿಸದೆ ಅತ್ಯಂತ ಕಿರಿಯ ಶಿಕ್ಷಕರನ್ನು, ಅವರ ವಿನಾಯಿತಿ ಗಣನೆಗೆ ತೆಗೆದುಕೊಳ್ಳದೆ ಪರಿಗಣಿಸತಕ್ಕದ್ದು. ಆದಾಗ್ಯೂ, ಎಲ್ಲಾ ಶಿಕ್ಷಕರು "ಗಂಭೀರ ಕಾಯಿಲೆಗೆ ಒಳಗಾದವರ ಹಾಗೂ ದೈಹಿಕವಾಗಿ ಅಂಗವಿಕಲರ" ಪ್ರವರ್ಗಕ್ಕೆ ಸೇರಿದವರಾಗಿದ್ದರೆ, ಆಗ ಅವರ ಪೈಕಿ ಅತ್ಯಂತ ಕಿರಿಯ ಶಿಕ್ಷಕನನ್ನು, ಸಮರ್ಪಕ ಮರುಹಂಚಿಕೆಯ ಮೇರೆಗೆ ಪರಿಗಣಿಸತಕ್ಕದ್ದು.

(2) (1)ನೇ ಉಪ-ನಿಯಮದಲ್ಲಿ, ಹೇಳಲಾದ ಸೂಕ್ತ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ, ಸಂಬಂಧಪಟ್ಟ ಜಿಲ್ಲೆಯ ಉಪ-ನಿರ್ದೇಶಕರು, ಸಮರ್ಪಕ ಮರುಹಂಚಿಕೆಯ ಮೇರೆಗೆ ವರ್ಗಾವಣೆಯಾಗುವ ತಾಲ್ಲೂಕುವಾರು ಶಿಕ್ಷಕರ ಅಂತಿಮ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

14. **ತಾಲ್ಲೂಕಿನೊಳಗೆ ಮತ್ತು ಜಿಲ್ಲೆಯೊಳಗೆ ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವಿಕೆ.**– (1) ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವುದರ ಮೇರೆಗೆ ಶಿಕ್ಷಕ ವರ್ಗಾವಣೆಗಾಗಿ ಅನುಸರಿಸುವ ಆದ್ಯತಾ ಕ್ರಮ.

(2) ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವ ಅಂತಿಮ ತಾಲ್ಲೂಕುವಾರು ಪಟ್ಟಿಯಲ್ಲಿರುವ ಶಿಕ್ಷಕರನ್ನು, ತಾಲ್ಲೂಕಿನೊಳಗೆ ಖಾಲಿ ಇರುವ ಹುದ್ದೆಗಳಿಗೆ ಮಾತ್ರ ವರ್ಗಾವಣೆ ಮಾಡತಕ್ಕದ್ದು. ಯಾರೇ ಶಿಕ್ಷಕರು ಖಾಲಿ ಹುದ್ದೆಗೆ ವರ್ಗಾವಣೆಯಾಗಲು ನಿರಾಕರಿಸಿದರೆ ಅಥವಾ ಕೌನ್ಸಿಲಿಂಗ್‌ನಿಂದ ವಿಮುಖರಾದಲ್ಲಿ, ವರ್ಗಾವಣೆ ಪ್ರಾಧಿಕಾರವು, ಅಂಥ ಶಿಕ್ಷಕರನ್ನು, ಆ ತಾಲ್ಲೂಕಿನ ಕೌನ್ಸಿಲಿಂಗ್ ಪ್ರಕ್ರಿಯೆಯು ಪೂರ್ಣಗೊಂಡ ತರುವಾಯ ಪರ್ಯಾಯ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡತಕ್ಕದ್ದು.

(3) "ಗಂಭೀರ ಕಾಯಿಲೆಗೆ ಒಳಗಾದ ಅಥವಾ ದೈಹಿಕವಾಗಿ ಅಂಗವಿಕಲರಾದ" ಶಿಕ್ಷಕರು ಹೆಚ್ಚುವರಿ ಶಿಕ್ಷಕರಾಗಿ ಗುರುತಿಸಿದ್ದಲ್ಲಿ, ಆಗ ವರ್ಗಾವಣೆ ಪ್ರಾಧಿಕಾರವು, ಅಂಥ ಶಿಕ್ಷಕರನ್ನು ವರ್ಗಾವಣೆ ಮಾಡುವಾಗ ಕೃಪಾಂಕ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳದೆ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಅವರಿಗೆ ಮೊದಲ ಆದ್ಯತೆಯನ್ನು ನೀಡತಕ್ಕದ್ದು.

(4) ತಾಲ್ಲೂಕಿನ ವ್ಯಾಪ್ತಿಯೊಳಗೆ ಶಿಕ್ಷಕರನ್ನು, ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸಿದ ತರುವಾಯ, ತಾಲ್ಲೂಕುಗಳಲ್ಲಿ ಖಾಲಿ ಹುದ್ದೆಗಳು ಲಭ್ಯವಿಲ್ಲದ ಕಾರಣದಿಂದಾಗಿ ಅಧಿಕ ಸಂಖ್ಯೆಯಲ್ಲಿ ಉಳಿದಿರುವ ಶಿಕ್ಷಕರನ್ನು

Scanned with CamScanner

ಸಂಯೋಜಿಸತಕ್ಕದ್ದು ಮತ್ತು ಜಿಲ್ಲೆಗಾಗಿ ಹೊಸ ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಆಗ ಸಂಯೋಜಿತ ಪಟ್ಟಿಯಲ್ಲಿರುವ ಶಿಕ್ಷಕರನ್ನು ಜಿಲ್ಲೆಯ ವ್ಯಾಪ್ತಿಯೊಳಗೆ ಯಾವುದೇ ಖಾಲಿ ಹುದ್ದೆಗೆ ವರ್ಗಾವಣೆ ಮಾಡಬಹುದು.

(5) ಜಿಲ್ಲೆಯ ವ್ಯಾಪ್ತಿಯೊಳಗೆ ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದರೆ, ಆಗ ಅಧಿಕ ಸಂಖ್ಯೆಯ ಶಿಕ್ಷಕರನ್ನು, ಜಿಲ್ಲೆಯ ವ್ಯಾಪ್ತಿಯೊಳಗೆ ಅತಿ ಹೆಚ್ಚಿನ ಪಿಟಿಆರ್ ಅನುಪಾತವನ್ನು ಹೊಂದಿರುವ ಶಾಲೆಗಳಿಗೆ ವರ್ಗಾವಣೆ ಮಾಡತಕ್ಕದ್ದು.

15. **ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುವ ಶಿಕ್ಷಕರ ವರ್ಗಾವಣೆ.**- (1) ಗರಿಷ್ಠ ಅವಧಿಯನ್ನು ಪೂರ್ಣಗೊಳಿಸಿ ನಿರ್ದಿಷ್ಟಪಡಿಸಿದ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುವ ಶಿಕ್ಷಕರನ್ನು ಜಿಲ್ಲೆಯಲ್ಲಿ ಯಾವುದೇ ಖಾಲಿ ಹುದ್ದೆಗೆ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ಶಾಲೆಗಳಿಗೆ ವರ್ಗಾವಣೆ ಮಾಡತಕ್ಕದ್ದು. ಜಿಲ್ಲೆಯ ವ್ಯಾಪ್ತಿಯೊಳಗೆ ಖಾಲಿ ಸ್ಥಾನಗಳು ಇಲ್ಲದಿದ್ದರೆ, ಶಿಕ್ಷಕರನ್ನು ಅತಿ ಹೆಚ್ಚಿನ ಪಿಟಿಆರ್ ಅನುಪಾತ ಹೊಂದಿರುವ ಶಾಲೆಗಳಿಗೆ ವರ್ಗಾವಣೆ ಮಾಡತಕ್ಕದ್ದು.

(2) ಮೇಲಿನ ಹುದ್ದೆಗಳಲ್ಲಿ ಕನಿಷ್ಠ ಮೂರು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿದ ಶಿಕ್ಷಕರು, ವರ್ಗಾವಣೆಗೆ ಪ್ರಕ್ರಿಯೆಯ ಅವಧಿಯಲ್ಲಿ, ಖಾಲಿ ಹುದ್ದೆಗಳಿಗೆ ವರ್ಗಾವಣೆಯನ್ನು ಕೋರಬಹುದು. ಅವರಿಗೆ ಅವರ ಆಯ್ಕೆಯ ಖಾಲಿ ಹುದ್ದೆಯು ಸಿಗದಿದ್ದರೆ ಅವರು ಗರಿಷ್ಠ ಅವದಿಯನ್ನು ಪೂರ್ಣಗೊಳಿಸುವವರೆಗೆ, ನಿರ್ದಿಷ್ಟಪಡಿಸಿದ ಹುದ್ದೆಯಲ್ಲಿ ಮುಂದುವರಿಯತಕ್ಕದ್ದು.

ಪರಂತು, ಮೇಲಿನ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರ ಕಾರ್ಯಸಾಧನೆಯ ತೃಪ್ತಿಕರವಾಗಿಲ್ಲದಿದ್ದರೆ, ಅವರನ್ನು ಜಿಲ್ಲೆಯ 'ಸಿ' ವಲಯದಲ್ಲಿರುವ ಯಾವುದೇ ಖಾಲಿ ಹುದ್ದೆಗೆ ಸಹ ವರ್ಗಾವಣೆ ಮಾಡಬಹುದು.

(3) ಆದ್ಯತಾ ಕ್ರಮಾಂಕವೇ ಕೌನ್ಸಿಲಿಂಗ್‌ಗೆ ಮೂಲ ಆಧಾರವಾಗಿರತಕ್ಕದ್ದು.

16. **ವಲಯ ವರ್ಗಾವಣೆ ಮೇರೆಗೆ ವರ್ಗಾವಣೆ ಮಾಡುವ ಶಿಕ್ಷಕರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು.**- (1) ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಪ್ರತಿಯೊಂದು ಪರ್ಯಾಯ ವರ್ಷದಲ್ಲಿ ವಲಯ ವರ್ಗಾವಣೆಗಳನ್ನು ಕೈಗೊಳ್ಳತಕ್ಕದ್ದು. ವಲಯ ವರ್ಗಾವಣೆಯ ಮೇರೆಗೆ ವಿನಾಯಿತಿಗಳಿಗಾಗಿ ಕ್ಲೇಮುಗಳನ್ನು ಪರಿಗಣಿಸಿದ ತರುವಾಯ, ಸಂಬಂಧಪಟ್ಟ ಜಿಲ್ಲೆಯ ಡಿಡಿಪಿಐ ರವರು ತಾಲ್ಲೂಕುವಾರು ಅಂತಿಮ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

17. **ಭಾವಿತ ಖಾಲಿ ಸ್ಥಾನಗಳೊಂದಿಗೆ ಖಾಲಿ ಹುದ್ದೆಗಳ ಪರಿಷ್ಕೃತ ಅಧಿಸೂಚನೆ.**-

(1) ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವುದನ್ನು ಕೈಗೊಂಡ ವರ್ಷದಲ್ಲಿ ಡಿಡಿಪಿಐ ರವರು, ಸುವ್ಯವಸ್ಥೆಗೊಳಿಸುವುದರ ಪ್ರಕ್ರಿಯೆಯ ತರುವಾಯ ತಾಲ್ಲೂಕುವಾರು ಮಟ್ಟದ ಖಾಲಿ ಸ್ಥಾನಗಳನ್ನು ಪ್ರಕಟಿಸತಕ್ಕದ್ದು; ಅಥವಾ

(2) ವಲಯ ವರ್ಗಾವಣೆಯನ್ನು ಕೈಗೊಂಡ ವರ್ಷದಲ್ಲಿ, ಸಂಬಂಧಪಟ್ಟ ಜಿಲ್ಲೆಯ ಡಿಡಿಪಿಐ ರವರು, ವಲಯ ವರ್ಗಾವಣೆಯ ಅಂತಿಮ ಪಟ್ಟಿಯಲ್ಲಿ ಸೇರಿಸಿರುವ ಶಿಕ್ಷಕರ ಭಾವಿತ ಖಾಲಿ ಸ್ಥಾನಗಳೊಂದಿಗೆ ತಾಲ್ಲೂಕುವಾರು ಖಾಲಿ ಸ್ಥಾನಗಳನ್ನು ಪ್ರಕಟಿಸತಕ್ಕದ್ದು.

Scanned with CamScanner

**18. ಜಿಲ್ಲೆಯ ವ್ಯಾಪ್ತಿಯೊಳಗೆ ಕೋರಿಕೆ ವರ್ಗಾವಣೆಗಳು.-**

(i) ಜಿಲ್ಲೆ ವ್ಯಾಪ್ತಿಯೊಳಗೆ ಕೋರಿಕೆ ವರ್ಗಾವಣೆಗಾಗಿ ಸ್ವೀಕರಿಸಿದ ಅರ್ಜಿಗಳ ಆಧಾರದ ಮೇಲೆ ಅಧಿನಿಯಮದ 10ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದಂತೆ ವಿವಿಧ ಪ್ರವರ್ಗಗಳಿಗಾಗಿ ಮತ್ತು ಸಾಮಾನ್ಯ ಪ್ರವರ್ಗಕ್ಕಾಗಿ ಅಂತಿಮ ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಮತ್ತು ವರ್ಗಾವಣೆ ಪೋರ್ಟಲ್‌ನಲ್ಲಿ ಸಕ್ಷಮ ಪ್ರಾಧಿಕಾರವು ಪ್ರಕಟಿಸತಕ್ಕದ್ದು.

(ii) ಶೇಕಡಾ ಇಪ್ಪತ್ತೈದಕ್ಕಿಂತ ಹೆಚ್ಚಿನ ಖಾಲಿ ಹುದ್ದೆಗಳನ್ನು ಹೊಂದಿರುವ ತಾಲ್ಲೂಕಿನಿಂದ ಸ್ವೀಕರಿಸಿದ ಅರ್ಜಿಗಳನ್ನು ವರ್ಗಾವಣೆಗಾಗಿ ಪರಿಗಣಿಸತಕ್ಕದ್ದಲ್ಲ.

(iii) ಪ್ರತಿಯೊಂದು ಪ್ರವರ್ಗಗಳಲ್ಲಿ ಜ್ಯೇಷ್ಠತೆಯನ್ನು, ಆದ್ಯತಾ ಕ್ರಮಾನುಸಾರ ಆಧಾರದ ಮೇಲೆ ನಿರ್ಧರಿಸತಕ್ಕದ್ದು.

(iv) 10ನೇ ಪ್ರಕರಣದ ಖಂಡ V ರ ಮೇರೆಗೆ ನಿರ್ದಿಷ್ಟಪಡಿಸಿದ ಕೋರಿಕೆ ವರ್ಗಾವಣೆಗಳು ಹಾಗೂ ಸಾಮಾನ್ಯ ವರ್ಗಾವಣೆಗಳ ಒಟ್ಟು ಸಂಖ್ಯೆಯು 5ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಿದ ವರ್ಗಾವಣೆಯ ಪರಿಮಿತಿಗಳೊಳಗಿರತಕ್ಕದ್ದು.

(v) ವರ್ಗಾವಣೆಗಾಗಿನ ಕೌನ್ಸಿಲಿಂಗ್‌ನ್ನು, 10ನೇ ಪ್ರಕರಣದ (1)ನೇ ಉಪ-ಪ್ರಕರಣದ (i) ರಿಂದ (v)ರ ವರೆಗಿನ ಖಂಡಗಳ ಮೇರೆಗಿನ ಅನುಕ್ರಮದಲ್ಲಿ ಹಾಗೂ ಸಾಮಾನ್ಯ ವರ್ಗದಡಿ ಕೈಗೊಳ್ಳತಕ್ಕದ್ದು.

(vi) ಕೌನ್ಸಿಲಿಂಗ್‌ಗೆ ಹಾಜರಾದ ಶಿಕ್ಷಕರು ಜಿಲ್ಲೆಯೊಳಗಿನ ಯಾವುದೇ ಖಾಲಿ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ವರ್ಗಾವಣೆ ಪ್ರಾಧಿಕಾರವು. ಕಂಪ್ಯೂಟರ್‌ನಲ್ಲಿ ಸೃಜಿಸಿರುವ ವರ್ಗಾವಣಾ ಆದೇಶವನ್ನು ಕೌನ್ಸಿಲಿಂಗ್ ಕೇಂದ್ರದಲ್ಲಿ ತಾನೇ ಸ್ವತಃ ಹೊರಡಿಸತಕ್ಕದ್ದು. ಸೂಕ್ತ ಖಾಲಿ ಹುದ್ದೆಯು ಲಭ್ಯವಿಲ್ಲದಿದ್ದರೆ. ಶಿಕ್ಷಕರು ಹಾಲಿ ಇರುವ ಹುದ್ದೆಯಲ್ಲಿ ಮುಂದುವರಿಯುವುದನ್ನು ಆಯ್ಕೆ ಮಾಡಿಕೊಳ್ಳಬಹುದು. ಈ ಬಗ್ಗೆ ಸಂಬಂಧಪಟ್ಟ ಶಿಕ್ಷಕರಿಂದ ವಚನಾದೇಶವನ್ನು ವರ್ಗಾವಣೆ ಪ್ರಾಧಿಕಾರವು ಪಡೆಯತಕ್ಕದ್ದು. ಆದಾಗ್ಯೂ, ಖಾಲಿ ಹುದ್ದೆಯನ್ನು ಒಂದು ಬಾರಿ ಆಯ್ಕೆ ಮಾಡಿಕೊಂಡರೆ ಅದನ್ನು ಮಾರ್ಪಾಟು ಮಾಡತಕ್ಕದ್ದಲ್ಲ ಅಥವಾ ರದ್ದುಗೊಳಿಸತಕ್ಕದ್ದಲ್ಲ.

19. **ವಲಯ ವರ್ಗಾವಣೆಗಳು.-** (1) ಜಿಲ್ಲೆಯೊಳಗೆ ಕೋರಿಕೆ ವರ್ಗಾವಣೆ ಪೂರ್ಣಗೊಂಡ ತರುವಾಯ ವಲಯ ವರ್ಗಾವಣೆಯ ತಾಲ್ಲೂಕುವಾರು ಅಂತಿಮ ಪಟ್ಟಿಯಲ್ಲಿನ ಶಿಕ್ಷಕರನ್ನು, ತಾಲ್ಲೂಕಿನೊಳಗೆ ವಲಯ 'ಬಿ' ಅಥವಾ ವಲಯ 'ಸಿ' ಯಲ್ಲಿರುವ ಖಾಲಿ ಹುದ್ದೆಗಳಿಗೆ ವರ್ಗಾಯಿಸತಕ್ಕದ್ದು. ಯಾರೇ ಶಿಕ್ಷಕ ಖಾಲಿ ಹುದ್ದೆಯನ್ನು ತೆಗೆದುಕೊಳ್ಳಲು ನಿರಾಕರಿಸಿದರೆ, ಅಥವಾ ಕೌನ್ಸಿಲಿಂಗ್‌ದಿಂದ ವಿಮುಖನಾದರೆ, ಸಕ್ಷಮ ಪ್ರಾಧಿಕಾರವು, ಆ ತಾಲ್ಲೂಕಿನ ಕೌನ್ಸಿಲಿಂಗ್ ಪ್ರಕ್ರಿಯೆ ಪೂರ್ಣಗೊಂಡ ತರುವಾಯ ಪರ್ಯಾಯ ಕೌನ್ಸಿಲಿಂಗ್ ಮುಖಾಂತರ ಅಂಥ ಶಿಕ್ಷಕರನ್ನು ವರ್ಗಾಯಿಸತಕ್ಕದ್ದು.

(2) ತಾಲ್ಲೂಕಿನೊಳಗೆ ಶಿಕ್ಷಕರನ್ನು ವರ್ಗಾವಣೆ ಮಾಡಿದ ತರುವಾಯ, ತಾಲ್ಲೂಕುಗಳಲ್ಲಿ ಖಾಲಿ ಸ್ಥಾನಗಳು ಲಭ್ಯವಿರದೆ ಹಾಗೇ ಉಳಿದಿರುವ ಶಿಕ್ಷಕರನ್ನು ಸಂಯೋಜಿಸತಕ್ಕದ್ದು ಮತ್ತು ಹೊಸ ಆದ್ಯತಾ ಆದೇಶವನ್ನು ಜಿಲ್ಲೆಗ

Scanned with CamScanner

ಸಿದ್ಧಪಡಿಸತಕ್ಕದ್ದು. ಸಂಯೋಜಿತ ಪಟ್ಟಿಯಲ್ಲಿನ ಶಿಕ್ಷಕರನ್ನು, ಜಿಲ್ಲೆಯಲ್ಲಿ ಎಲ್ಲಾದರೂ ವಲಯ 'ಬಿ' ಅಥವಾ ವಲಯ 'ಸಿ' ನಲ್ಲಿ ಯಾವುದೇ ಖಾಲಿ ಹುದ್ದೆಗೆ ವರ್ಗಾಯಿಸಬಹುದು.

(3) ಜಿಲ್ಲೆಯೊಳಗೆ ವಲಯ 'ಬಿ' ನಲ್ಲಾಗಲಿ ಅಥವಾ ವಲಯ 'ಸಿ' ನಲ್ಲಾಗಲಿ ಖಾಲಿ ಹುದ್ದೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ,-

(ಎ) ಭಾವಿತ ಖಾಲಿ ಸ್ಥಾನವನ್ನು ಕೋರಿಕೆ ವರ್ಗಾವಣೆ ಅವಧಿಯಲ್ಲಿ ಆಯ್ಕೆ ಮಾಡಿಕೊಳ್ಳದಿದ್ದರೆ, ಆಗ ಅಂಥ ಶಿಕ್ಷಕನನ್ನು ಮುಂದಿನ ವಲಯ ವರ್ಗಾವಣೆಯವರೆಗೂ ಅದೇ ಶಾಲೆಯಲ್ಲಿ ಮುಂದುವರಿಯಲು ಅವಕಾಶ ಕಲ್ಪಿಸತಕ್ಕದ್ದು.

(ಬಿ) ಭಾವಿತ ಖಾಲಿ ಸ್ಥಾನವನ್ನು ಕೋರಿಕೆ ವರ್ಗಾವಣೆ ಅವಧಿಯಲ್ಲಿ ಆಯ್ಕೆ ಮಾಡಿಕೊಂಡಲ್ಲಿ ಆಗ ಅಂಥ ಶಿಕ್ಷಕನನ್ನು ವಲಯ 'ಎ' ನಲ್ಲಿ ಯಾವುದೇ ಖಾಲಿ ಸ್ಥಾನಕ್ಕೆ ನಿಯೋಜನೆ ಮಾಡತಕ್ಕದ್ದು. ವಲಯ 'ಎ' ವಲಯ 'ಬಿ' ಅಥವಾ ವಲಯ 'ಸಿ' ನಲ್ಲಿ ಎಲ್ಲಾದರೂ ಯಾವುದೇ ಖಾಲಿ ಸ್ಥಾನಗಳು ಲಭ್ಯವಿಲ್ಲದಿದ್ದರೆ ಆಗ ಅಂಥ ಶಿಕ್ಷಕನನ್ನು ವಲಯ 'ಬಿ' ಅಥವಾ ವಲಯ 'ಸಿ' ನಲ್ಲಿ ಅತಿ ಹೆಚ್ಚಿನ ಪಿಟಿಆರ್ ಅನುಪಾತ ಹೊಂದಿರುವ ಶಾಲೆಗಳಲ್ಲಿ ಸ್ಥಳನಿಯುಕ್ತಿ ಮಾಡತಕ್ಕದ್ದು.

**20. ವರ್ಗಾವಣೆಗಳನ್ನು ನಡೆಸುವುದು.-** (1) ಎಲ್ಲ ವರ್ಗಾವಣೆಗಳನ್ನು, ಶಿಕ್ಷಕ ವರ್ಗಾವಣೆ ಪೋರ್ಟಲ್‌ನಲ್ಲಿ ಮಾಹಿತಿ ತಂತ್ರಜ್ಞಾನದ ಮುಖಾಂತರ ಆನ್‌ಲೈನ್ ಕಂಪ್ಯೂಟರೈಸ್ಡ್ ಕೌನ್ಸಿಲಿಂಗ್ ಮೂಲಕ ಮಾತ್ರ ನಡೆಸತಕ್ಕದ್ದು.

(2) ಆದ್ಯತಾ ಪಟ್ಟಿಯಲ್ಲಿರುವ ಅರ್ಜಿದಾರರಿಗೆ, ಪತ್ರಿಕಾಪ್ರಕಟಣೆ, ರೇಡಿಯೋ ಮತ್ತು ದೂರದರ್ಶನದಲ್ಲಿ ಪ್ರಕಟಣೆಗಳ ಮುಖಾಂತರ ಕೌನ್ಸಿಲಿಂಗ್‌ಗಾಗಿ ದಿನಾಂಕಗಳ ಬಗ್ಗೆ ತಿಳಿಸತಕ್ಕದ್ದು. ಅರ್ಜಿದಾರನನ್ನು ಕೌನ್ಸಿಲಿಂಗ್ ದಿನಾಂಕದಂದು ಅವರ ಆದ್ಯತಾ ಕ್ರಮದಲ್ಲಿ ಕರೆಯತಕ್ಕದ್ದು ಮತ್ತು ನಂತರ ಕಂಪ್ಯೂಟರ್ ಪರದೆಯ ಮೇಲೆ ಪ್ರದರ್ಶಿಸಲಾದಂತೆ ಅಂಥ ಕಾಲಾವಧಿಯಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಲು ಕೇಳತಕ್ಕದ್ದು.

**21. ಜ್ಯೇಷ್ಠತಾ ಘಟಕದೊಳಗೆ ಕೋರಿಕೆ ವರ್ಗಾವಣೆಗಳು.-**

(i) ಸಕ್ಷಮ ಪ್ರಾಧಿಕಾರವು ಜ್ಯೇಷ್ಠತಾ ಘಟಕದೊಳಗೆ ವರ್ಗಾವಣೆಗಾಗಿ ಶಿಕ್ಷಕರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಮತ್ತು ಪ್ರಕಟಿಸತಕ್ಕದ್ದು.

(ii) ಶೇ. ಇಪ್ಪತ್ತೈದಕ್ಕಿಂತ ಹೆಚ್ಚು ಖಾಲಿ ಇರುವ ಸ್ಥಾನಗಳಿಗೆ ತಾಲ್ಲೂಕಿನಿಂದ ಸ್ವೀಕರಿಸಲಾದ ಅರ್ಜಿಯನ್ನು ವರ್ಗಾವಣೆಗಾಗಿ ಪರಿಗಣಿಸತಕ್ಕದ್ದಲ್ಲ.

(iii) ವರ್ಗಾವಣೆಗಳಿಗಾಗಿ ಕೌನ್ಸಿಲಿಂಗ್‌ನ್ನು, ಅಧಿನಿಯಮದ 10ನೇ ಪ್ರಕರಣದ (i) ರಿಂದ (v) ಖಂಡಗಳು ಮತ್ತು ಸಾಮಾನ್ಯ ವರ್ಗಗಳ ಅಡಿಯಲ್ಲಿ ಅನುಕ್ರಮವಾಗಿ ಕೈಗೊಳ್ಳತಕ್ಕದ್ದು.

Scanned with CamScanner

ವರ್ಗಾವಣೆಗಳ ಗರಿಷ್ಠ ಪರಿಮಿತಿ ಸಂಖ್ಯೆಯು ತಲುಪುವರೆಗೂ ಅಥವಾ ಎಲ್ಲಾ ಅರ್ಜಿದಾರರು ಮುಕ್ತಾಯವಾಗುವವರೆಗೆ ವರ್ಗಾವಣೆ ಪ್ರಕ್ರಿಯೆ ನಿಯಂತ್ರಣ ಅಧಿಕಾರಿಯು ನಿಗಧಿಪಡಿಸುವ ಕಾಲಮಿತಿವರೆಗೆ ಮುಂದುವರೆಯತಕ್ಕದ್ದು.

24. **ಪರಸ್ಪರ ವರ್ಗಾವಣೆಗಳು.-**

(i) ಅರ್ಹತೆ:

(ಎ) ಕನಿಷ್ಠ ಏಳು ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಿರಬೇಕು:

(ಬಿ) ನಿವೃತ್ತಿಗಿಂತ ಮುಂಚೆ, ಕನಿಷ್ಠ ಐದು ವರ್ಷಗಳ ಉಳಿಕೆ ಸೇವೆಯನ್ನು ಹೊಂದಿರಬೇಕು:

(ಸಿ) ಈ ಮುಂಚೆ ಪರಸ್ಪರ ವರ್ಗಾವಣೆ ಮಾಡಿರತಕ್ಕದ್ದಲ್ಲ.

(ಡಿ) ಇಬ್ಬರೂ ಶಿಕ್ಷಕರು ಪರಸ್ಪರ ವರ್ಗಾವಣೆ ಕೋರಿದಾಗ, ಪ್ರತಿಯೊಬ್ಬರು ಕೆಜಿಐಡಿ ಸಂಖ್ಯೆಗಳ ಮುಖಾಂತರ ಅವರ ಅರ್ಜಿಗಳನ್ನು ಲಿಂಕ್ ಮಾಡುವ ಮೂಲಕ ವರ್ಗಾವಣೆ ಪ್ರಕ್ರಿಯೆ ನಿಯಂತ್ರಣ ಅಧಿಕಾರಿಯಿಂದ ನಿರ್ದಿಷ್ಟ ಪಡಿಸಿದ ರೀತಿಯಲ್ಲಿ ಶಿಕ್ಷಕ ವರ್ಗಾವಣೆ ಪೋರ್ಟಲ್‌ನಲ್ಲಿ ಗೊತ್ತು ಪಡಿಸಿದ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(ii) ಸಕ್ಷಮ ಪ್ರಾಧಿಕಾರವು, ಅರ್ಹ ಸಂದರ್ಭಗಳ (ಪ್ರಕರಣಗಳ) ಅಂತಿಮ ಪಟ್ಟಿಯನ್ನು ಪ್ರಕಟಿಸತಕ್ಕದ್ದು ಮತ್ತು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.

25. **ಆದೇಶಗಳನ್ನು ನೀಡುವುದು.-** ಸಕ್ಷಮ ಪ್ರಾಧಿಕಾರವು, ಕೌನ್ಸಿಲಿಂಗ್ ಕೇಂದ್ರದಲ್ಲಿ ಕೌನ್ಸಿಲಿಂಗ್ ನಡೆಯುವ ಅದೇ ದಿನದಂದು, ಸಂಬಂಧಿಸಿದ ಶಿಕ್ಷಕನಿಗೆ ಕಂಪ್ಯೂಟರ್ ಜನರೇಟೆಡ್ ವರ್ಗಾವಣೆ ಆದೇಶವನ್ನು ನೀಡತಕ್ಕದ್ದು.

26. **ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು.-** ಪ್ರತಿಯೊಂದು ವಿಧದ ವರ್ಗಾವಣೆಯ ಮುಕ್ತಾಯದ ನಂತರ, ವರ್ಗಾವಣೆಗೊಂಡ ಶಿಕ್ಷಕರ ಪಟ್ಟಿಯಲ್ಲಿ ಅವರ ಹೆಸರಿನ ಮುಂದೆ ವರ್ಗಾವಣೆಗೊಂಡ ಸ್ಥಳಗಳನ್ನು ತೋರಿಸುವಂತೆ, ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಪಟ್ಟಿಯನ್ನು ಪ್ರದರ್ಶಿಸಿದ ತರುವಾಯ ವರ್ಗಾವಣೆ ಮಾಡತಕ್ಕದ್ದಲ್ಲ. ಪಟ್ಟಿಯನ್ನು ಪ್ರಕಟಿಸಿದ ತರುವಾಯ ವರ್ಗಾವಣೆ ನಿಯಂತ್ರಣ ಅಧಿಕಾರಿಯ ಪೂರ್ವ ಅನುಮೋದನೆಯಿಲ್ಲದೆ, ಯಾವುದಾದರೂ ವರ್ಗಾವಣೆಗಳನ್ನು ಮಾಡಿದರೆ, ಸಂಬಂಧಿಸಿದ ಸಕ್ಷಮ ಪ್ರಾಧಿಕಾರವನ್ನು ವೈಯಕ್ತಿಕ ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಶಿಸ್ತುಕ್ರಮವನ್ನು ಕೈಗೊಳ್ಳತಕ್ಕದ್ದು.

27. **ಅಧಿಕಾರಿಗಳ ಹೊಣೆಗಾರಿಕೆಗಳು.-** ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು, ವರ್ಗಾವಣೆಗಳನ್ನು ಮಾಡುವಾಗ ಈ ನಿಯಮಗಳ ಉಪಬಂಧಗಳನ್ನು ಪಾಲಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಅವರು ಯಾವುದೇ ಬದಲಾವಣೆಗಳಿಗೆ ವೈಯಕ್ತಿಕವಾಗಿ ಜವಾಬ್ದಾರರಾಗಿರತಕ್ಕದ್ದು ಮತ್ತು ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ದಂಡನೆಯನ್ನು ವಿಧಿಸಲು ಶಿಸ್ತುಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

28. **ಸಾಮಾನ್ಯ ವರ್ಗಾವಣೆಗಳ ತರುವಾಯ ವರ್ಗಾವಣೆಗಳು.-** ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ ಶೈಕ್ಷಣಿಕ ಅವಧಿಯಲ್ಲಿ, ಶಿಕ್ಷಕರ ವರ್ಗಾವಣೆಯನ್ನು ಮಾಡಲು ಇಲಾಖಾ ಮುಖ್ಯಸ್ಥರಿಗೆ ಅಧಿಕಾರ ನೀಡಲಾಗಿದೆ.

(i) ಶಿಸ್ತು ಕ್ರಮವು ಇತ್ಯರ್ಥದಲ್ಲಿರುವಾಗ ಅಮಾನತ್ತುಗೊಂಡಿರುವ ಸ್ಥಾನಕ್ಕೆ ವರ್ಗಾವಣೆ;

Scanned with CamScanner

(iv) ಆದ್ಯತೆಯನ್ನು, ಪ್ರತಿಯೊಂದು ಪ್ರವರ್ಗದೊಳಗೆ, ಆದ್ಯತೆಯ ಕ್ರಮಾನುಸಾರ ತೀರ್ಮಾನಿಸತಕ್ಕದ್ದು.

(v) ಅಧಿನಿಯಮದ 10ನೇ ಪ್ರಕರಣದ (v) ನೇ ಖಂಡದ ಮೇರೆಗೆ **ತೆಗೆದುಕೊಂಡ ಜ್ಯೇಷ್ಠತಾ ಘಟಕದೊಳಗೆ** ಕೋರಿಕೆ ವರ್ಗಾವಣೆಗಳ ಒಟ್ಟು ಸಂಖ್ಯೆಯನ್ನು ಮತ್ತು ಸಾಮಾನ್ಯ ವರ್ಗಾವಣೆಗಳನ್ನು, 5ನೇ ನಿಯಮದ ಮೇರೆಗೆ ನಿರ್ದಿಷ್ಟ ಪಡಿಸಿದ ವರ್ಗಾವಣೆ ಮಿತಿಯೊಳಗೆ ಮಾಡತಕ್ಕದ್ದು.

(vi) ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರು, ಜ್ಯೇಷ್ಠತಾ ಘಟಕದೊಳಗಿನ ಯಾವುದೇ ಖಾಲಿ ಸ್ಥಾನವನ್ನು ಆಯ್ಕೆ ಮಾಡಿಕೊಳ್ಳಬಹುದು. ವರ್ಗಾವಣೆ ಮಾಡುವ ಪ್ರಾಧಿಕಾರವು, ಸ್ವತಃ ಕೌನ್ಸಿಲಿಂಗ್ ಕೇಂದ್ರದಲ್ಲಿ ಕಂಪ್ಯೂಟರ್ ಜನರೇಟೆಡ್ ವರ್ಗಾವಣೆ ಆದೇಶವನ್ನು ನೀಡತಕ್ಕದ್ದು.

ಸೂಕ್ತ ಖಾಲಿ ಹುದ್ದೆ ಲಭ್ಯವಿಲ್ಲದಿದ್ದರೆ, ಶಿಕ್ಷಕ ಹಾಲಿ ಇರುವ ಹುದ್ದೆಯಲ್ಲಿ ಮುಂದುವರೆಯಲು ಆಯ್ಕೆ ಮಾಡಿಕೊಳ್ಳಬಹುದು. ಈ ಸಂಬಂಧ ಶಿಕ್ಷಕನಿಂದ ವಚನಾದೇಶವನ್ನು ವರ್ಗಾವಣೆ ಪ್ರಾಧಿಕಾರವು ಕೌನ್ಸಿಲಿಂಗ್ ಕೇಂದ್ರದಲ್ಲಿ ಪಡೆದುಕೊಳ್ಳತಕ್ಕದ್ದು. ಆದಾಗ್ಯೂ, ಖಾಲಿ ಹುದ್ದೆಯನ್ನು ಒಂದು ಬಾರಿ ಆಯ್ಕೆ ಮಾಡಿಕೊಂಡರೆ ಅದನ್ನು ಮಾರ್ಪಾಡು ಮಾಡತಕ್ಕದ್ದಲ್ಲ ಅಥವಾ ರದ್ದುಗೊಳಿಸತಕ್ಕದ್ದಲ್ಲ.

(vii) ಜಿಲ್ಲೆಯೊಳಗೆ ವರ್ಗಾವಣೆಗೆ ಕೋರಿಕೆಗಳನ್ನು, ಕೌನ್ಸಿಲಿಂಗ್‌ನ ಮೊದಲನೆ ಸುತ್ತಿನಲ್ಲಿ ಪರಿಗಣಿಸತಕ್ಕದ್ದು. ಜಿಲ್ಲೆಯ ಹೊರಗೆ ವರ್ಗಾವಣೆಗೆ ಕೋರಿಕೆಗಳನ್ನು ಕೌನ್ಸಿಲಿಂಗ್‌ನ ಮುಂದಿನ ಸುತ್ತಿನಲ್ಲಿ ಪರಿಗಣಿಸತಕ್ಕದ್ದು.

22. **ಜ್ಯೇಷ್ಠತಾ ಘಟಕದ ಹೊರಗೆ ವರ್ಗಾವಣೆ ಕೋರಿಕೆ.**- ವರ್ಗಾವಣೆ ಘಟಕದ ಹೊರಗೆ ವರ್ಗಾವಣೆಗಾಗಿ ಕೋರಿದ ಶಿಕ್ಷಕನನ್ನು, ಈ ಮುಂದಿನ ಷರತ್ತುಗಳಿಗೊಳಪಟ್ಟು ಪರಿಗಣಿಸಬಹುದು, ಎಂದರೆ:-

(1) ಶೇಕಡಾ ಇಪ್ಪತ್ತೈದಕ್ಕಿಂತ ಹೆಚ್ಚು ಖಾಲಿ ಇರುವ ತಾಲ್ಲೂಕಿನಿಂದ ಸ್ವೀಕರಿಸಿದ ಅರ್ಜಿಯನ್ನು ಪರಿಗಣಿಸತಕ್ಕದ್ದಲ್ಲ;

(2) ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರಬೇಕು;

(3) ಆತನು ತನ್ನ ಜ್ಯೇಷ್ಠತೆಯನ್ನು ಕಳೆದುಕೊಳ್ಳತಕ್ಕದ್ದು ಮತ್ತು ಆತನು ತಾನು ವರ್ಗಾವಣೆಯಾಗಿರುವ ಹೊಸ ಜ್ಯೇಷ್ಠತೆಯ ಘಟಕದಲ್ಲಿ ವೃಂದದಲ್ಲಿ ಎಲ್ಲರಿಗಿಂತಲೂ ಕೆಳ ಸ್ಥಾನದಲ್ಲಿರತಕ್ಕದ್ದು.

(4) ಆತನನ್ನು, ವಿದ್ಯಾರ್ಥಿ ಶಿಕ್ಷಕ ಅನುಪಾತದ ಪ್ರಕಾರ ಹೆಚ್ಚುವರಿ ಶಿಕ್ಷಕರಿರುವ ಘಟಕಕ್ಕೆ ನಿಯೋಜಿಸತಕ್ಕದ್ದಲ್ಲ; ಮತ್ತು

(5) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇತರೆ ಷರತ್ತನ್ನು ಪಾಲಿಸತಕ್ಕದ್ದು.

23. **ಕೌನ್ಸಿಲಿಂಗ್‌ನ್ನು ಪೂರ್ಣಗೊಳಿಸುವುದು.**- ವಲಯ ಮತ್ತು ಕೋರಿಕೆ ವರ್ಗಾವಣೆಗಳ ಮೇರೆಗೆ, ಕಂಪ್ಯೂಟರೈಸ್ಡ್ ಕೌನ್ಸಿಲಿಂಗ್ ಪ್ರಕ್ರಿಯೆ ಮುಖಾಂತರ ವರ್ಗಾವಣೆ ನಿರ್ವಹಣೆಯನ್ನು, 5ನೇ ನಿಯಮದ ಮೇರೆಗೆ

Scanned with CamScanner

(ii) ಮುಂಬಡ್ತಿಗೆ ತತ್ಪರಿಣಾಮವಾದ ವರ್ಗಾವಣೆ;

(iii) ಸಾಮಾನ್ಯ ವರ್ಗಾವಣೆ ಪೂರ್ಣಗೊಂಡ ನಂತರ, ಖಾಲಿ ಸ್ಥಾನಗಳೆಂದು ನಿರ್ದಿಷ್ಟಪಡಿಸಿದ ಯಾವುದಾದರೂ ಹುದ್ದೆಗಳು ಹಾಗೆ ಇದ್ದರೆ, ಸರ್ಕಾರವು, ಗೊತ್ತುಪಡಿಸಿದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವಂಥ ಅರ್ಹ ಶಿಕ್ಷಕನನ್ನು ನೇಮಿಸಬಹುದು; ಮತ್ತು

(iv) ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಚೇರಿ, ಎಸ್‌ಎಸ್‌ಎ ಮತ್ತು ಆರ್‌ಎಮ್‌ಎಸ್‌ಎ ಮುಖ್ಯ ಕಚೇರಿಗಳಲ್ಲಿ, ಡಿಎಸ್‌ಇಆರ್‌ಟಿ, ಕೆಟಿಬಿಎಸ್, ಕೆಎಸ್‌ಇಇಬಿ, ಸಿಟಿಇಗಳು ಡಿಡಿಪಿಐಗಳಂತಹ ಇಲಾಖೆಗಳಂತಹ ಸಾರ್ವಜನಿಕ ಶಿಕ್ಷಣ ಇಲಾಖೆಯ ಇತರೆ ರಾಜ್ಯಮಟ್ಟದ ಕಚೇರಿಗಳಲ್ಲಿನ ಹುದ್ದೆಗಳನ್ನು, ಕೌನ್ಸಿಲಿಂಗ್ ಪ್ರಕ್ರಿಯೆಯ ಹೊರಗಿನ ಆಯ್ಕೆ ಹುದ್ದೆಗಳಾಗಿರತಕ್ಕದ್ದು.

**29.ಅಗತ್ಯವಿದ್ದರೆ, ಯಾರೇ ಶಿಕ್ಷಕರಿಂದ ಆಯ್ಕೆ ಮಾಡದಂತಹ ಸ್ಥಳಗಳಿಗೆ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗಳು.**- ಸಾಮಾನ್ಯ ವರ್ಗಾವಣೆಗಳು ಮುಕ್ತಾಯಗೊಂಡ ನಂತರ, ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಯಾರೇ ಶಿಕ್ಷಕರು ಆಯ್ಕೆ ಮಾಡಿಕೊಳ್ಳದಿದ್ದರೆ ಮತ್ತು ವಿದ್ಯಾರ್ಥಿ ಶಿಕ್ಷಕರ ಅನುಪಾತದ ಆಧಾರದ ಮೇಲೆ ಮತ್ತು ಸಾರ್ವಜನಿಕ ಹಿತಾಸಕ್ತಿಯಲ್ಲಿ ತುಂಬಬೇಕೆಂದು ಅದು ಅಗತ್ಯಪಡಿಸಿದಲ್ಲಿ ರಾಜ್ಯ ಸರ್ಕಾರವು, ಈ ಮುಂದಿನ ಷರತ್ತುಗಳಿಗೆ ಒಳಪಟ್ಟು, ಜ್ಯೇಷ್ಠತೆಯ ಅನುಕ್ರಮ ಘಟಕದೊಳಗೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸಿರುವಂತಹ ಅಂತಹ ಸ್ಥಳಕ್ಕೆ ಯಾರೇ ಶಿಕ್ಷಕನನ್ನು ವರ್ಗಾವಣೆ ಮಾಡಬಹುದು ಎಂದರೆ.-

(i) ವಿದ್ಯಾರ್ಥಿ ಶಿಕ್ಷಕರ ಅನುಪಾತವನ್ನು ಆಧಾರದ ಮೇಲೆ ಹೆಚ್ಚುವರಿ ಶಿಕ್ಷಕರನ್ನು ಹೊಂದಿರುವ ಶಾಲೆಗಳಿಂದ ಮಾತ್ರ ಮತ್ತು ಖಾಲಿ ಹುದ್ದೆಗಳ ಶೇಕಡಾ ಇಪ್ಪತ್ತಕ್ಕಿಂತ ಕಡಿಮೆ ಹೊಂದಿರುವ ತಾಲ್ಲೂಕುಗಳಿಂದ ಅಂತಹ ವರ್ಗಾವಣೆಯನ್ನು ಮಾಡಬಹುದು.

(ii) ಹಾಲಿ ಇರುವ ಖಾಲಿ ಸ್ಥಾನಗಳ ಶೇಕಡಾ ಇಪ್ಪತ್ತಕ್ಕಿಂತ ಅಧಿಕವಾಗಿರುವ ಜಿಲ್ಲೆ ಅಥವಾ ತಾಲ್ಲೂಕು ಅಥವಾ ಶಾಲೆಗೆ ಅಂತಹ ವರ್ಗಾವಣೆಯನ್ನು ಮಾಡತಕ್ಕದ್ದು;

(iii) ಸಂದರ್ಭಾನುಸಾರ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಮುಖಾಂತರ 3ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದಂತೆ ಸಕ್ಷಮ ಪ್ರಾಧಿಕಾರದ ಶಿಫಾರಸ್ಸಿನ ಮೇಲೆ ಅಂತಹ ವರ್ಗಾವಣೆಯನ್ನು ಮಾಡತಕ್ಕದ್ದು;

(iv) ಸಕ್ಷಮ ಪ್ರಾಧಿಕಾರವು, ಕೌನ್ಸಿಲಿಂಗ್ ಪ್ರಕ್ರಿಯೆ ಅವಧಿಯಲ್ಲಿ ಯಾರೂ ಆಯ್ಕೆ ಮಾಡದೆ ಇರುವಂಥ ಖಾಲಿ ಸ್ಥಳಗಳ ಪಟ್ಟಿಯನ್ನು ಪ್ರಕಟಿಸತಕ್ಕದ್ದು ಮತ್ತು ಸಾಮಾನ್ಯ ವರ್ಗಾವಣೆ ನಂತರ ಕೂಡಲೇ ಈ ನಿಯಮದ ಮೇರೆಗೆ ವಿದ್ಯಾರ್ಥಿ ಶಿಕ್ಷಕ ಅನುಪಾತದ ಅನುಸಾರ ಭರ್ತಿ ಮಾಡತಕ್ಕದ್ದು. ಸಕ್ಷಮ ಪ್ರಾಧಿಕಾರವು, ಈ ನಿಯಮದ ಅನುಸಾರ ಸಾಮಾನ್ಯ ವರ್ಗಾವಣೆ ಪೂರ್ಣಗೊಂಡ ನಂತರ ಹಾಗೇ ಅಧಿಸೂಚಿತ ಅಂತಹ ಖಾಲಿ ಸ್ಥಾನಗಳಿಗೆ ವರ್ಗಾವಣೆ ಮಾಡತಕ್ಕದ್ದು ಮತ್ತು ಯಾವುದೇ ಉಲ್ಲಂಘನೆಯನ್ನು ಗಂಭೀರವಾಗಿ ಅವಲೋಕಿಸತಕ್ಕದ್ದು. ಮತ್ತು ಪರಿಗಣಿಸತಕ್ಕದ್ದು;

(v) ಸಕ್ಷಮ ಪ್ರಾಧಿಕಾರವು, ಶಿಕ್ಷಕರು ಹೆಚ್ಚುವರಿ ಇರುವ ಜಿಲ್ಲೆಗಳಲ್ಲಿ ಅಂತಹ ಹೆಚ್ಚುವರಿ ವಿಷಯವಾರು ಶಿಕ್ಷಕರ ಅಂಕಿ ಅಂಶಗಳನ್ನು ಪ್ರಕಟಿಸಬೇಕು. ಆದರೆ ಶಾಲೆಗಳ ಅಥವಾ ಶಿಕ್ಷಕರ ಹೆಸರುಗಳನ್ನು ಪ್ರಕಟಿಸತಕ್ಕದ್ದಲ್ಲ; ಮತ್ತು

Scanned with CamScanner

(vi) ಸ್ಟುಡೆಂಟ್–ಅಚೀವ್‌ಮೆಂಟ್ ಟ್ರಾಕಿಂಗ್ ಸಿಸ್ಟಂ (ಎಸ್‌ಎಟಿಎಸ್) ಡಾಟಾ ಮತ್ತು ಟೀಚರ್ ಡಾಟಾ ಸಿಸ್ಟಂ (ಟಿಡಿಎಸ್) ಡಾಟಾವನ್ನು, ಶಾಲೆಗಳಲ್ಲಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಖ್ಯಾಬಲ ಅವರ ನಡುವಿನ ಅನುಪಾತವನ್ನು ನಿರ್ಧರಿಸುವುದಕ್ಕಾಗಿ ಮತ್ತು ಶಾಲೆಗಳಲ್ಲಿ ಅಥವಾ ತಾಲ್ಲೂಕುಗಳಲ್ಲಿ ಅಥವಾ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಇತರ ಸಂಬಂಧಿಸಿದ ಅಂಕಿ ಅಂಶಗಳ ಮಾಹಿತಿಗೆ ಉಪಯೋಗಿಸತಕ್ಕದ್ದು.

**30. ನಿರಸನ ಮತ್ತು ಉಳಿಸುವಿಕೆಗಳು.–** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಮಗಳು) ನಿಯಮಗಳು, 2017. ಪದವಿಪೂರ್ವ ಕಾಲೇಜಿನ ಉಪನ್ಯಾಸಕರು ಅಥವಾ ಪ್ರಾಂಶುಪಾಲರ ವರ್ಗಾವಣೆಗೆ ಸಂಬಂಧಿಸಿದ ಉಪಬಂಧಗಳನ್ನು ಹೊರತುಪಡಿಸಿ, ಈ ಮೂಲಕ ನಿರಸನಗೊಳಿಸಲಾಗಿದೆ:
ಪರಂತು,

(ಎ) ಸದರಿ ನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮಕ್ಕೆ ಅಥವಾ

(ಬಿ) ಸದರಿ ನಿಯಮಗಳ ಹಿಂದಿನ ನಿರ್ವಹಣೆಗೆ ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಯಾವುದೇ ಕ್ರಮ ಅಥವಾ ಕೈಗೊಂಡ ಕ್ರಮಕ್ಕೆ; ಅಥವಾ

(ಸಿ) ಸದರಿ ನಿಯಮಗಳ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ಗುರಿಯಾದ ಯಾವುದೇ ಹಕ್ಕು ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಗಳಿಗೆ; ಅಥವಾ

(ಡಿ) ಸದರಿ ನಿಯಮಗಳ ಮೇರೆಗೆ, ಮಾಡಲಾದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಗುರಿಯಾದ ಯಾವುದೇ ದಂಡ ಅಥವಾ ಶಿಕ್ಷೆಗೆ,

– ಅಂತಹ ನಿರಸನವು ಬಾಧಕವಾಗತಕ್ಕದ್ದಲ್ಲ.

ಮತ್ತೂ ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ III) ರ 6ನೇ ಪ್ರಕರಣದ ಉಪಬಂಧಗಳು, ಸದರಿ ನಿಯಮಗಳ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಶೇಖರ)

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಾಥಮಿಕ)(ಪ್ರ),
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ.

**GOVERNMENT OF KARNATAKA**

**No: EP 3 ETR 2020**

Karnataka Government Secretariat,
6th Floor, M.S.Building,
Bangalore, Dated: 22/07/2020.

**NOTIFICATION**

The draft of the following rules which the Government of Karnataka proposes to make in exercise of the powers conferred by sub-section (1) of section 18of the Karnataka State Civil Services (Regulation of Transfer of Teachers) Act, 2020 (Karnataka Act 4 of 2020) is hereby published as required by sub-section (1) of

Scanned with CamScanner

ಅನುಬಂಧ 2 & 3



ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು**

ಸಂಖ್ಯೆ: ಸಿ3(4)ನಿ.ಹು.ಅ.ಪ:77/2020-21 ದಿನಾಂಕ:07.12.2021

**:: ಜ್ಞಾಪನ ::**

**ವಿಷಯ:**-2021-22 ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ (Specified Post) ಲಿಖಿತ ಪರೀಕ್ಷೆ ನಡೆಸುವ ಮೂಲಕ ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:**-1] ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 12 ಶಾಸನ 2020 ದಿನಾಂಕ:27-03-2020.

2] ಸರ್ಕಾರದ ರಾಜ್ಯ ಪತ್ರದ ಅಧಿಸೂಚನೆ ಸಂಖ್ಯೆ:ಇಪಿ 8 ಇ.ಟಿ.ಆರ್.2020. ದಿನಾಂಕ:17-06-2020.

3] ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 16 ಇಟಿಆರ್ 2017 ದಿ:18-12-2017.

4] ಸರ್ಕಾರದ ಆದೇಶ ಸಂಖ್ಯೆ:ಇಪಿ 47 ಪಿಬಿಎಸ್ 2020 ದಿನಾಂಕ:12.11.2021

-&&&-

ಸಾರ್ವಜನಿಕ ಶಿಕ್ಷಣ ಇಲಾಖೆಯು ರಾಜ್ಯದಲ್ಲಿ ಶಾಲಾ ವಯೋಮಾನದ ಮಕ್ಕಳ ಸಾರ್ವತ್ರಿಕ ದಾಖಲಾತಿ/ ಹಾಜರಾತಿ, ಶಾಲೆಯಲ್ಲಿ ಉಳಿಯುವಿಕೆಯನ್ನು ಸಾಧಿಸುವುದಲ್ಲದೆ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಲು ಕ್ರಮ ಕೈಗೊಳ್ಳುತ್ತಿದೆ. ಇದಕ್ಕಾಗಿ ಹಲವಾರು ಪ್ರೋತ್ಸಾಹಕ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಈ ರೀತಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವಲ್ಲಿ ಅನುಷ್ಟಾನ, ಮೇಲ್ವಿಚಾರಣೆ, ಉಸ್ತುವಾರಿ ಮತ್ತು ಮಾರ್ಗದರ್ಶನ ಅತೀ ಮುಖ್ಯವೆಂಬುದನ್ನು ಮನಗಾಣಲಾಗಿದ್ದು, ಅಂತಹ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಶೈಕ್ಷಣಿಕ ಉಸ್ತುವಾರಿ ಅಧಿಕಾರಿ/ಸಿಬ್ಬಂದಿ ನೇಮಕದ ಅವಶ್ಯಕತೆ ಇರುತ್ತದೆ. ಇಂತಹ ಇಲಾಖಾ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಅರ್ಹ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು/ಅಧಿಕಾರಿಗಳನ್ನು ಆಯ್ಕೆಮಾಡಿ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ (Specified Post) ನಿಯೋಜಿಸಲು "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020" ಸೆಕ್ಷನ್ 8(1)ರಲ್ಲಿ ಹಾಗೂ "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2020"ರ ನಿಯಮ-15ರಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಉಲ್ಲೇಖ(3)ರಲ್ಲಿ ಆದೇಶಿಸಿರುವಂತೆ ಪಠ್ಯಕ್ರಮಗಳನ್ನು, ಅನುಸರಿಸಲಾಗುತ್ತಿದ್ದು ಆಯ್ಕೆ ಪರೀಕ್ಷೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರ ವತಿಯಿಂದ ನಡೆಸಲಾಗುವುದು.

ಅದರಂತೆ 2021-22ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ನಿರ್ದಿಷ್ಟ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸುವ ಮೂಲಕ ಭರ್ತಿ ಮಾಡಲು ಉದ್ದೇಶಿಸಲಾಗಿದ್ದು, ಕೆಳಕಂಡಂತೆ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ

(1) **ಉಲ್ಲೇಖಿತ ಸರ್ಕಾರದ ಅಧಿಸೂಚನೆಗಳಲ್ಲಿ ನಿಗದಿಪಡಿಸಿರುವಂತೆ ನಿರ್ದಿಷ್ಟ ಪಡಿಸಿದ ಹುದ್ದೆಗಳ ಆಯ್ಕೆಯ ಪರೀಕ್ಷೆಗೆ ಒಳಪಡುವ ಹುದ್ದೆಗಳ ವಿವರ,**

- **ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಶ್ರೇಣಿಯ ಹುದ್ದೆಗಳ ವಿವರ**
  1. ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು[ಸಿ.ಆರ್.ಪಿ]
  2. ಕ್ಷೇತ್ರ ಸಂಪನ್ಮೂಲ ವ್ಯಕ್ತಿ[ಬಿ.ಆರ್.ಪಿ]
  3. ಶಿಕ್ಷಣ ಸಂಯೋಜಕರು[ಪ್ರಾಥಮಿಕ]

- **ಪ್ರೌಢಶಾಲಾ ಶಿಕ್ಷಕರ ತತ್ಸಮಾನ ಶ್ರೇಣಿಯ ಹುದ್ದೆಗಳ ವಿವರ**
  1. ಕ್ಷೇತ್ರ ಸಂಪನ್ಮೂಲ ವ್ಯಕ್ತಿ[ಬಿ.ಆರ್.ಪಿ-ಪ್ರೌಢ]
  2. ಶಿಕ್ಷಣ ಸಂಯೋಜಕರು[ಪ್ರೌಢ]

➢ **ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಹುದ್ದೆಗಳ ವಿವರ.**
1. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ (ಬಿ.ಆರ್.ಸಿ).
2. ಸಹಾಯಕ ಯೋಜನಾ ಸಮನ್ವಯಾಧಿಕಾರಿ [ಎ.ಪಿ.ಸಿ] ,ಸಮಗ್ರ ಶಿಕ್ಷಣ ಕರ್ನಾಟಕ
3. ವಿಷಯ ಪರಿವೀಕ್ಷಕರು, ಉಪನಿರ್ದೇಶಕರ ಕಛೇರಿ ಮತ್ತು ವಿಭಾಗೀಯ ಸಹ ನಿರ್ದೇಶಕರ ಕಛೇರಿ
4. ಸಹಾಯಕ ನಿರ್ದೇಶಕರು [ಮಧ್ಯಾಹ್ನ ಉಪಹಾರ ಯೋಜನೆ]

**(2) ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ಸಿ.ಆರ್.ಪಿ, ಬಿ.ಆರ್.ಪಿ, ಮತ್ತು ಶಿಕ್ಷಣ ಸಂಯೋಜಕರ ಹುದ್ದೆಗಳಿಗೆ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು:-**

1. ಖಾಯಂ ಪೂರ್ವ ಸೇವಾವಧಿ ತೃಪ್ತಿಕರವಾಗಿ ಘೋಷಣೆಯಾಗಿರಬೇಕು.
2. ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಅಭ್ಯರ್ಥಿಗಳ ವಯೋಮಿತಿ 55 ವರ್ಷಗಳನ್ನು ಮೀರಿರಬಾರದು.
3. ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಲ್ಲಿ ಕನಿಷ್ಠ 10 ವರ್ಷಗಳ ಒಟ್ಟು ಬೋಧನಾ ಅನುಭವ ಇರಬೇಕು. [ಶಿಕ್ಷಣ ಸಂಯೋಜಕರ ಹುದ್ದೆಗೆ ಈ ಷರತ್ತು ಅನ್ವಯಿಸುವುದಿಲ್ಲ. ಏಕೆಂದರೆ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು/ಪದವೀಧರೇತರ ಮುಖ್ಯ ಶಿಕ್ಷಕರುಗಳು ಈಗಾಗಲೇ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವಾನುಭವ ಹೊಂದಿ ಜೇಷ್ಠತೆಯ ಆಧಾರದ ಮೇಲೆ ಪದವೀಧರೇತರ ಮುಖ್ಯ ಶಿಕ್ಷಕರು/ಮುಖ್ಯಶಿಕ್ಷಕರಾಗಿ ಬಡ್ತಿ ಪಡೆದಿರುವುದರಿಂದ ಈ ಷರತ್ತಿನಿಂದ ವಿನಾಯಿತಿ ನೀಡಲಾಗಿದೆ]. (2018-19ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ಸ್ಥಳನಿಯುಕ್ತಿಗೊಂಡಿರುವ ಶಿಕ್ಷಕರು ಹಿಂದಿನ ಶಾಲಾ ಅವಧಿಯನ್ನು ಗಣನೆಗೆ ತೆಗೆದುಕೊಂಡು ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 27 ಶಾಸನ 2021 ದಿನಾಂಕ:29.04.2021 ರನ್ವಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಅಥವಾ ಜಿಲ್ಲೆಯೊಳಗೆ ಒಂದು ಸಲದ ಕ್ರಮವಾಗಿ (One time measure) ನಿಯಮಿಸಬಹುದಾಂತಹ ರೀತಿಯಲ್ಲಿ ವರ್ಗಾವಣೆಗೊಂಡು ಸ್ಥಳ ಆಯ್ಕೆ ಮಾಡಿಕೊಂಡ ಶಿಕ್ಷಕರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ)
4. ಮೇಲಿನ ಷರತ್ತಿನೊಂದಿಗೆ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಅರ್ಜಿ ಸಲ್ಲಿಸುತ್ತಿರುವ ಅಭ್ಯರ್ಥಿಯು ಪ್ರಸ್ತುತ ಹುದ್ದೆ ಮತ್ತು ಸ್ಥಳದಲ್ಲಿ ಕನಿಷ್ಠ 3 ವರ್ಷಗಳ ಸೇವೆಯನ್ನು ಪೂರೈಸಿರಬೇಕು.
5. ಸದರಿ ನಿರ್ದಿಷ್ಟಪಡಿಸಿದ ಹುದ್ದೆಗಳ ಕಾರ್ಯಾವಧಿ ಗರಿಷ್ಠ ಅವಧಿ 5 ವರ್ಷ. ಸದರಿ ಅವಧಿ ಪೂರ್ಣಗೊಳಿಸಿದ ನಂತರ ವರ್ಗಾವಣೆ ನಿಯಮಾನುಸಾರ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲಾಗುವುದು
6. ಈ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಂಡವರಿಗೆ ಮುಂದಿನ 3 ವರ್ಷಗಳ ಅವಧಿಯೊಳಗೆ ಯಾವುದೇ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ (ಶಿಸ್ತು ಪ್ರಕರಣಗಳನ್ನು ಹೊರತುಪಡಿಸಿ).
7. ಈ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಈಗಾಗಲೇ ಒಂದು ಬಾರಿ ಸದರಿ ಅಧಿಸೂಚಿತ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ನಂತರ ಕನಿಷ್ಠ ಶಾಲೆಗಳಲ್ಲಿ 05 ವರ್ಷಗಳು ಬೋಧನಾ ಕಾರ್ಯದಲ್ಲಿ ಕರ್ತವ್ಯ ನಿರ್ವಹಿಸಿರಬೇಕು.
8. ಈ ವೃಂದಗಳಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದೇ ಇರುವ ಅಭ್ಯರ್ಥಿಗಳು ಮುಂದಿನ ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ.
9. ಈ ಹುದ್ದೆಗಳಿಗೆ ಆಯ್ಕೆ ಬಯಸಿ ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಯು ಕಡ್ಡಾಯವಾಗಿ ತಮ್ಮ ಸಂಪೂರ್ಣ ಸೇವಾ ಮಾಹಿತಿಯನ್ನು ಇಇಡಿಎಸ್‌ನಲ್ಲಿ ನಮೂದಿಸಿರಬೇಕು.
10. ಇತರೆ ತಾಂತ್ರಿಕ ಸಹಾಯಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು/ಉನ್ನತ ವ್ಯಾಸಂಗದ ನಿಯೋಜನೆ ಮೇಲಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
11. ಇಲಾಖಾ ವಿಚಾರಣೆ/ಶಿಸ್ತು ಪ್ರಕರಣ/ನ್ಯಾಯಾಲಯದ ಪ್ರಕರಣ/ಎಸಿಬಿ/ಲೋಕಾಯುಕ್ತ/ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
12. ಈ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಯಾವುದೇ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿರಬಾರದು. ಒಂದು ವೇಳೆ ಪದಾಧಿಕಾರಿಗಳಾಗಿದ್ದಲ್ಲಿ ಆ ಹುದ್ದೆಯನ್ನು ತ್ಯಜಿಸಿ ಆ ಬಗ್ಗೆ ಲಿಖಿತ ಮುಚ್ಚಳಿಕೆಯನ್ನು ನೀಡಿದ ನಂತರ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಹುದ್ದೆಗೆ ವರದಿ

ಮಾಡಿಕೊಳ್ಳತಕ್ಕದ್ದು. ಸದರಿ ಹುದ್ದೆಯ ಅವಧಿಯಲ್ಲಿ ಯಾವುದೇ ಸಂಘ ಸಂಸ್ಥೆಯ ಪದಾಧಿಕಾರಿಗಳಾಗಲು ಅವಕಾಶವಿರುವುದಿಲ್ಲ.

13. ಸರ್ಕಾರದ ಆದೇಶ ಸಂಖ್ಯೆ:ಇಪಿ 47 ಪಿಬಿಎಸ್ 2020 ದಿನಾಂಕ:12.11.2021 ರನ್ವಯ ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಶಿಕ್ಷಣ ಸಂಯೋಜಕ ಹುದ್ದೆಗಳಿಗೆ ಪದವೀಧರೇತರ ಮುಖ್ಯ ಶಿಕ್ಷಕರು ಮಾತ್ರ ಅರ್ಜಿ ಸಲ್ಲಿಸುವುದು ಎಂಬ ಅರ್ಹತೆಯನ್ನು ಸಡಿಲಿಸಿ. ಪದವಿಧರೇತರ ಮುಖ್ಯ ಶಿಕ್ಷಕರ (ದಿನಾಂಕ:19.05.2017ರ ವೃಂದ ಬಲ ಆದೇಶದಲ್ಲಿ ಪದನಾಮಿಕರಿಸಿರುವಂತೆ ಹಿರಿಯ ಮುಖ್ಯ ಶಿಕ್ಷಕರು ಎಂಬುದಾಗಿದೆ) ಜೊತೆಗೆ ಪ್ರಾಥಮಿಕ ಶಾಲಾ ಎಲ್ಲಾ ಮುಖ್ಯ ಶಿಕ್ಷಕ ವೃಂದದವರು ಸಹ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
14. ಸಿ.ಆರ್.ಪಿ. ಬಿ.ಆರ್.ಪಿ. ಮತ್ತು ಶಿಕ್ಷಣ ಸಂಯೋಜಕರ ಹುದ್ದೆಯ ಕಾರ್ಯಭಾರಗಳನ್ನು ಅವರ ಜಾಬ್ ಚಾರ್ಟ್‌ನಲ್ಲಿ ಸೂಚಿಸಿರುವಂತೆ ನಿರ್ವಹಿಸಲು ಅಭ್ಯರ್ಥಿಯು ಸದೃಢರಾಗಿರಬೇಕು ಮತ್ತು ಆರೋಗ್ಯವಂತರಾಗಿರಬೇಕು. ಗಂಭೀರ ಕಾಯಿಲೆಗಳಿಂದ (ಕ್ಯಾನ್ಸರ್. ಮೂತ್ರ ಪಿಂಡ ವೈಫಲ್ಯ. ಹೃದಯ ಸಂಬಂಧಿತ ಕಾಯಿಲೆಗಳು ಇವೇ ಮುಂತಾದವು) ಬಳಲುತ್ತಿರುವವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
15. ಬಿ.ಐ.ಇ.ಆರ್.ಟಿ ಶಿಕ್ಷಕರು. ದೈಹಿಕ ಶಿಕ್ಷಣ ಶಿಕ್ಷಕರು. ವೃತ್ತಿ ಶಿಕ್ಷಕರು ಹಾಗೂ ಇತರೆ ವಿಶೇಷ ಶಿಕ್ಷಕರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
16. ಪ್ರಸ್ತುತ ಬಿ.ಆರ್.ಪಿ/ಶಿಕ್ಷಣ ಸಂಯೋಜಕರ ಹುದ್ದೆಗಳಲ್ಲಿ 05 ವರ್ಷಗಳ ಸೇವೆಯನ್ನು ಪೂರೈಸಿ ಹೊರಹೋಗುತ್ತಿರುವ ಅಭ್ಯರ್ಥಿಗಳು ಅಧಿಸೂಚಿತ ಹುದ್ದೆಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
17. ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಆಯಾ ಜಿಲ್ಲೆಯ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಬೇಕು. ಆಯಾ ಜಿಲ್ಲೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆದ್ಯತೆ/ಮೆರಿಟ್ ಆಧಾರದ ಮೇಲೆ ಸ್ಥಳ ಹಂಚಿಕೆ ಮಾಡಲಾಗುವುದು.
18. ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ ಕೌನ್ಸಲಿಂಗ್‌ಗೆ ಗೈರು ಹಾಜರಾದ ಹಾಗೂ ಕೌನ್ಸಲಿಂಗ್ ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಕರ್ತವ್ಯಕ್ಕೆ ಹಾಜರಾಗದಿರುವವರು. ಮುಂದಿನ 05 ವರ್ಷ ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
19. ಅರ್ಜಿದಾರರು ಆನ್‌ಲೈನ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಿರುವ ಮಾಹಿತಿಯು ಸತ್ಯ ನಿಷ್ಠವಾಗಿಲ್ಲದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ. ಶಿಸ್ತುಕ್ರಮ ಕೈಗೊಳ್ಳಲಾಗುವುದು.

**3) ಸರ್ಕಾರಿ <u>ಪ್ರೌಢ ಶಾಲಾ ಸಹಶಿಕ್ಷಕರ ವೃಂದದ ಕ್ಷೇತ್ರ ಸಂಪನ್ಮೂಲ ವ್ಯಕ್ತಿ [ಬಿ.ಆರ್.ಪಿ-ಪ್ರೌಢ] ಶಿಕ್ಷಣ ಸಂಯೋಜಕರು[ಪ್ರೌಢ] ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು:-</u>**

**ಬಿ.ಆರ್.ಪಿ. ಮತ್ತು ಶಿಕ್ಷಣ ಸಂಯೋಜಕರ (ಪ್ರೌಢಶಾಲಾ ಕೇಡರ್) ಭರ್ತಿ ಮಾಡುವ ವಿಧಾನ:**

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 16 ಇಟಿಆರ್ 2017 ದಿನಾಂಕ: 18-12-2017 ರನ್ವಯ ಶಿಕ್ಷಣ ಸಂಯೋಜಕರು ಮತ್ತು ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು (ಪ್ರೌಢಶಾಲಾ ಸಹಶಿಕ್ಷಕರ ತತ್ಸಮಾನ ವೃಂದ) ಈ ಹುದ್ದೆಗಳನ್ನು ಪ್ರೌಢಶಾಲಾ ಸಹಶಿಕ್ಷಕರ ವೃಂದದಿಂದ ಲಿಖಿತ ಪರೀಕ್ಷೆ ಮೂಲಕ ಆಯ್ಕೆ ಮಾಡಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗಧಿಪಡಿಸಿದೆ.

**ಬಿ.ಆರ್.ಪಿ ಶಿಕ್ಷಣ ಸಂಯೋಜಕರ (ಪ್ರೌಢಶಾಲಾ ಕೇಡರ್) ಹುದ್ದೆಗಳನ್ನು ಭರ್ತಿ ಮಾಡುವ ವಿಧಾನ:**

ಸರ್ಕಾರಿ ಪ್ರೌಢಶಾಲಾ ಕಲಾ/ವಿಜ್ಞಾನ ಸಹ ಶಿಕ್ಷಕರ ವೃಂದದ ಶಿಕ್ಷಕರು ಈ ಕೆಳಕಂಡ ಅರ್ಹತೆ ಆಧರಿಸಿ ಆನ್ ಲೈನ್ ಮೂಲಕ ಪರೀಕ್ಷೆಗೆ ನೋಂದಾಯಿಸಲು ಅರ್ಹರಿರುತ್ತಾರೆ.

1. ಈ ಹುದ್ದೆಗಳಿಗೆ ಆಯ್ಕೆ ಬಯಸಿ ಅರ್ಜಿಯನ್ನು ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಯು ಕಡ್ಡಾಯವಾಗಿ ಶಿಕ್ಷಕರ ದತ್ತಾಂಶ ಸಂಗ್ರಹಣೆ ತಂತ್ರಾಂಶ ಇಇಡಿಎಸ್‌ನಲ್ಲಿ ತಮ್ಮ ಸಂಪೂರ್ಣ ಸೇವಾ ಮಾಹಿತಿಯನ್ನು ನಮೂದಿಸಿರಬೇಕು.
2. ಖಾಯಂ ಪೂರ್ವ ಸೇವಾವಧಿ ತೃಪ್ತಿಕರವಾಗಿ ಘೋಷಣೆಯಾಗಿರಬೇಕು.
3. ಶಿಕ್ಷಣ ಸಂಯೋಜಕರು(ಪ್ರೌಢ) ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಸಹಶಿಕ್ಷಕ/ಟಿಜಿಟಿ ವೃಂದದವರು ಕ್ರಮವಾಗಿ ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರಾಗಿ/ಟಿ.ಜಿ.ಟಿ+ಪ್ರೌಢಶಾಲಾ ಸಹ ಶಿಕ್ಷಕರಾಗಿ(ಒಟ್ಟಾರೆ 10 ವರ್ಷಗಳು ಬೋಧನಾನುಭವ) ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು

ಸೇವಾನುಭವವಿರಬೇಕು. ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು. (2018-19ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ಸ್ಥಳನಿಯುಕ್ತಿಗೊಂಡಿರುವ ಶಿಕ್ಷಕರು ಹಿಂದಿನ ಶಾಲಾ ಅವಧಿಯನ್ನು ಗಣನೆಗೆ ತೆಗೆದುಕೊಂಡು ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 27 ಶಾಸನ 2021 ದಿನಾಂಕ:29.04.2021 ರನ್ವಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಅಥವಾ ಜಿಲ್ಲೆಯೊಳಗೆ ಒಂದು ಸಲದ ಕ್ರಮವಾಗಿ (One time measure) ನಿಯಮಿಸಬಹುದಾಂತಹ ರೀತಿಯಲ್ಲಿ ವರ್ಗಾವಣೆಗೊಂಡು ಸ್ಥಳ ಅಯ್ಕೆ ಮಾಡಿಕೊಂಡ ಶಿಕ್ಷಕರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ)

4. ಶಿಕ್ಷಣ ಸಂಯೋಜಕರು(ಪ್ರೌಢ- ಉರ್ದು/ಮರಾಠಿ/ತೆಲುಗು/ತಮಿಳು) ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಸಹಶಿಕ್ಷಕರ ವೃಂದದವರು ಪ್ರೌಢಶಾಲೆಗಳಲ್ಲಿ ಆಯಾ ಮಾಧ್ಯಮದ ಸಹ ಶಿಕ್ಷಕರಾಗಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರೌಢಶಾಲೆಗಳಲ್ಲಿ ಸೇವಾನುಭವವಿರಬೇಕು. ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು. (2018-19ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ಸ್ಥಳನಿಯುಕ್ತಿಗೊಂಡಿರುವ ಶಿಕ್ಷಕರು ಹಿಂದಿನ ಶಾಲಾ ಅವಧಿಯನ್ನು ಗಣನೆಗೆ ತೆಗೆದುಕೊಂಡು ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 27 ಶಾಸನ 2021 ದಿನಾಂಕ:29.04.2021 ರನ್ವಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಅಥವಾ ಜಿಲ್ಲೆಯೊಳಗೆ ಒಂದು ಸಲದ ಕ್ರಮವಾಗಿ (One time measure) ನಿಯಮಿಸಬಹುದಾಂತಹ ರೀತಿಯಲ್ಲಿ ವರ್ಗಾವಣೆಗೊಂಡು ಸ್ಥಳ ಅಯ್ಕೆ ಮಾಡಿಕೊಂಡ ಶಿಕ್ಷಕರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ)

5. ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು(ಪ್ರೌಢ-ಕಲಾ)ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಕಲಾ/ಭಾಷಾ ಸಹಶಿಕ್ಷಕ ವೃಂದದವರು (ಹಿಂದಿ ಶಿಕ್ಷಕರನ್ನು ಹೊರತುಪಡಿಸಿ)ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರಾಗಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರೌಢಶಾಲೆಗಳಲ್ಲಿ ಸೇವಾನುಭವವಿರಬೇಕು. ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು. (2018-19ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ಸ್ಥಳನಿಯುಕ್ತಿಗೊಂಡಿರುವ ಶಿಕ್ಷಕರು ಹಿಂದಿನ ಶಾಲಾ ಅವಧಿಯನ್ನು ಗಣನೆಗೆ ತೆಗೆದುಕೊಂಡು ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 27 ಶಾಸನ 2021 ದಿನಾಂಕ:29.04.2021 ರನ್ವಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಅಥವಾ ಜಿಲ್ಲೆಯೊಳಗೆ ಒಂದು ಸಲದ ಕ್ರಮವಾಗಿ (One time measure) ನಿಯಮಿಸಬಹುದಾಂತಹ ರೀತಿಯಲ್ಲಿ ವರ್ಗಾವಣೆಗೊಂಡು ಸ್ಥಳ ಅಯ್ಕೆ ಮಾಡಿಕೊಂಡ ಶಿಕ್ಷಕರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ)

6. ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು(ಪ್ರೌಢ-ವಿಜ್ಞಾನ) ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಪಿಸಿಎಂ/ಸಿಬಿಝೆಡ್ ಸಹಶಿಕ್ಷಕ/ಟಿಜಿಟಿ ವೃಂದದವರು ಕ್ರಮವಾಗಿ ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರಾಗಿ/ಟಿ.ಜಿ.ಟಿ+ಪ್ರೌಢಶಾಲಾ ಸಹ ಶಿಕ್ಷಕರಾಗಿ(ಒಟ್ಟಾರೆ 10 ವರ್ಷಗಳ ಬೋಧನಾನುಭವ) ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಸೇವಾನುಭವವಿರಬೇಕು ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು (2018-19ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ಸ್ಥಳನಿಯುಕ್ತಿಗೊಂಡಿರುವ ಶಿಕ್ಷಕರು ಹಿಂದಿನ ಶಾಲಾ ಅವಧಿಯನ್ನು ಗಣನೆಗೆ ತೆಗೆದುಕೊಂಡು ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 27 ಶಾಸನ 2021 ದಿನಾಂಕ:29.04.2021 ರನ್ವಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಅಥವಾ ಜಿಲ್ಲೆಯೊಳಗೆ ಒಂದು ಸಲದ ಕ್ರಮವಾಗಿ (One time measure) ನಿಯಮಿಸಬಹುದಾಂತಹ ರೀತಿಯಲ್ಲಿ ವರ್ಗಾವಣೆಗೊಂಡು ಸ್ಥಳ ಅಯ್ಕೆ ಮಾಡಿಕೊಂಡ ಶಿಕ್ಷಕರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ)

7. ಬಿ.ಐ.ಇ.ಆರ್.ಟಿ.. ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಎಲ್ಲಾ ವಿಶೇಷ ಶಿಕ್ಷಕರು ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
8. ಪ್ರಸ್ತುತ ಬಿ.ಆರ್.ಪಿ/ಶಿಕ್ಷಣ ಸಂಯೋಜಕರ ಹುದ್ದೆಗಳಲ್ಲಿ 05 ವರ್ಷಗಳ ಸೇವೆಯನ್ನು ಪೂರೈಸಿ ಹೊರಹೋಗುತ್ತಿರುವ ಅಭ್ಯರ್ಥಿಗಳು ಅಧಿಸೂಚಿತ ಹುದ್ದೆಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
9. ಮೇಲಿನ ಷರತ್ತಿನೊಂದಿಗೆ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಅರ್ಜಿ ಸಲ್ಲಿಸುತ್ತಿರುವ ಅಭ್ಯರ್ಥಿಯು ಪ್ರಸ್ತುತ ಹುದ್ದೆ ಮತ್ತು ಸ್ಥಳದಲ್ಲಿ ಕನಿಷ್ಠ 3 ವರ್ಷಗಳ ಸೇವೆಯನ್ನು ಪೂರೈಸಿರಬೇಕು.

10. ಸದರಿ ನಿರ್ದಿಷ್ಟಪಡಿಸಿದ ಹುದ್ದೆಗಳ ಗರಿಷ್ಠ ಅವಧಿ 5 ವರ್ಷ. ಸದರಿ ಅವಧಿ ಪೂರ್ಣಗೊಳಿಸಿದ ನಂತರ ವರ್ಗಾವಣೆ ನಿಯಮಾನುಸಾರ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲಾಗುವುದು
11. ಈ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಂಡವರಿಗೆ ಮುಂದಿನ 3 ವರ್ಷಗಳ ಅವಧಿಯಲ್ಲಿ ಯಾವುದೇ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ (ಶಿಸ್ತು ಪ್ರಕರಣಗಳನ್ನು ಹೊರತುಪಡಿಸಿ).
12. ಈ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಈಗಾಗಲೇ ಒಂದು ಬಾರಿ ಸದರಿ ಅಧಿಸೂಚಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ನಂತರ ಕನಿಷ್ಠ 05 ವರ್ಷಗಳು ಬೋಧನಾ ಕಾರ್ಯದಲ್ಲಿ ಕರ್ತವ್ಯ ನಿರ್ವಹಿಸಿರಬೇಕು.
13. ಈ ವೃಂದಗಳಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದೇ ಇರುವ ಅಭ್ಯರ್ಥಿಗಳು ಮುಂದಿನ ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ.
14. ಇತರೆ ತಾಂತ್ರಿಕ ಸಹಾಯಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು/ಉನ್ನತ ವ್ಯಾಸಂಗದ ನಿಯೋಜನೆ ಮೇಲಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
15. ಇಲಾಖಾ ವಿಚಾರಣೆ/ಶಿಸ್ತು ಪ್ರಕರಣ/ನ್ಯಾಯಾಲಯದ ಪ್ರಕರಣ/ಕ್ರಿಮಿನಲ್ ಪ್ರಕರಣಗಳು ಎದುರಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
16. ಶಿಕ್ಷಣ ಸಂಯೋಜಕರು, ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು(ಪ್ರೌಢಶಾಲಾ ತತ್ಸಮಾನ ವೃಂದ) ಆಯ್ಕೆ ಪರೀಕ್ಷೆಗೆ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಅಭ್ಯರ್ಥಿಗಳ ವಯೋಮಿತಿ 55 ವರ್ಷಗಳನ್ನು ಮೀರಿರಬಾರದು. ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಆಯಾ ಜಿಲ್ಲೆಯ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಬೇಕು. ಆಯಾ ಜಿಲ್ಲೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆದ್ಯತೆ/ಮೆರಿಟ್ ಆಧಾರದ ಮೇಲೆ ಸ್ಥಳ ಹಂಚಿಕೆ ಮಾಡಲಾಗುವುದು.
17. ಈ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಯಾವುದೇ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿರಬಾರದು. ಒಂದು ವೇಳೆ ಪದಾಧಿಕಾರಿಗಳಾಗಿದ್ದಲ್ಲಿ ಆ ಹುದ್ದೆಯನ್ನು ತ್ಯಜಿಸಿ ಆ ಬಗ್ಗೆ ಲಿಖಿತ ಮುಚ್ಚಳಿಕೆಯನ್ನು ನೀಡಿದ ನಂತರ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಹುದ್ದೆಗೆ ವರದಿ ಮಾಡಿಕೊಳ್ಳತಕ್ಕದ್ದು. ಸದರಿ ಹುದ್ದೆಯ ಅವಧಿಯಲ್ಲಿ ಯಾವುದೇ ಸಂಘ ಸಂಸ್ಥೆಯ ಪದಾಧಿಕಾರಿಗಳಾಗಲು ಅವಕಾಶವಿರುವುದಿಲ್ಲ.
18. ಬಿ.ಆರ್.ಪಿ ಮತ್ತು ಇ.ಸಿ.ಓ ಹುದ್ದೆಯ ಕಾರ್ಯಭಾರಗಳನ್ನು ಅವರ ಜಾಬ್‌ಚಾರ್ಟನಲ್ಲಿ ಸೂಚಿಸಿರುವಂತೆ ನಿರ್ವಹಿಸಲು ಅಭ್ಯರ್ಥಿಯು ಸದೃಢರಾಗಿರಬೇಕು ಮತ್ತು ಆರೋಗ್ಯವಂತರಾಗಿರಬೇಕು. ಗಂಭೀರ ಕಾಯಿಲೆಗಳಿಂದ [ಕ್ಯಾನ್ಸರ್, ಮೂತ್ರಪಿಂಡ ವೈಫಲ್ಯ, ಹೃದಯ ಸಂಬಂಧಿತ ಕಾಯಿಲೆಗಳು ಇವೇ ಮುಂತಾದವುಗಳು] ಬಳಲುತ್ತಿರುವವರಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.
19. ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ ಕೌನ್ಸಲಿಂಗ್‌ಗೆ ಗೈರು ಹಾಜರಾದ ಹಾಗೂ ಕೌನ್ಸಲಿಂಗ್ ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಕರ್ತವ್ಯಕ್ಕೆ ಹಾಜರಾಗದಿರುವವರು, ಮುಂದಿನ 05 ವರ್ಷ ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
20. ಅರ್ಜಿದಾರರು ಆನ್ ಲೈನ್ ಭರ್ತಿ ಮಾಡಿ ಸಲ್ಲಿಸಿರುವ ಮಾಹಿತಿಯು ಸತ್ಯ ನಿಷ್ಠವಾಗಿಲ್ಲದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ, ಶಿಸ್ತುಕ್ರಮ ಕೈಗೊಳ್ಳಲಾಗುವುದು.

**(4) ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದ ಬಿ.ಆರ್.ಸಿ., ಎ.ಪಿ.ಸಿ (ಸಮಗ್ರ ಶಿಕ್ಷಣ ಕರ್ನಾಟಕ), ವಿಷಯ ಪರಿವೀಕ್ಷಕರು, ಹಾಗೂ ಸಹಾಯಕ ನಿರ್ದೇಶಕರು[ಮ.ಉ.ಯೋಜನೆ] ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು:-**

1. ಖಾಯಂ ಪೂರ್ವ ಸೇವಾವಧಿ ತೃಪ್ತಿಕರವಾಗಿ ಘೋಷಣೆಯಾಗಿರಬೇಕು.
2. ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಅಭ್ಯರ್ಥಿಗಳ ವಯೋಮಿತಿ 55 ವರ್ಷಗಳು ಮೀರಿರಬಾರದು.
3. ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದಲ್ಲಿ ಕನಿಷ್ಠ 03 ವರ್ಷ ಸೇವೆ ಸಲ್ಲಿಸಿರಬೇಕು.
4. ವಿಷಯ ಪರಿವೀಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಆಯಾಯ ವಿಷಯದಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕನಿಷ್ಠ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ಬೋಧನ ಅನುಭವ ಹೊಂದಿರಬೇಕು.

5. ಅಧಿಸೂಚಿತ 04 ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಈಗಾಗಲೇ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ 10 ವರ್ಷಗಳ ಸೇವೆಯನ್ನು ಸಲ್ಲಿಸಿದ್ದಲ್ಲಿ ಪುನಃ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. [10ವರ್ಷಗಳ ಸೇವೆ ಎಂದರೆ ಯಾವುದೇ ಒಂದು ಹುದ್ದೆಯಲ್ಲಿ ಅಥವಾ ಈ 04 ಹುದ್ದೆಗಳಲ್ಲಿ ಒಟ್ಟಾರೆಯಾಗಿ ಸತತವಾಗಿ ಸಲ್ಲಿಸಿರುವ ಸೇವೆ ಎಂದು ಪರಿಗಣಿಸುವುದು].
6. ಸದರಿ ನಿರ್ದಿಷ್ಟಪಡಿಸಿದ ಹುದ್ದೆಗಳ ಗರಿಷ್ಠ ಅವಧಿ 5 ವರ್ಷ. ಸದರಿ ಅವಧಿ ಪೂರ್ಣಗೊಳಿಸಿದ ನಂತರ ವರ್ಗಾವಣೆ ನಿಯಮಾನುಸಾರ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲಾಗುವುದು
7. ಪ್ರಸ್ತುತ ಬಿ.ಆರ್.ಸಿ. ಎ.ಪಿ.ಸಿ (ಸಮಗ್ರ ಶಿಕ್ಷಣ ಕರ್ನಾಟಕ).ವಿಷಯ ಪರಿವೀಕ್ಷಕರು. ಮತ್ತು ಸಹಾಯಕ ನಿರ್ದೇಶಕರು[ಮ.ಉ.ಯೋಜನೆ] ಆಯಾಯ ಹುದ್ದೆಗಳಲ್ಲಿ 5 ವರ್ಷಗಳ ಸೇವೆಯನ್ನು ಪೂರೈಸಿ ಹೊರ ಹೋಗುತ್ತಿರುವ ಅಭ್ಯರ್ಥಿಗಳು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನಿರ್ದಿಷ್ಟಪಡಿಸಿದ ಹುದ್ದೆಗೆ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
8. ಬಿ.ಆರ್.ಸಿ ಎ.ಪಿ.ಸಿ(ಸಮಗ್ರ ಶಿಕ್ಷಣ ಕರ್ನಾಟಕ).ವಿಷಯ ಪರಿವೀಕ್ಷಕರು. ಸಹಾಯಕ ನಿರ್ದೇಶಕರು [ಮ.ಉ.ಯೋಜನೆ] ಈ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಆಯ್ಕೆಯಾಗದೇ ಕಾರ್ಯನಿರ್ವಹಿಸುತ್ತಿರುವವರು ಸದರಿ ಹುದ್ದೆಯಲ್ಲಿ ಮುಂದುವರೆಯಲು ಇಚ್ಛಿಸಿದ್ದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗೆ ಮಾತ್ರ ಪರೀಕ್ಷೆಯನ್ನು ತೆಗೆದುಕೊಂಡು ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ.
9. ಈ ಹುದ್ದೆಗಳಿಗೆ ಆಯ್ಕೆ ಬಯಸಿ ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಯು ಕಡ್ಡಾಯವಾಗಿ ಇಇಡಿಎಸ್‌ನಲ್ಲಿ ತಮ್ಮ ಸಂಪೂರ್ಣ ಸೇವಾ ಮಾಹಿತಿಯನ್ನು ಸಲ್ಲಿಸಿರಬೇಕು.
10. ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಅರ್ಜಿ ಸಲ್ಲಿಸುತ್ತಿರುವ ಅಭ್ಯರ್ಥಿಯು ಪ್ರಸ್ತುತ ಸ್ಥಳದಲ್ಲಿ ಕನಿಷ್ಠ 3 ವರ್ಷಗಳ ಸೇವೆ ಪೂರೈಸಿರಬೇಕು.[ಮುಖ್ಯ ಶಿಕ್ಷಕರು/ಉಪನ್ಯಾಸಕರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು].
11. ಅನ್ಯ ಇಲಾಖೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
12. ಇಲಾಖಾ ವಿಚಾರಣೆ/ಶಿಸ್ತು ಪ್ರಕರಣ/ನ್ಯಾಯಾಲಯ ಪ್ರಕರಣ/ಲೋಕಾಯುಕ್ತ/ಎಸಿಬಿ/ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
13. ಈ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಯಾವುದೇ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿರಬಾರದು. ಒಂದು ವೇಳೆ ಪದಾಧಿಕಾರಿಗಳಾಗಿದ್ದಲ್ಲಿ ಅ ಹುದ್ದೆಯನ್ನು ತ್ಯಜಿಸಿ ಅ ಬಗ್ಗೆ ಲಿಖಿತ ಮುಚ್ಚಳಿಕೆಯನ್ನು ನೀಡಿದ ನಂತರ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಹುದ್ದೆಗೆ ವರದಿ ಮಾಡಿಕೊಳ್ಳತಕ್ಕದ್ದು. ಸದರಿ ಹುದ್ದೆಯ ಅವಧಿಯಲ್ಲಿ ಯಾವುದೇ ಸಂಘ ಸಂಸ್ಥೆಯ ಪದಾಧಿಕಾರಿಗಳಾಗಲು ಅವಕಾಶವಿರುವುದಿಲ್ಲ.
14. ಈ ಹುದ್ದೆಯ ಕಾರ್ಯಭಾರಗಳನ್ನು ಅವರ ಜಾಬ್ ಚಾರ್ಟ್‌ನಲ್ಲಿ ಸೂಚಿಸಿರುವಂತೆ ನಿರ್ವಹಿಸಲು ಅಭ್ಯರ್ಥಿಯು ಸದೃಢರಾಗಿರಬೇಕು ಮತ್ತು ಆರೋಗ್ಯವಂತರಾಗಿರಬೇಕು. ಗಂಭೀರ ಕಾಯಿಲೆಗಳಿಂದ (ಕ್ಯಾನ್ಸರ್. ಮೂತ್ರ ಪಿಂಡ ವೈಫಲ್ಯ. ಹೃದಯ ಸಂಬಂಧಿತ ಕಾಯಿಲೆಗಳು ಇವೇ ಮುಂತಾದವು) ಬಳಲುತ್ತಿರುವವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
15. ದೈಹಿಕ ಶಿಕ್ಷಣ ಪರಿವೀಕ್ಷರು/ಉಪನ್ಯಾಸಕರು ಮತ್ತು ವಿಶೇಷ ಶಿಕ್ಷಕರುಗಳಿಗೆ[ಗ್ರೂಪ್-ಬಿ] ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
16. ಈ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಂಡವರಿಗೆ ಮುಂದಿನ 3 ವರ್ಷಗಳ ಅವಧಿಯಲ್ಲಿ ಯಾವುದೇ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ (ಶಿಸ್ತು ಪ್ರಕರಣಗಳನ್ನು ಹೊರತುಪಡಿಸಿ).
17. ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ ಕೌನ್ಸಲಿಂಗ್‌ಗೆ ಗೈರು ಹಾಜರಾದ ಹಾಗೂ ಕೌನ್ಸಲಿಂಗ್ ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಕರ್ತವ್ಯಕ್ಕೆ ಹಾಜರಾಗದಿರುವವರು. ಮುಂದಿನ 05 ವರ್ಷ ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
18. ಅರ್ಜಿದಾರರು ಆನ್‌ಲೈನ್ ಭರ್ತಿ ಮಾಡಿ ಸಲ್ಲಿಸಿರುವ ಮಾಹಿತಿಯು ಸತ್ಯ ನಿಷ್ಠವಾಗಿಲ್ಲದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ, ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು.
19. ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು ಆಯಾ ವಿಭಾಗದ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಬೇಕು. ಆಯಾ ವಿಭಾಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆದ್ಯತೆ/ಮೆರಿಟ್ ಆಧಾರದ ಮೇಲೆ ಸ್ಥಳ ಹಂಚಿಕೆ ಮಾಡಲಾಗುವುದು.

20. ಈಗಾಗಲೇ ಅಧಿಸೂಚಿತ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಪರೀಕ್ಷೆ ಬರೆದು ಉತ್ತೀರ್ಣರಾಗಿ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿದ್ದು ಹಾಲಿ ಈ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

(5) <u>ಅರ್ಜಿ ಸಲ್ಲಿಸುವ ವಿಧಾನ:</u>

1. ಅರ್ಜಿಗಳನ್ನು ಆನ್-ಲೈನ್‌ನಲ್ಲಿ ಈ ಪ್ರಕ್ರಿಯೆಗಾಗಿಯೇ ಸಿದ್ಧಪಡಿಸಿರುವ ತಂತ್ರಾಂಶದಲ್ಲಿ ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.
2. ಅರ್ಜಿ ಸಲ್ಲಿಸುವ ಮೊದಲು ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸೇವಾ ವಿವರಗಳನ್ನು ಇಇಡಿಎಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸುವುದು.
3. ಶಿಕ್ಷಕರ ದತ್ತಾಂಶ ಸಂಗ್ರಹಣೆ ಪೋರ್ಟಲ್‌ಗೆ ಲಾಗ್-ಇನ್ ಆಗಲು ಬಳಸುವ ಕೆ.ಜಿ.ಐ.ಡಿ ಸಂಖ್ಯೆಯನ್ನು ಬಳಸಿ ಈ ಪ್ರಕ್ರಿಯೆಗಾಗಿಯೇ ಸಿದ್ಧಪಡಿಸಿರುವ ತಂತ್ರಾಂಶದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
4. ಹೆಚ್ಚಿನ ಶೈಕ್ಷಣಿಕ ಅರ್ಹತೆ, ಸೇವಾ ಅನುಭವ, ಗಣಕಯಂತ್ರ ತರಬೇತಿ ಮತ್ತು ಶೈಕ್ಷಣಿಕ ಪ್ರಕಟಣೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಅರ್ಜಿಯ ಜೊತೆಯಲ್ಲಿಯೇ **ಅಪ್-ಲೋಡ್** ಮಾಡಬೇಕು ಹಾಗೂ ಇದರ ಮೂಲ ಪ್ರತಿಗಳನ್ನು ಆಯಾ ಜಿಲ್ಲಾ ಉಪನಿರ್ದೇಶಕರು[ಆಡಳಿತ], ಇವರಿಗೆ ಸಲ್ಲಿಸುವುದು.

(6) **<u>ಪರೀಕ್ಷಾ ವಿಧಾನ :</u> [ಪ್ರಶ್ನೆ ಪತ್ರಿಕೆಗಳನ್ನು ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ನೀಡಲಾಗುತ್ತದೆ].**

**(A) ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಶ್ರೇಣಿ : (ಸಿ.ಆರ್.ಪಿ, ಬಿ.ಆರ್.ಪಿ [ಪ್ರಾಥಮಿಕ] ಮತ್ತು ಶಿಕ್ಷಣ ಸಂಯೋಜಕರು [ಪ್ರಾಥಮಿಕ]):**

1. ಅಂತಿಮ ಅರ್ಹತಾ ಪಟ್ಟಿಯನ್ನು ಗರಿಷ್ಠ 200 ಅಂಕಗಳಿಗೆ ಸಿದ್ಧಪಡಿಸಲಾಗುವುದು.
2. ಲಿಖಿತ ಪರೀಕ್ಷೆಯು ಎರಡು ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯ ಪತ್ರಿಕೆ-1 ಮತ್ತು ಪತ್ರಿಕೆ-2ರಲ್ಲಿ ಪ್ರತ್ಯೇಕವಾಗಿ ಶೇಕಡಾ 50 ರಷ್ಟು ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿದೆ.

**1] ಪತ್ರಿಕೆ-1 (85 ಅಂಕಗಳು)**

**ಸಿ.ಆರ್.ಪಿ, ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕ ಈ ಹುದ್ದೆಗಳಿಗೆ ಪ್ರಶ್ನೆ ಪತ್ರಿಕೆ ಒಂದೇ ಆಗಿರುತ್ತದೆ.**

ಅ) ಸದರಿ ಪ್ರಶ್ನೆ ಪತ್ರಿಕೆಯು ಬಹು ಆಯ್ಕೆ ಮಾದರಿಯದ್ದಾಗಿದ್ದು, [MCQ] ಸಾಮಾನ್ಯ ಜ್ಞಾನ, ಬೋಧನಾ ಶಾಸ್ತ್ರ ಶೈಕ್ಷಣಿಕ ದೃಷ್ಟಿಕೋನಗಳು ಮತ್ತು ಶಿಕ್ಷಣ ಹಾಗೂ ಇಲಾಖೆಯ ಯೋಜನೆಗಳಿಗೆ ಸಂಬಂಧಪಟ್ಟ ಕಾಯ್ದೆ ಮತ್ತು ನಿಯಮಗಳ ವಿಷಯಗಳನ್ನು ಒಳಗೊಂಡಿರುತ್ತದೆ.

**2] ಪತ್ರಿಕೆ-2 (85 ಅಂಕಗಳು)**

**ಸಿ.ಆರ್.ಪಿ, ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕ ಈ ಹುದ್ದೆಗಳಿಗೆ ಪ್ರತ್ಯೇಕ ಪ್ರಶ್ನೆ ಪತ್ರಿಕೆ ಇರುತ್ತದೆ.**

ಅ) ಹುದ್ದೆಯ ಕಾರ್ಯವ್ಯಾಪ್ತಿಗೆ ಸಂಬಂದಪಟ್ಟ ವಿಷಯಗಳನ್ನು ಒಳಗೊಂಡಿರುತ್ತದೆ.
ಆ) ಸದರಿ ಪ್ರಶ್ನೆ ಪತ್ರಿಕೆಯು ಶೇಕಡ 40%ರಷ್ಟು ಬಹು ಆಯ್ಕೆ ಮಾದರಿಯ ಪ್ರಶ್ನೆಗಳನ್ನು ಹಾಗೂ ಶೇಕಡಾ 60% ರಷ್ಟು ವಿವರಣಾತ್ಮಕ ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
ಇ) ಪ್ರಾಥಮಿಕ ಶಿಕ್ಷಕರ ಶ್ರೇಣಿಯ ಹುದ್ದೆಗಳಿಗೆ 10ನೇ ತರಗತಿಯವರೆಗಿನ ಪಠ್ಯವಸ್ತುವು ಪರೀಕ್ಷಾ ವಿಷಯವಾಗಿರುತ್ತದೆ.

**(B) ಪ್ರೌಢಶಾಲಾ ಸಹ ಶಿಕ್ಷಕರ ಶ್ರೇಣಿ ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕರು ಪ್ರಶ್ನೆ ಪತ್ರಿಕೆಗಳ ಅಂಕಗಳ ನಿಗದಿ**

1. ಅಂತಿಮ ಅರ್ಹತಾ ಪಟ್ಟಿಯನ್ನು ಗರಿಷ್ಠ 200 ಅಂಕಗಳಿಗೆ ಸಿದ್ಧಪಡಿಸಲಾಗುವುದು.
2. ಲಿಖಿತ ಪರೀಕ್ಷೆಯು ಎರಡು ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯ ಪತ್ರಿಕೆ-1 ಮತ್ತು ಪತ್ರಿಕೆ-2ರಲ್ಲಿ ಪ್ರತ್ಯೇಕವಾಗಿ ಶೇಕಡಾ 50 ರಷ್ಟು ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿದೆ.

1] ಪತ್ರಿಕೆ-1 (85 ಅಂಕಗಳು)

**ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕ ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಿಗೆ ಪ್ರಶ್ನೆ ಪತ್ರಿಕೆ ಒಂದೇ ಆಗಿರುತ್ತದೆ.**

ಅ) ಸದರಿ ಪ್ರಶ್ನೆ ಪತ್ರಿಕೆಯು ಬಹು ಆಯ್ಕೆ ಮಾದರಿಯದ್ದಾಗಿದ್ದು. [MCQ] ಸಾಮಾನ್ಯ ಜ್ಞಾನ. ಬೋಧನಾ ಶಾಸ್ತ್ರ. ಶೈಕ್ಷಣಿಕ ದೃಷ್ಟಿಕೋನಗಳು ಮತ್ತು ಶಿಕ್ಷಣ ಹಾಗೂ ಇಲಾಖೆಯ ಯೋಜನೆಗಳಿಗೆ ಸಂಬಂಧಪಟ್ಟ ಕಾಯ್ದೆ ಮತ್ತು ನಿಯಮಗಳ ವಿಷಯಗಳನ್ನು ಒಳಗೊಂಡಿರುತ್ತದೆ.

**2] ಪತ್ರಿಕೆ-2 (85 ಅಂಕಗಳು)**

**ಬಿ.ಆರ್.ಪಿ ಹುದ್ದೆಗೆ ಕಲಾ ಮತ್ತು ವಿಜ್ಞಾನ ವಿಷಯಗಳಿಗೆ ಪ್ರತ್ಯೇಕ ಪ್ರಶ್ನೆ ಪತ್ರಿಕೆ ಇರುತ್ತದೆ.**

**ಶಿಕ್ಷಣ ಸಂಯೋಜಕ ಪ್ರತ್ಯೇಕ ಪ್ರಶ್ನೆ ಪತ್ರಿಕೆ ಇರುತ್ತದೆ.**

ಅ) ಹುದ್ದೆಯ ಕಾರ್ಯವ್ಯಾಪ್ತಿಗೆ ಸಂಬಂದಪಟ್ಟ ವಿಷಯಗಳನ್ನು ಒಳಗೊಂಡಿರುತ್ತದೆ.

ಆ) ಸದರಿ ಪ್ರಶ್ನೆ ಪತ್ರಿಕೆಯು ಶೇಕಡ 40%ರಷ್ಟು ಬಹು ಆಯ್ಕೆ ಮಾದರಿಯ ಪ್ರಶ್ನೆಗಳನ್ನು ಹಾಗೂ ಶೇಕಡಾ 60% ರಷ್ಟು ವಿವರಣಾತ್ಮಕ ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

ಇ) ಪ್ರೌಢ ಶಿಕ್ಷಕರ ಶ್ರೇಣಿಯ ಹುದ್ದೆಗಳಿಗೆ 10ನೇ ತರಗತಿಯವರೆಗಿನ ಪಠ್ಯವಸ್ತುವು ಪರೀಕ್ಷಾ ವಿಷಯವಾಗಿರುತ್ತದೆ.

**(C) ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಶ್ರೇಣಿ ಬಿ.ಆರ್.ಸಿ, ಎ.ಪಿ.ಸಿ (ಸಮಗ್ರ ಶಿಕ್ಷಣ ಕರ್ನಾಟಕ), ವಿಷಯ ಪರಿವೀಕ್ಷಕರು, ಸಹಾಯಕ ನಿರ್ದೇಶಕರು [ಮ.ಊ.ಯೋಜನೆ])**

1. ಅಂತಿಮ ಅರ್ಹತಾ ಪಟ್ಟಿಯನ್ನು ಗರಿಷ್ಠ 200 ಅಂಕಗಳಿಗೆ ಸಿದ್ಧಪಡಿಸಲಾಗುವುದು.
2. ಲಿಖಿತ ಪರೀಕ್ಷೆಯು ಎರಡು ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯ ಪತ್ರಿಕೆ-1 ಮತ್ತು ಪತ್ರಿಕೆ-2ರಲ್ಲಿ ಪ್ರತ್ಯೇಕವಾಗಿ ಶೇಕಡಾ 50 ರಷ್ಟು ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿದೆ.

**1] ಪತ್ರಿಕೆ-1 (85 ಅಂಕಗಳು)**

ಅ) ಸದರಿ ಪ್ರಶ್ನೆ ಪತ್ರಿಕೆಯು ಬಹು ಆಯ್ಕೆ ಮಾದರಿಯದ್ದಾಗಿದ್ದು. [MCQ]ಸಾಮಾನ್ಯ ಜ್ಞಾನ. ಬೋಧನಾ ಶಾಸ್ತ್ರ. ಶೈಕ್ಷಣಿಕ ದೃಷ್ಟಿಕೋನಗಳು ಮತ್ತು ಶಿಕ್ಷಣ ಹಾಗೂ ಇಲಾಖೆಯ ಯೋಜನೆಗಳಿಗೆ ಸಂಬಂಧಪಟ್ಟ ಕಾಯ್ದೆ ಮತ್ತು ನಿಯಮಗಳ ವಿಷಯಗಳನ್ನು ಒಳಗೊಂಡಿರುತ್ತದೆ.

**2] ಪತ್ರಿಕೆ-2 (85 ಅಂಕಗಳು)**

ಅ) ಹುದ್ದೆಯ ಕಾರ್ಯವ್ಯಾಪ್ತಿಗೆ ಸಂಬಂದಪಟ್ಟ ವಿಷಯಗಳನ್ನು ಒಳಗೊಂಡಿರುತ್ತದೆ.

ಆ) ಸದರಿ ಪ್ರಶ್ನೆ ಪತ್ರಿಕೆಯು ಶೇಕಡ 40%ರಷ್ಟು ಬಹು ಆಯ್ಕೆ ಮಾದರಿಯ ಪ್ರಶ್ನೆಗಳನ್ನು ಹಾಗೂ ಶೇಕಡಾ 60% ರಷ್ಟು ವಿವರಣಾತ್ಮಕ ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

ಇ) ಗ್ರೂಪ್-ಬಿ ವೃಂದದ ಹುದ್ದೆಗಳಿಗೆ 12ನೇ ತರಗತಿಯ ವರೆಗಿನ ಪಠ್ಯವಸ್ತುವು ಪರೀಕ್ಷಾ ವಿಷಯವಾಗಿರುತ್ತದೆ.

(7) <u>ಗರಿಷ್ಠ ಅಂಕಗಳನ್ನು ನಿರ್ಧರಿಸುವ ವಿಧಾನ:</u>

ಗರಿಷ್ಠ 20 ಅಂಕಗಳನ್ನು ಅಭ್ಯರ್ಥಿಗಳ ಹೆಚ್ಚಿನ ವಿದ್ಯಾರ್ಹತೆಗಾಗಿ (ಅಂದರೆ ಹುದ್ದೆಗೆ ಅಗತ್ಯವಾದ ವಿದ್ಯಾರ್ಹತೆಗಿಂತ ಹೆಚ್ಚಿನದು) ಹಂಚಿಕೆ ಮಾಡಿದೆ:

**(A) ಪ್ರಾಥಮಿಕ ಶಿಕ್ಷಕರ ತತ್ಸಮಾನ ಶ್ರೇಣಿ : (ಸಿ.ಆರ್.ಪಿ, ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕರು)**

- ಪದವಿ (ಬಿ.ಎ., ಬಿ.ಎಸ್.ಸಿ., ಬಿ.ಇಡಿ) – 4 ಅಂಕಗಳು
- ಸ್ನಾತಕೋತ್ತರ ಪದವಿ (ಎಂ.ಎ., ಎಂ.ಎಸ್.ಸಿ. ಎಂ.ಇಡಿ) – 4 ಅಂಕಗಳು
- ಎಂ.ಫಿಲ್. ಅಥವಾ ಪಿ.ಹೆಚ್.ಡಿ – 3 ಅಂಕಗಳು
- ಗಣಕಯಂತ್ರ ಜ್ಞಾನ – 5 ಅಂಕಗಳು
    1. 6 ತಿಂಗಳಿಗಿಂತ ಹೆಚ್ಚಿನ ಕೋರ್ಸ್‌ನಲ್ಲಿ ಕಿಯೋನಿಕ್ಸ್‌ನಿಂದ ಪಡೆದ ಪ್ರಮಾಣ ಪತ್ರ
    2. ಸರ್ಕಾರ ನಿಗದಿಪಡಿಸಿರುವ ಸಿಎಲ್‌ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿ
- ಶೈಕ್ಷಣಿಕ ಪ್ರಕಟಣೆಗಳು ಮತ್ತು ರಾಜ್ಯಮಟ್ಟದ ವಾರ್ತಾ ಪ್ರತಿಕೆಗಳಲ್ಲಿ ಲೇಖನ– 4 ಅಂಕಗಳು [ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ವಾರ್ತಾಪತ್ರಿಕೆಗಳಲ್ಲಿನ ಲೇಖನ]
- ಸೇವಾ ಅನುಭವಕ್ಕೆ–10 ಅಂಕಗಳು (ಪ್ರತಿ 2 ವರ್ಷದ ಪೂರ್ಣಗೊಂಡ ಸೇವೆಗೆ 1 ಅಂಕದಂತೆ ಗರಿಷ್ಠ 10ಕ್ಕೆ ಮೀರದಂತೆ).

**(B) ಪ್ರೌಢ ಶಿಕ್ಷಕರ ತತ್ಸಮಾನ ಶ್ರೇಣಿ : (ಬಿ.ಆರ್.ಪಿ ,ಶಿಕ್ಷಣ ಸಂಯೋಜಕರು ಮತ್ತು ತಾಂತ್ರಿಕ ಸಹಾಯಕರು)**

- ಸ್ನಾತಕೋತ್ತರ ಪದವಿ (ಎಂ.ಎ., ಎಂ.ಎಸ್.ಸಿ. ಎಂ.ಇಡಿ) – 5 ಅಂಕಗಳು
- ಎಂ.ಫಿಲ್. ಅಥವಾ ಪಿ.ಹೆಚ್.ಡಿ – 5 ಅಂಕಗಳು
- ಗಣಕಯಂತ್ರ ಜ್ಞಾನ – 5 ಅಂಕಗಳು
  1.6 ತಿಂಗಳಗಿಂತ ಹೆಚ್ಚಿನ ಕೋರ್ಸ್‌ನಲ್ಲಿ ಕಿಯೋನಿಕ್ಸ್‌ನಿಂದ ಪಡೆದ ಪ್ರಮಾಣ ಪತ್ರ
  2.ಸರ್ಕಾರ ನಿಗದಿಪಡಿಸಿರುವ ಸಿಎಲ್‌ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿ
- ಶೈಕ್ಷಣಿಕ ಪ್ರಕಟಣೆಗಳು ಮತ್ತು ರಾಜ್ಯಮಟ್ಟದ ವಾರ್ತಾ ಪ್ರತಿಕೆಗಳಲ್ಲಿ ಲೇಖನ – 5 ಅಂಕಗಳು
  [ರಾಜ್ಯ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ವಾರ್ತಾಪತ್ರಿಕೆಗಳಲ್ಲಿನ ಲೇಖನ]
- ಸೇವಾ ಅನುಭವಕ್ಕೆ-10 ಅಂಕಗಳು (ಪ್ರತಿ 2 ವರ್ಷದ ಪೂರ್ಣಗೊಂಡ ಸೇವೆಗೆ 1 ಅಂಕದಂತೆ ಗರಿಷ್ಟ 10ಕ್ಕೆ ಮೀರದಂತೆ).

**(C) ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಶ್ರೇಣಿ (ಬಿ.ಆರ್.ಸಿ., ಎ.ಪಿ.ಸಿ (ಸಮಗ್ರ ಶಿಕ್ಷಣ ಕರ್ನಾಟಕ), ವಿಷಯ ಪರಿವೀಕ್ಷಕರು, ಸಹಾಯಕ ನಿರ್ದೇಶಕರು [ಮ.ಊ.ಯೋಜನೆ])**

- ಸ್ನಾತಕೋತ್ತರ ಪದವಿ ( ಎಂ.ಎ.,ಎಂ.ಎಸ್.ಸಿ.ಎಂ.ಇಡಿ)–5 ಅಂಕಗಳು
- ಎಂ.ಫಿಲ್. ಅಥವಾ ಪಿ.ಹೆಚ್.ಡಿ–5 ಅಂಕಗಳು
- ಗಣಕಯಂತ್ರ ಜ್ಞಾನ –5 ಅಂಕಗಳು
  1. 6 ತಿಂಗಳಗಿಂತ ಹೆಚ್ಚಿನ ಕೋರ್ಸ್‌ನಲ್ಲಿ ಕಿಯೋನಿಕ್ಸ್‌ನಿಂದ ಪಡೆದ ಪ್ರಮಾಣ ಪತ್ರ
  2. ಸರ್ಕಾರ ನಿಗದಿಪಡಿಸಿರುವ ಸಿಎಲ್‌ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿ
- ಶೈಕ್ಷಣಿಕ ಪ್ರಕಟಣೆಗಳು ಮತ್ತು ವಾರ್ತಾ ಪ್ರತಿಕೆಗಳಲ್ಲಿ ಲೇಖನ –5 ಅಂಕಗಳು
  [ರಾಜ್ಯ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ವಾರ್ತಾಪತ್ರಿಕೆಗಳಲ್ಲಿನ ಲೇಖನ]
- ಸೇವಾ ಅನುಭವಕ್ಕೆ-10 ಅಂಕಗಳು (ಪ್ರತಿ 2 ವರ್ಷದ ಪೂರ್ಣಗೊಂಡ ಸೇವೆಗೆ 1 ಅಂಕದಂತೆ ಗರಿಷ್ಟ 10ಕ್ಕೆ ಮೀರದಂತೆ).

(8) <u>ಪರೀಕ್ಷೆಗೆ ಪಠ್ಯಕ್ರಮ</u>:-

1. ಪ್ರಾಥಮಿಕ ಶಿಕ್ಷಕರ ತತ್ಸಮಾನ ಮತ್ತು ಪ್ರೌಢ ಶಿಕ್ಷಕರ ತತ್ಸಮಾನ ಹುದ್ದೆಗಳಿಗೆ 10ನೇ ತರಗತಿಯವರೆಗಿನ ಪಠ್ಯವಸ್ತು ಪಠ್ಯಕ್ರಮವಾಗಿರುತ್ತದೆ.
2. ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ವೃಂದದ ಹುದ್ದೆಗಳಿಗೆ 12ನೇ ತರಗತಿಯವರೆಗಿನ ಪಠ್ಯವಸ್ತು ಪಠ್ಯಕ್ರಮವಾಗಿರುತ್ತದೆ.

**(A) ಪ್ರಾಥಮಿಕ ಶಿಕ್ಷಕರ ತತ್ಸಮಾನ ಶ್ರೇಣಿ :**

**(1)(ಸಿ.ಆರ್.ಪಿ. ಬಿ.ಆರ್.ಪಿ ಮತ್ತು ಶಿಕ್ಷಣ ಸಂಯೋಜಕರು): ಈ ಹುದ್ದೆಗಳಿಗೆ ಪರೀಕ್ಷೆ ಬರೆಯುವವರಿಗೆ (ಪತ್ರಿಕೆ-1 ಸಾಮಾನ್ಯ ವಿಷಯವಾಗಿರುತ್ತದೆ.** [COMMON PAPER] **ಅದು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿದೆ.**

**ಪತ್ರಿಕೆ-1**

1. ಭಾಷೆ-1 (ಕನ್ನಡ. ಉರ್ದು. ಮರಾಠಿ. ತೆಲುಗು ಮತ್ತು ತಮಿಳು)
2. ಭಾಷೆ-2 (ಇಂಗ್ಲೀಷ್)
3. ಸಾಮಾನ್ಯ ಜ್ಞಾನ
4. ಪ್ರಚಲಿತ ಶೈಕ್ಷಣಿಕ ಕಾರ್ಯಕ್ರಮಗಳು.
5. ಕೋರ್ ವಿಷಯಗಳು:(ಗಣಿತ. ಸಾಮಾನ್ಯ ವಿಜ್ಞಾನ. ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನ)
6. ಬೋಧನಾ ಶಾಸ್ತ್ರ

**ಪತ್ರಿಕೆ-2**

[ಸಿ.ಆರ್.ಪಿ. ಬಿ.ಆರ್.ಪಿ. ಮತ್ತು ಶಿಕ್ಷಣ ಸಂಯೋಜಕರು ಪ್ರತ್ಯೇಕ ಪ್ರಶ್ನೆ ಪತ್ರಿಕೆ ನೀಡಲಾಗುತ್ತದೆ.]

1. ಹುದ್ದೆಯ ಕಾರ್ಯವ್ಯಾಪ್ತಿಗೆ ಸಂಬಂದಪಟ್ಟ ವಿಷಯಗಳು ಮತ್ತು 1 ರಿಂದ 10ನೇ ತರಗತಿಯವರೆಗಿನ ಪಠ್ಯವಸ್ತು.

**(B) ಪ್ರೌಢ ಶಿಕ್ಷಕರ ತತ್ಸಮಾನ ಶ್ರೇಣಿ: ಶಿಕ್ಷಣ ಸಂಯೋಜಕರು, ಮತ್ತು ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು.**

**ಪತ್ರಿಕೆ-1**

**ಈ ಹುದ್ದೆಗಳಿಗೆ (ಶಿಕ್ಷಣ ಸಂಯೋಜಕರು, ಮತ್ತು ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು) ಪರೀಕ್ಷೆ ಬರೆಯುವವರಿಗೆ ಪತ್ರಿಕೆ-1 ಸಾಮಾನ್ಯ ವಿಷಯವಾಗಿರುತ್ತದೆ. [COMMON PAPER] ಅದು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿದೆ.**

1. ಸಾಮಾನ್ಯ ಕನ್ನಡ.
2. ಸಾಮಾನ್ಯ ಇಂಗ್ಲೀಷ್.
3. ಬೋಧನಾ ಶಾಸ್ತ್ರ.
4. ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನಗಳು.
5. ಕೆ.ಸಿ.ಎಸ್.ಆರ್.
6. ಶಿಕ್ಷಣ ಮತ್ತು ಇಲಾಖಾ ಯೋಜನೆಗಳಿಗೆ ಸಂಬಂಧಪಟ್ಟ ಕಾಯ್ದೆ ಮತ್ತು ನಿಯಮಗಳ ವಿಷಯಗಳು.

**ಪತ್ರಿಕೆ-2**

**ಶಿಕ್ಷಣ ಸಂಯೋಜಕರು ಮತ್ತು ಬಿ.ಆರ್.ಪಿ[ಪ್ರೌಢ] ರವರಿಗೆ ಪ್ರತ್ಯೇಕ ಪ್ರಶ್ನೆ ಪತ್ರಿಕೆಗಳಿರುತ್ತವೆ.**

**(ಅ) ಶಿಕ್ಷಣ ಸಂಯೋಜಕರು ಹುದ್ದೆಗಾಗಿ:-**

- ಈ ಹುದ್ದೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ವಿಶೇಷವಾಗಿ ಪ್ರೋತ್ಸಾಹದಾಯಕ ಯೋಜನೆಗಳಿಗೆ ಸಂಬಂಧಿಸಿದ ವಿಷಯಗಳು ಹಾಗೂ ಗುಣಾತ್ಮಕ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು.
- 10ನೇ ತರಗತಿಯವರೆಗಿನ ಪಠ್ಯವಸ್ತು ಆಧಾರಿತ ಎಲ್ಲಾ ವಿಷಯಗಳು.

**(ಆ)ಬಿ.ಆರ್.ಪಿ ಹುದ್ದೆಗಾಗಿ: ಈ ಹುದ್ದೆಗೆ ಕಲಾ ಮತ್ತು ವಿಜ್ಞಾನ ವಿಷಯಗಳಿಗೆ ಪ್ರತ್ಯೇಕ ಪ್ರಶ್ನೆ ಪತ್ರಿಕೆಗಳಿರುತ್ತವೆ.** .

1. **ಬಿ.ಆರ್.ಪಿ ವಿಜ್ಞಾನ:**

- ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟ ವಿಷಯಗಳು. ವಿಶೇಷವಾಗಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳು. SATS ಸೇವಾನಿರತ ತರಬೇತಿಗಳು ಹಾಗೂ ಅನುಪಾಲನೆ. ಗುಣಮಟ್ಟ ಸಾಧಿಸಲು ಉಪಕ್ರಮ. ಮೌಲ್ಯಾಂಕನ. ಇತ್ಯಾದಿ.
- ಗಣಿತ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ 10ನೇ ತರಗತಿವರೆಗಿನ ಪಠ್ಯವಸ್ತು ಆಧಾರಿತ ವಿಷಯಗಳು.

2. **ಬಿ.ಆರ್.ಪಿ ಕಲಾ:**

- ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟ ವಿಷಯಗಳು. ವಿಶೇಷವಾಗಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳು. SATS ಸೇವಾನಿರತ ತರಬೇತಿಗಳು ಹಾಗೂ ಅನುಪಾಲನೆ. ಗುಣಮಟ್ಟ ಸಾಧಿಸಲು ಉಪಕ್ರಮ. ಮೌಲ್ಯಾಂಕನ. ಇತ್ಯಾದಿ.
- ಭಾಷೆ (ಕನ್ನಡ ಮತ್ತು ಇಂಗ್ಲೀಷ್) ಮತ್ತು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ 10ನೇ ತರಗತಿವರೆಗಿನ ಪಠ್ಯವಸ್ತು.

**(C) ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಶ್ರೇಣಿ ಬಿ.ಆರ್.ಸಿ., ಎ.ಪಿ.ಸಿ (ಸಮಗ್ರ ಶಿಕ್ಷಣ ಕರ್ನಾಟಕ) ವಿಷಯ ಪರಿವೀಕ್ಷಕರು, ಸಹಾಯಕ ನಿರ್ದೇಶಕರು[ಮ.ಊ.ಯೋಜನೆ]**

**ಪತ್ರಿಕೆ-1**

ಈ ಹುದ್ದೆಗಳಿಗೆ ಪರೀಕ್ಷೆ ಬರೆಯುವವರಿಗೆ ಪತ್ರಿಕೆ-1 ಸಾಮಾನ್ಯವಾಗಿರುತ್ತದೆ. [COMMON PAPER] ಅದು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿದೆ.

1. ಸಾಮಾನ್ಯ ಕನ್ನಡ.
2. ಸಾಮಾನ್ಯ ಇಂಗ್ಲೀಷ್.

3. ಸಾಮಾನ್ಯ ಜ್ಞಾನ.
4. ಬೋಧನಾ ಶಾಸ್ತ್ರ.
5. ಪ್ರಚಲಿತ ಶೈಕ್ಷಣಿಕ ಕಾರ್ಯಕ್ರಮಗಳು.
6. ಶಿಕ್ಷಣ ನೀತಿ, ಶಿಕ್ಷಣ ನಿಯಮಗಳು ಮತ್ತು ಕಾಯಿದೆ.
7. ಸಿ.ಸಿ.ಎ. ಕೆ.ಸಿ.ಎಸ್.ಆರ್. ಶೈಕ್ಷಣಿಕ ಆಡಳಿತ.

**ಪತ್ರಿಕೆ-2._ [ಪತ್ರಿಕೆ-2 ಮೂರು ರೀತಿಯ ಪ್ರತ್ಯೇಕ ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುತ್ತದೆ.]**

1. **ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ[ಬಿ.ಆರ್.ಸಿ] ಸಹಾಯಕ ಯೋಜನಾ ಸಮನ್ವಯಾಧಿಕಾರಿ (ಆರ್.ಎಂ.ಎಸ್.ಎ, ಮತ್ತು ಎಸ್.ಎಸ್.ಎ] ಹುದ್ದೆಗಳಿಗಾಗಿ**
   ಹುದ್ದೆಯ ವ್ಯಾಪ್ತಿಗೆ ಸಂಬಂಧಿಸಿದ ವಿಷಯಗಳು ವಿಶೇಷವಾಗಿ ಸರ್ವ ಶಿಕ್ಷಣ ಅಭಿಯಾನ / ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಬಗ್ಗೆ. SATS ತಂತ್ರಾಂಶದ ಬಗ್ಗೆ, ಸೇವಾ ನಿರತ ತರಬೇತಿ, ಗುಣಮಟ್ಟ ಸಾಧಿಸಲು ಉಪಕ್ರಮ [Quality Initiatives] ಮೌಲ್ಯಾಂಕನ [Assessment]

2. **ವಿಷಯ ಪರಿವೀಕ್ಷಕರುಗಳಿಗಾಗಿ. [ಪ್ರತೀ ವಿಷಯಗಳಿಗೆ ಅಂದರೆ ಕನ್ನಡ, ಆಂಗ್ಲ,ಉರ್ದು, ಹಿಂದಿ, ಸಂಸ್ಕೃತ, ಮರಾಠಿ, ಗಣಿತ, ವಿಜ್ಞಾನ, ಮತ್ತು ಸಮಾಜ ವಿಷಯಗಳಿಗೆ ಪ್ರತ್ಯೇಕ ಪ್ರಶ್ನೆ ಪತ್ರಿಕೆಗಳಿರುತ್ತವೆ]**
   1. ಹುದ್ದೆಯ ವ್ಯಾಪ್ತಿಗೆ ಸಂಬಂಧಿಸಿದ ವಿಷಯಗಳು
   2. ಬೋದನ ಶಾಸ್ತ್ರ.

3. **ಸಹಾಯಕ ನಿರ್ದೇಶಕರು[ ಮಧ್ಯಾಹ್ನ ಉಪಹಾರ ಯೋಜನೆ].**
   1. ಆಹಾರ, ಪೌಷ್ಠಕತೆ ಮತ್ತು ಆರೋಗ್ಯ.
   2. ಸ್ವಚ್ಛತೆ, ನೈರ್ಮಲ್ಯ ಮತ್ತು ಮಕ್ಕಳ ಸುರಕ್ಷತೆ.
   3. ಎಂ.ಡಿ.ಎಂ ಯೋಜನೆಯ ಬಗ್ಗೆ ಅರಿವು.
   4. ಸ್ವಯಂ ಸೇವಾ ಸಂಸ್ಥೆಗಳ ಪಾತ್ರ- ಅವರೊಂದಿಗೆ ಸಂಯೋಜನೆ
   5. ಲೆಕ್ಕಪತ್ರಗಳ ನಿರ್ವಹಣೆ.

**[ಮೇಲ್ಕಂಡ ಎಲ್ಲಾ ಪ್ರಶ್ನೆ ಪತ್ರಿಕೆಗಳನ್ನು ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ನೀಡಲಾಗುತ್ತದೆ].**

**(9) <u>ಆಯ್ಕೆ ಪ್ರಕ್ರಿಯೆ:-</u>**

**(A) <u>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ತತ್ಸಮಾನ ವೃಂದದ ಹುದ್ದೆಗಳಿಗೆ.</u>**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ,ಅಪರ ಆಯುಕ್ತರು ಧಾರವಾಡ ಮತ್ತು ಅಪರ ಆಯುಕ್ತರು ಕಲಬುರಗಿ ಇವರುಗಳು ಕಾರ್ಯವ್ಯಾಪ್ತಿಯ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪರೀಕ್ಷೆ ಮತ್ತು ಆಯ್ಕೆ ಪ್ರಕ್ರಿಯೆಯ ಮೇಲುಸ್ತುವಾರಿಯನ್ನು ನಿಭಾಯಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.
2. ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ಸಿ.ಆರ್.ಪಿ, ಬಿ.ಆರ್.ಪಿ. ಶಿಕ್ಷಣ ಸಂಯೋಜಕರು [ಪ್ರಾಥಮಿಕ] ಮತ್ತು ಪ್ರೌಢ ಶಾಲಾ ಶಿಕ್ಷಕರ ವೃಂದದ ಕ್ಷೇತ್ರ ಸಂಪನ್ಮೂಲ ವ್ಯಕ್ತಿ [ಬಿ.ಆರ್.ಪಿ-ಪ್ರೌಢ] ಶಿಕ್ಷಣ ಸಂಯೋಜಕರು [ಪ್ರೌಢ] ಈ ಹುದ್ದೆಗಳಿಗೆ ಆಯ್ಕೆಗೆ ಸಂಬಂಧಿಸಿದಂತೆ ಆಯಾ ಜಿಲ್ಲೆಯ ಡಯಟ್‌ಗಳು ***<u>ಪರೀಕ್ಷಾ ಕೇಂದ್ರಗಳಾಗಿರುತ್ತದೆ.</u>***
3. ಪ್ರಾಂಶುಪಾಲರು ಹಾಗು ಪದನಿಮಿತ್ತ ಉಪನಿರ್ದೇಶಕರು[ಡಯಟ್]. ಇವರ ಪೂರ್ಣ ಜವಾಬ್ದಾರಿಯೊಂದಿಗೆ ಪರೀಕ್ಷೆ ನಡೆಸುವುದು.
4. ಪರೀಕ್ಷೆಯ ನಂತರ ಮೌಲ್ಯಮಾಪನ ಪಟ್ಟಿಯನ್ನು ನಿರ್ದೇಶಕರು, ಕೆ.ಎಸ್.ಇ.ಇ.ಬಿ-ರವರಿಂದ ಪಡೆದು ಅಭ್ಯರ್ಥಿಗಳ ಹೆಚ್ಚುವರಿ ಅಂಕಗಳನ್ನು ಕ್ರೂಢೀಕರಿಸಿ ತಾತ್ಕಾಲಿಕ ಅಂಕಪಟ್ಟಿಯನ್ನು

ಪ್ರಕಟಿಸುವುದು. ಆಕ್ಷೇಪಣೆ ಸ್ವೀಕರಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸುವುದು ಉಪನಿರ್ದೇಶಕರು[ಆಡಳಿತ]ರವರ ಜವಾಬ್ದಾರಿಯಾಗಿರುತ್ತದೆ.

5. ಅಂತಿಮ ಜೇಷ್ಠತಾ ಪಟ್ಟಿಯನ್ವಯ ಆಯಾಯ ಜಿಲ್ಲಾ ಉಪನಿರ್ದೇಶಕರು [ಆಡಳಿತ]ರವರು ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವುದು.
6. ವಿಭಾಗೀಯ ಸಹನಿರ್ದೇಶಕರುಗಳು ತಮ್ಮ ಕಾರ್ಯವ್ಯಾಪ್ತಿಯ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಮೇಲುಸ್ತುವಾರಿಯನ್ನು ನಿರ್ವಹಿಸತಕ್ಕದ್ದು.

**(B) ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳಿಗೆ.**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಅಪರ ಆಯುಕ್ತರು ಧಾರವಾಡ, ಅಪರ ಆಯುಕ್ತರು ಕಲಬುರಗಿ ಇವರ ಆಡಳಿತ ವ್ಯಾಪ್ತಿಯ ಒಂದು ಘಟಕವನ್ನಾಗಿ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗಿದೆ.
2. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ (ಬಿ.ಆರ್.ಸಿ), ಸಹಾಯಕ ಯೋಜನಾ ಸಮನ್ವಯಾಧಿಕಾರಿ[ಎ.ಪಿ.ಸಿ] (ಸಮಗ್ರ ಶಿಕ್ಷಣ ಕರ್ನಾಟಕ), ವಿಷಯ ಪರಿವೀಕ್ಷಕರು, ಉಪನಿರ್ದೇಶಕರ ಕಛೇರಿ /ಸಹ ನಿರ್ದೇಶಕರ ಕಛೇರಿ, ಸಹಾಯಕ ನಿರ್ದೇಶಕರು [ಮಧ್ಯಾಹ್ನ ಉಪಹಾರ ಯೋಜನೆ]. ಈ ಹುದ್ದೆಗಳಿಗೆ ಆಯ್ಕೆಗೆ ಸಂಬಂಧಿಸಿದಂತೆ ಆಯಾ ಜಿಲ್ಲೆಯ ಡಯಟ್‌ಗಳು ಪರೀಕ್ಷಾ ಕೇಂದ್ರಗಳಾಗಿರುತ್ತದೆ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಅಪರ ಆಯುಕ್ತರು ಧಾರವಾಡ, ಅಪರ ಆಯುಕ್ತರು ಕಲಬುರಗಿ ಇವರ ನೇತೃತ್ವದಲ್ಲಿ ಆಯ್ಕೆ ಪರೀಕ್ಷೆ ಮತ್ತು ಸ್ಥಳ ನಿಯುಕ್ತಿ ಪ್ರಕ್ರಿಯೆ ನಡೆಸಲಾಗುವುದು.
4. ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆರವರು ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಫಲಿತಾಂಶಕ್ಕೆ ಅಭ್ಯರ್ಥಿಗಳು ಪಡೆದಿರುವ ಹೆಚ್ಚಿನ ವಿದ್ಯಾರ್ಹತೆ ಹಾಗೂ ಸೇವಾ ಅನುಭವದ ಅಂಕಗಳನ್ನು ಸೇರಿಸಲು ವೆಬ್‌ಸೈಟ್‌ನಲ್ಲಿ ಅವಕಾಶ ಕಲ್ಪಿಸಿರುವಂತೆಯೇ ಅರ್ಹ ಅಂಕಗಳನ್ನು ನಮೂದಿಸಿ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಿ. ಸದರಿ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಯನ್ನು ಸ್ವೀಕರಿಸಿ, ನೈಜ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಹೆಚ್ಚುವರಿ ಅಂಕಗಳನ್ನು ಅಯಾಯ ಜಿಲ್ಲಾ ಉಪನಿರ್ದೇಶಕರು (ಆಡಳಿತ)ರವರುಗಳೇ ತಂತ್ರಾಂಶದಲ್ಲಿ ನಮೂದಿಸುವುದು. ಅಂತಿಮ ಪಟ್ಟಿಯನ್ನು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಅಪರ ಆಯುಕ್ತರು ಧಾರವಾಡ, ಅಪರ ಆಯುಕ್ತರು ಕಲಬುರಗಿ ಇವರುಗಳು ಪ್ರಕಟಿಸುವುದು ಮತ್ತು ಆನ್‌ಲೈನ್‌ನಲ್ಲಿ ಕೌನಿಲಿಂಗ್ ನಡೆಸುವುದು. [ಪರೀಕ್ಷಾ ಅಂಕಗಳು ಹಾಗೂ ಹೆಚ್ಚುವರಿ ಅಂಕಗಳನ್ನು ಯಾವುದೇ ಕಾರಣಕ್ಕೂ ಕೈಬರಹದಲ್ಲಿ ನಮೂದಿಸಲು ಅವಕಾಶ ಇರುವುದಿಲ್ಲವಾದ್ದರಿಂದ ಕಡ್ಡಾಯವಾಗಿ ತಂತ್ರಾಂಶದಲ್ಲಿಯೇ ನಮೂದಿಸತಕ್ಕದ್ದು]
5. ಅಂತಿಮ ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಆಯಾಯಾ ಆಯುಕ್ತಾಲಯಗಳು ಕೌನ್ಸಿಲಿಂಗ್ ನಡೆಸುವುದು.

**(10)ಇಲಾಖೆಯ ಅಧಿಕಾರಿಗಳ ಜವಾಬ್ದಾರಿಗಳು:-**

1. ಆಯಾಯ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಅಭ್ಯರ್ಥಿಗಳು [ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ] ಅನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮಾಹಿತಿ ಮತ್ತು ಲಗತ್ತುಗಳ ನೈಜತೆ ಬಗ್ಗೆ ಪರಿಶೀಲಿಸಿ ಅನುಮೋದಿಸುವುದು ದೃಢೀಕೃತ ಪ್ರತಿಯನ್ನು ಸಂಭಂದಪಟ್ಟ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು.
2. ***ಆಯಾಯ ಜಿಲ್ಲಾ ಉಪನಿರ್ದೇಶಕರು[ಆಡಳಿತ]-ಇವರು ಪ್ರಾಥಮಿಕ ಶಾಲಾ ಸಹಶಿಕ್ಷಕರ ವೃಂದ, ಪ್ರೌಢಶಾಲಾ ಸಹಶಿಕ್ಷಕರ ವೃಂದ ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದಲ್ಲಿ ಇರುವ ಖಾಲಿ ಹುದ್ದೆಗಳ ವಿವರವನ್ನು ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ದಾಖಲಿಸುವುದು.***
3. ಆಯಾಯ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳು ಇಲಾಖೆ ಸುತ್ತೋಲೆ ಮತ್ತು ವೇಳಾಪಟ್ಟಿಯಲ್ಲಿ ತಿಳಿಸಿರುವಂತೆ ನಿರ್ದೇಶಕರು [ಪರೀಕ್ಷೆಗಳು], ಕೆ.ಎಸ್.ಇ.ಇ.ಬಿ, ಮಲ್ಲೇಶ್ವರಂ, ಬೆಂಗಳೂರು-ರವರ ಮಾರ್ಗನಿರ್ದೇಶನಗಳನ್ವಯ ಪರೀಕ್ಷೆಯ ಸಂಪೂರ್ಣ ಜವಾಬ್ದಾರಿಯನ್ನು ನಿಭಾಯಿಸುವುದು.
4. ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳಿಗ್ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಇವರು ಅಭ್ಯರ್ಥಿಗಳು ಅನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮಾಹಿತಿ ಮತ್ತು ಲಗತ್ತುಗಳ ನೈಜತೆ ಬಗ್ಗೆ ಪರಿಶೀಲಿಸಿ ಅನುಮೋದಿಸುವುದು. ಅಪೂರ್ಣವಾದ ಅರ್ಜಿಗಳನ್ನು

ಉಪನಿರ್ದೇಶಕರ ಹಂತದಲ್ಲಿಯೇ ತಿರಸ್ಕರಿಸುವುದು. ಹಾಗೂ ಲಗತ್ತುಗಳ ಮೂಲ ಪ್ರತಿಗಳನ್ನು ಕ್ರಮವಾರು ಜೋಡಿಸಿ ಕೇಂದ್ರ ಕಛೇರಿಗೆ ಕಳುಹಿಸುವುದು.

5. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಸೂಚಿತ ಹುದ್ದೆಗಳಿಗೆ ಇಲಾಖೆ ಸುತ್ತೋಲೆ ಮತ್ತು ವೇಳಾಪಟ್ಟಿಯಲ್ಲಿ ತಿಳಿಸಿರುವಂತೆ ನಿರ್ದೇಶಕರು [ಪರೀಕ್ಷೆಗಳು], ಕೆ.ಎಸ್.ಇ.ಇ.ಬಿ. ಮಲ್ಲೇಶ್ವರಂ, ಬೆಂಗಳೂರು-ರವರ ಮೇಲುಸ್ತುವಾರಿಯಲ್ಲಿ ಪರೀಕ್ಷೆಯ ಸಂಪೂರ್ಣ ಜವಾಬ್ದಾರಿಯನ್ನು ನಿಭಾಯಿಸುವುದು.

(10) <u>ಸಾಮಾನ್ಯ ಸೂಚನೆಗಳು:-</u>

1. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸುವುದು.
2. **ಅರ್ಹತಾ ಷರತ್ತಿನಲ್ಲಿ ನಿಗದಿಪಡಿಸಿರುವ ಸೇವೆಗಳನ್ನು ಮತ್ತು ಖಾಲಿ ಹುದ್ದೆಗಳನ್ನು ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ಪರಿಗಣಿಸಲಾಗುವುದು.**
3. ಅರ್ಜಿ ಸಲ್ಲಿಸುವ ಮೊದಲು ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸೇವಾ ವಿವರಗಳನ್ನು ಇಇಡಿಎಸ್‌ನಲ್ಲಿ ಕಡ್ಡಾಯವಾಗಿ ನಮೂದಿಸುವುದು. ಇಇಡಿಎಸ್‌ನಲ್ಲಿ ಸೇವಾ ಮಾಹಿತಿಯನ್ನು ಸಲ್ಲಿಸಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
4. ಕಂಪ್ಯೂಟರ್ ಜನರೇಟೆಡ್ ಹಾಜರಾತಿ ಪತ್ರವನ್ನು ಆನ್-ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷೆಗೆ ಹಾಜರಾಗುವುದು.
5. **ಮೇಲ್ಕಂಡ ಎಲ್ಲಾ ಅಧಿಸೂಚಿತ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಗಣಕಯಂತ್ರ ಬಳಕೆಯ ಜ್ಞಾನ ಹೊಂದಿರುವುದು ಕಡ್ಡಾಯವಾಗಿರುತ್ತದೆ.**
6. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಅದೇ ಜಿಲ್ಲೆಯಲ್ಲಿನ ಡಯಟ್‌ಗಳಿಗೆ ಹಾಜರಾಗುವುದು.
7. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಅಭ್ಯರ್ಥಿಗಳ ಎಲ್ಲಾ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳನ್ನು ಅರ್ಜಿಯ ಜೊತೆಯಲ್ಲಿಯೇ ಅಪ್-ಲೋಡ್ ಮಾಡಬೇಕು.
8. ಪ್ರಮಾಣ ಪತ್ರಗಳ ಪರಿಶೀಲನೆ ಸಮಯದಲ್ಲಿ ಸುಳ್ಳು ದಾಖಲೆ ಅಥವಾ ಮಾಹಿತಿ ನೀಡಿರುವುದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳು ಆಯ್ಕೆಯಾಗುವ ಅವಕಾಶವನ್ನು ಕಳೆದುಕೊಳ್ಳುವುದಲ್ಲದೇ ಶಿಸ್ತಿನ ಕ್ರಮಕ್ಕೆ ಒಳಪಡುತ್ತಾರೆ.
9. ಮೇಲಿನ ಆಯ್ಕೆಯು ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ನಿಯಮಗಳು, ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತದೆ.
10. ***ಅಧಿಸೂಚಿತ ಹುದ್ದೆಗಳಿಗೆ ಪರೀಕ್ಷೆ ಬರೆದ ಮಾತ್ರಕ್ಕೆ ಈ ಹುದ್ದೆಗಳ ಆಯ್ಕೆಯ ಮೇಲೆ ಹಕ್ಕು ಹೊಂದಿರುವುದಿಲ್ಲ. ಅಧಿಸೂಚಿತ ಹುದ್ದೆಗಳ ನೇಮಕಾತಿಯ ಆಯ್ಕೆಯನ್ನು ಸಂಪೂರ್ಣವಾಗಿ ಆಯ್ಕೆ ಪ್ರಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.***
11. ಅರ್ಜಿದಾರರು ನೀಡುವ ಮಾಹಿತಿಯು ಸತ್ಯನಿಷ್ಠವಾಗಿಲ್ಲದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಿ ಅವರ ವಿರುದ್ಧ ಸಿಸಿಎ ನಿಯಮಗಳ ಪ್ರಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.
12. ಕರ್ತವ್ಯದ ದಿನದಂದು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಅನ್ಯ ಕಾರ್ಯನಿಮಿತ್ತ [ಒ.ಒ.ಡಿ] ಸೌಲಭ್ಯ ಒದಗಿಸಿದೆ. ಹಾಜರಾತಿ ಮಾಹಿತಿಯನ್ನು ನಿರ್ದೇಶಕರು [ಕ.ಪ್ರೌ.ಶಿ.ಪ.ಮಂಡಳಿ] ಇವರು ಸಂಬಂಧಿತ ಕಛೇರಿ ಮುಖ್ಯಸ್ಥರಿಗೆ ನೀಡುವುದು.
13. ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ವೆಚ್ಚ ಭರಿಸುವುದು. ಇಲಾಖಾ ವತಿಯಿಂದ ಯಾವುದೇ ಭತ್ಯೆಗಳನ್ನು ಮಂಜೂರು ಮಾಡಲಾಗುವುದಿಲ್ಲ.

**-: ವೇಳಾಪಟ್ಟಿ :-**

**ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳಿಗೆ.**

| ಕ್ರ. ಸಂ | ವಿವರ | ಕ್ರಮವಹಿಸುವವರು. | ದಿನಾಂಕ |
|---|---|---|---|
| 1 | ಅಧಿಕೃತ ಜ್ಞಾಪನ ಹೊರಡಿಸುವುದು. [ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕೃತ ಇಲಾಖಾ ವೆಬ್‌ಸೈಟ್‌ನಲ್ಲಿ ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆ] | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. | 20.12.2021 |
| 2 | ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ತತ್ಸಮಾನ ವೃಂದದ ಅಧಿಸೂಚಿತ ಹುದ್ದೆಗಳಲ್ಲಿ 5 ವರ್ಷ ಪೂರ್ಣಗೊಳಿಸಿ ಹೊರ ಹೋಗುವವರ ತಾತ್ಕಾಲಿಕ ಪಟ್ಟಿ ಪ್ರಕಟಣೆ | 1.ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು<br>2.ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲಬುರ್ಗಿ<br>3.ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ | 21.12.2021 |
| 3 | ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವುದು | ಅಭ್ಯರ್ಥಿಗಳು | 27.12.2021 |
| 4 | ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ತತ್ಸಮಾನ ವೃಂದದ ಅಧಿಸೂಚಿತ ಹುದ್ದೆಗಳಲ್ಲಿ 5 ವರ್ಷ ಪೂರ್ಣಗೊಳಿಸಿ ಹೊರ ಹೋಗುವವರ ಅಂತಿಮ ಪಟ್ಟಿ ಪ್ರಕಟಣೆ | 1.ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು<br>2.ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲಬುರ್ಗಿ<br>3.ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ | 30.12.2021 |
| 5 | ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.[ವಿದ್ಯಾರ್ಹತೆ ಹಾಗೂ ವೈಟೇಜ್‌ಗೆ ಸಂಬಂಧಿಸಿದ ಲಗತ್ತುಗಳನ್ನು ಸಹ ಅಭ್ಯರ್ಥಿಗಳೇ ಆನ್‌ಲೈನ್‌ನಲ್ಲಿಯೇ ಅಪ್‌ಲೋಡ್‌ಮಾಡುವುದು]. | ಅಭ್ಯರ್ಥಿಗಳು | 31.12.2021 ರಿಂದ 08.01.2022 |
| 6 | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಸೇವಾನುಭವ ಮತ್ತು ಹೆಚ್ಚಿನ ವಿದ್ಯಾರ್ಹತೆಗೆ ನಿಗಧಿಪಡಿಸಿರುವ ಅಂಕಗಳನ್ನು ಮತ್ತು ಅರ್ಹತೆಯನ್ನು ಪರಿಶೀಲಿಸಿ ಅರ್ಜಿಗಳ ಅನುಮೋದನೆ ನೀಡುವುದು. | ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಶ್ರೇಣಿಯ ಹುದ್ದೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಉಪನಿರ್ದೇಶಕರು [ಆಡಳಿತ] | 10.01.2022 ರಿಂದ 12.01.2022 |
| 7 | ನಿರ್ದೇಶಕರು, ಕೆ.ಎಸ್.ಇ.ಇ.ಬಿ ರವರಿಗೆ ಆನ್‌ಲೈನ್ ಮೂಲಕ ಪ್ರಶ್ನೆ ಪತ್ರಿಕೆ ಬೇಡಿಕೆ ಕಳುಹಿಸುವುದು ಮತ್ತು ಅರ್ಹ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರಿಗೆ ಕಳುಹಿಸುವುದು. | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | 17.01.2022 |
| 8 | ಪ್ರಶ್ನ ಪ್ರತಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ರವಾನಿಸುವುದು. | ನಿರ್ದೇಶಕರು ಕೆ.ಎಸ್.ಇ.ಇ.ಬಿ. ಬೆಂಗಳೂರು. | 05.02.2022 |
| 9 | ***ಪ್ರಾಥಮಿಕ & ಪ್ರೌಢ ಶಾಲಾ ಶಿಕ್ಷಕರಿಗೆ ಲಿಖಿತ ಪರೀಕ್ಷೆ 1 (ಪತ್ರಿಕೆ-1)***<br>1. ಸಿ.ಆರ್.ಪಿ. ಬಿ.ಆರ್.ಪಿ. ಮತ್ತು ಶಿಕ್ಷಣ ಸಂಯೋಜಕರು [ಪ್ರಾಥಮಿಕ]<br>2. ಬಿ.ಆರ್.ಪಿ[ಕಲಾ]. [ವಿಜ್ಞಾನ] ಮತ್ತು ಶಿಕ್ಷಣ ಸಂಯೋಜಕರು [ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | 06.02.2022 10.00 ರಿಂದ 12.30ರ ವರೆಗೆ |
| 10 | ***ಲಿಖಿತ ಪರೀಕ್ಷೆ 2 (ಪತ್ರಿಕೆ-2)***<br>1. ಸಿ.ಆರ್.ಪಿ [ಪ್ರಾಥಮಿಕ]<br>2. ಬಿ.ಆರ್.ಪಿ [ಕಲಾ] & [ವಿಜ್ಞಾನ]-[ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | 06.02.2022 2.00 ರಿಂದ 4.30 ರ ವರೆಗೆ |

| | | | |
|---|---|---|---|
| 11 | ***ಲಿಖಿತ ಪರೀಕ್ಷೆ 3 (ಪತ್ರಿಕೆ-2)***<br>1. ಬಿ.ಆರ್.ಪಿ [ಪ್ರಾಥಮಿಕ]<br>2. ಶಿಕ್ಷಣ ಸಂಯೋಜಕರು [ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | 07.02.2022<br>10.30<br>ರಿಂದ 12.30ರ<br>ವರೆಗೆ |
| 12 | ***ಲಿಖಿತ ಪರೀಕ್ಷೆ 4 (ಪತ್ರಿಕೆ-2)***<br>1. ಶಿಕ್ಷಣ ಸಂಯೋಜಕರು [ಪ್ರಾಥಮಿಕ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | 07.02.2022<br>2.00<br>ರಿಂದ 4.30ರ<br>ವರೆಗೆ |
| 13 | ***ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರ ವೃಂದಕ್ಕೆ***<br>***ಲಿಖಿತ ಪರೀಕ್ಷೆ 1 (ಪತ್ರಿಕೆ-1)***<br>1. ವಿಷಯ ಪರಿವೀಕ್ಷಕರು.<br>2. ಸಹಾಯಕ ನಿರ್ದೇಶಕರು[ಮ.ಉ.ಯೋಜನೆ].<br>3. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ.<br>4. ಎ.ಪಿ.ಸಿ [ಎಸ್.ಎಸ್.ಎ&ಆರ್.ಎಂ.ಎಸ್.ಎ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | 06.02.20[illegible]22<br>10.0[illegible]<br>ರಿಂದ [illegible]2.30ರ<br>[illegible]ರೆಗೆ |
| 14 | ***ಲಿಖಿತ ಪರೀಕ್ಷೆ-2 (ಪತ್ರಿಕೆ-2)***<br>1. ವಿಷಯ ಪರಿವೀಕ್ಷಕರು. | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | [illegible]7.02.2022<br>10.00<br>ರಿಂದ 12.30ರ<br>ವರೆಗೆ |
| 15 | ***ಲಿಖಿತ ಪರೀಕ್ಷೆ-3 (ಪತ್ರಿಕೆ-2)***<br>1.ಸಹಾಯಕ ನಿರ್ದೇಶಕರು [ಮಧ್ಯಾಹ್ನ ಉಪಹಾರ ಯೋಜನೆ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾ[illegible]ರು | 07.02.2022<br>2.00<br>ರಿಂದ 4.30 ರ<br>ವರೆಗೆ |
| 16 | ***ಲಿಖಿತ ಪರೀಕ್ಷೆ-4 (ಪತ್ರಿಕೆ-2)***<br>1. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ [ಬಿ.ಆರ್.ಪಿ]<br>2. [illegible].ಪಿ.ಸಿ.ಬ[ಎಸ್.ಎಸ್.ಎ&ಆರ್.ಎಂ.ಎಸ್.ಎ] | ಆಯಾ ಜಿಲ್ಲಾ [illegible]ಯಟ್ ಪ್ರಾ[illegible]ಶುಪಾಲರು | 06.02.2022<br>10.00<br>ರಿಂದ 12.30ರ<br>ವರೆಗೆ |
| 17 | ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಅಂತಿಮ ಫಲಿತಾಂಶ ಪಟ್ಟಿಯನ್ನು ಪ್ರಕಟಿಸಿ ಆಯಾ ಜಿಲ್ಲಾ ಉಪನಿರ್ದೇಶಕರು[ಆಡಳಿತ] ಮತ್ತು ಆಯುಕ್ತರು ಸಾ.ಶಿ.ಇ. ಬೆಂಗಳೂರು/ ಧಾರವಾಡ/ ಕಲಬುರಗಿ ರವರಿಗೆ ನೀಡುವುದು. | ನಿರ್ದೇಶಕರು ಕೆ[illegible]ಎಸ್.ಇ.ಇ.ಬಿ | 22.02.2022 |
| 18 | ಅಭ್ಯರ್ಥಿಗಳ ಸೇವಾನುಭವ ಮತ್ತು ಹೆಚ್ಚಿನ ವಿದ್ಯಾರ್ಹತೆಗೆ ಲಭ್ಯವಾಗುವ ಅಂಕಗಳಿಗೆ ಪರೀಕ್ಷಾ ಫಲಿತಾಂಶದ ಅಂಕಗಳನ್ನು ಕ್ರೂಢೀಕರಿಸಿ **ಎಲ್ಲಾ ವೃಂದದ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಣೆ.** | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | 24.02.2022 |
| 19 | ತಾತ್ಕಾಲಿಕ ಪಟ್ಟಿಗೆ ಅಭ್ಯರ್ಥಿಗಳಿಂದ ಆಕ್ಷೇಪಣೆ ಸ್ವೀಕರಿಸುವುದು. | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | 25.02.2022<br>ಮತ್ತು<br>26.02.2022 |
| 20 | ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ. ಹಾಗೂ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಆಕ್ಷೇಪಣೆಗಳನ್ನು ಸರಿಪಡಿಸಿದ ನಂತರ ಅರ್ಹ ಪಟ್ಟಿಯನ್ನು ಕ್ರೂಢೀಕರಣಕ್ಕಾಗಿ ಆಯಾ ಆಯುಕ್ತಾಲಯಗಳಿಗೆ ಕಳುಹಿಸುವುದು. | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | 02.03.2022 |
| 21 | ಕ್ರ.ಸಂ.20ರಂತೆ ಸ್ವೀಕೃತವಾಗಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಜಿಲ್ಲಾ | 1.ಇ-ಆಡಳಿತ ವತಿಯಿಂದ ಜಿಲ್ಲಾ ಪಟ್ಟಿಗಳನ್ನು ಮೇಲಿನ ಆಧಾರದಲ್ಲಿ ವಿಭಾಗಮಟ್ಟದಲ್ಲಿ ತಂತ್ರಾಂಶದಲ್ಲಿ ಕ್ರೋಢೀಕರಣ ಮತ್ತು | 02.03.2022 |

| | | | |
|---|---|---|---|
| | ಹಂತದ ಅಂತಿಮ ಪಟ್ಟಿಗಳನ್ನು ನಿಯಮಾನುಸಾರ ವಿಭಾಗ ಮಟ್ಟಕ್ಕೆ ಕ್ರೋಢೀಕರಣ ಮತ್ತು ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ | ಪ್ರಾಧಿಕಾರಿಯವರಿಗೆ ಪ್ರಕಟಣೆಗೆ ಪಟ್ಟಿ ನೀಡುವುದು<br>2. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಅಪರ ಆಯುಕ್ತರು ಕಲಬುರಗಿ ಮತ್ತು ಧಾರವಾಡ | |
| | ಸಿ.ಆರ್.ಪಿ, ಬಿ.ಆರ್.ಪಿ [ಪ್ರಾ ಮತ್ತು ಪ್ರೌ] ಮತ್ತು ಶಿಕ್ಷಣ ಸಂಯೋಜಕರ [ಪ್ರಾ ಮತ್ತು ಪ್ರೌ] ಹಾಗೂ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷರ ಹುದ್ದೆಗಳ [illegible] ಹುದ್ದಗಳ ಪ್ರಕಟಣೆ. | 1.ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಹುದ್ದೆಗಳಿಗೆ ಆಯಾಯ ಜಿಲ್ಲಾ ಉಪನಿರ್ದೇಶಕರು[ಆಡಳಿತ]<br>2.ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಆಯುಕ್ತರು ಸಾ.ಶಿ.ಇ ಬೆಂಗಳೂರು, ಅಪರ ಆಯುಕ್ತರು ಕಲಬುರಗಿ ಮತ್ತು ಧಾರವಾಡ. | 03.03.2022 |
| 23 | ಪ್ರಾಥ[illegible] ಪ್ರೌಢ, ಹಾಗೂ ಗ್ರೂಪ್-ಬಿ ವೃಂದದ ಅಧಿಸೂ[illegible] ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ನಿಗಧಿಪಡಿಸಿರುವ ಹುದ್ದೆಗಳಿಗೆ ಒಳಬರುವ [illegible]ರ್ಥಿಗಳಿಗೆ ಕೌನ್ಸಿಲಿಂಗ್. | 1.ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಹುದ್ದೆಗಳಿಗೆ ಆಯಾಯ ಜಿಲ್ಲಾ ಉಪನಿರ್ದೇಶಕರು[ಆಡಳಿತ]<br>2.ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಆಯುಕ್ತರು ಸಾ.ಶಿ.ಇ ಬೆಂಗಳೂರು, ಅಪರ ಆಯುಕ್ತರು ಕಲಬುರಗಿ ಮತ್ತು ಧಾರವಾಡ. | 04.03.2022 ಮತ್ತು 05.03.2022 |
| 24 | ಪ್ರಾಥಮಿಕ/ಪ್ರೌಢ ಶಿಕ್ಷಕರ ಹಾಗೂ ಗ್ರೂಪ್-ಬಿ ವೃಂದದ ಅಧಿಸೂಚಿತ ಹುದ್ದೆಗಳಲ್ಲಿ 05 ವರ್ಷಗಳಿಗಿಂತ ಹೆಚ್ಚಿನ ಸೇವೆಯನ್ನು ಪೂರೈಸಿರುವವರಿಗೆ (ಹೊ[illegible] ಹೋಗುವ) ಕೌನ್ಸಿಲಿಂಗ್. | 1.ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಹುದ್ದೆಗಳಿಗೆ ಆಯಾಯ ಜಿಲ್ಲಾ ಉಪನಿರ್ದೇಶಕರು[ಆಡಳಿತ]<br>2.ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಆಯುಕ್ತರು ಸಾ.ಶಿ.ಇ ಬೆಂಗಳೂರು, ಅಪರ ಆಯುಕ್ತರು ಕಲಬುರಗಿ ಮತ್ತು ಧಾರವಾಡ. | 06.03.2022 ಮತ್ತು 07.03.2022 |
| 25 | ಅಧಿಸೂಚಿತ ಪ್ರಾಥಮಿಕ ಮತ್ತು ಪ್ರೌಢ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಿ[illegible]ಬಗ್ಗೆ ರಾಜ್ಯ ಕಛೇರಿಗೆ ವರದಿ ನೀಡುವುದು. | ಜಿಲ್ಲಾ ಉಪನಿರ್ದೇಶಕರು[ಆಡಳಿತ] | 09.03.2022 |

07/12/2021

**ಡಾ|| ವಿಶಾಲ್ ಆರ್,**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ :-**

1. ನಿರ್ದೇಶಕರು[ಪರೀಕ್ಷೆಗಳು], ಕೆ.ಎಸ್.ಇ.ಇ.ಬಿ. ಮಲ್ಲೇಶ್ವರಂ. ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ.

3. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಪ್ರಾಂಶುಪಾಲರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ರವರಿಗೆ.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು :-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ. ಬಹುಮಹಡಿಗಳ ಕಟ್ಟಡ. ಬೆಂಗಳೂರು-1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಕರ್ನಾಟಕ ಸರ್ಕಾರ. ವಿಧಾನ ಸೌಧ. ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ರಾಜ್ಯ ಯೋಜನಾ ನಿರ್ದೇಶಕರು. ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ಅಪರ ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ. ಕಲಬುರಗಿ.
5. ಅಪರ ಆಯುಕ್ತರು. ಸಾರ್ವಜನಿಕ ಶಿಕ್ಷಣ ಇಲಾಖೆ. ಧಾರವಾಡ .
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
7. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
9. ಸಹ ನಿರ್ದೇಶಕರು-1 ಆಯುಕ್ತರ ಕಛೇರಿ. ಸಾರ್ವಜನಿಕ ಶಿಕ್ಷಣ ಇಲಾಖೆ. ಬೆಂಗಳೂರು.
10. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
11. ಸಹ ನಿರ್ದೇಶಕರು. ಮಧ್ಯಾಹ್ನ ಉಪಹಾರ ಯೋಜನೆ. ಕೆ.ಜಿ.ರಸ್ತೆ. ಬೆಂಗಳೂರು.
12. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ.
13. ಹಿರಿಯ ಸಹಾಯಕ ನಿರ್ದೇಶಕರು. ಇ-ಆಡಳಿತ ಘಟಕ. ಆಯುಕ್ತರ ಕಛೇರಿ. ಸಾ.ಶಿ.ಇಲಾಖೆ. ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ.
14. ಹಿರಿಯ ಸಹಾಯಕ ನಿರ್ದೇಶಕರು. ಇಇಡಿಎಸ್ ವಿಭಾಗ .ಆಯುಕ್ತರ ಕಛೇರಿ. ಸಾ.ಶಿ.ಇಲಾಖೆ. ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ.
15. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ನಿರ್ದಿಷ್ಟ ಹುದ್ದೆಯಾದ ಶಿಕ್ಷಣ ಸಂಯೋಜಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ನಿಯಮವನ್ನು ಸಡಿಲಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಇಡಿ 217 ಎಸ್‌ಎಲ್‌ಬಿ 2000 ದಿನಾಂಕ:30-11-2000
2. ಸರ್ಕಾರದ ಆದೇಶ ಸಂಖ್ಯೆ:ಇಡಿ 68 ಎಸ್‌ಎಲ್‌ಬಿ 2007 ದಿನಾಂಕ:17-03-2007
3. ಸರ್ಕಾರದ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2014 ದಿನಾಂಕ:19-05-2017
4. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 16 ಇಟಿಆರ್ 2017 ದಿನಾಂಕ:18-12-2017
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ:ಸಿ3(4)ಸಿ3(7)ನಿ ಹು.ಆ.ಪ/19/ 2019-2020 ದಿನಾಂಕ:29-06-2020

* * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (01)ರ ಅಧಿಸೂಚನೆಯಲ್ಲಿ ಶಾಲಾ ತನಿಖಾಧಿಕಾರಿಗಳ ಹುದ್ದೆಗಳನ್ನು ಶಿಕ್ಷಣ ಸಂಯೋಜಕರು ಗ್ರೇಡ್-01' ಮತ್ತು 'ಶಿಕ್ಷಣ ಸಂಯೋಜಕರು ಗ್ರೇಡ್-2' ಎಂದು ಪದನಾಮೀಕರಿಸಿದಲ್ಲಿ ಪರಸ್ಪರ ತಾರತಮ್ಯ ಉಂಟಾಗುವುದರಿಂದ ಹಾಗೂ ಈ ಎರಡೂ ಹುದ್ದೆಗಳಿಗೆ ಒಂದೇ ವೇತನ ಶ್ರೇಣಿ ಇರುವುದರಿಂದ ಈ ಎರಡೂ ವೃಂದದ ಹುದ್ದೆಗಳನ್ನು "ಶಿಕ್ಷಣ ಸಂಯೋಜಕರು" ಎಂದು ಪದನಾಮೀಕರಿಸಿ ಆದೇಶಿಸಲಾಗಿದ್ದು, ಈ ರೀತಿ ಮರು ಪದನಾಮೀಕರಿಸಲಾದ ಶಿಕ್ಷಣ ಸಂಯೋಜಕರ 505 ಹುದ್ದೆಗಳನ್ನು ಪ್ರೌಢಶಾಲಾ ಶಿಕ್ಷಕರ ವೃಂದದಿಂದ ಆಯ್ಕೆ ಮೂಲಕ ಭರ್ತಿ ಮಾಡಿಕೊಳ್ಳತಕ್ಕದ್ದು ಮತ್ತು 380 ಹುದ್ದೆಗಳನ್ನು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಿಂದ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಬಡ್ತಿ ಮೂಲಕ ತುಂಬತಕ್ಕದೆಂದು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (02)ರ ಆದೇಶದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣ ಸಂಯೋಜಕರ ಹುದ್ದೆಗಳನ್ನು ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಬಡ್ತಿ ಮೂಲಕ ತುಂಬುವುದು ಎಂದಿರುವುದನ್ನು ಪ್ರೌಢಶಾಲಾ ಶಿಕ್ಷಣ ಸಂಯೋಜಕರ ಹುದ್ದೆಗಳನ್ನು ಆಯ್ಕೆ ಮೂಲಕ (ಲಿಖಿತ ಪರೀಕ್ಷೆ) ಭರ್ತಿ ಮಾಡುವ ರೀತಿಯಲ್ಲಿಯೇ ಪ್ರಾಥಮಿಕ, ಉರ್ದು ಮತ್ತು ಇತರ ಭಾಷಾ ಅಲ್ಪಸಂಖ್ಯಾತ ಸಂಯೋಜಕರನ್ನು ಸಹ (ಲಿಖಿತ ಪರೀಕ್ಷೆ) ಆಯ್ಕೆ ಮೂಲಕವೇ ಭರ್ತಿ ಮಾಡಲು ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (03)ರ ಆದೇಶದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮ ಬದಲಾವಣೆಯೊಂದಿಗೆ ಹೊಸ ವೃಂದ ಮತ್ತು ವೃಂದಬಲ ನಿರ್ಧರಿಸುವ ಕುರಿತಂತೆ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (04)ರ ಅಧಿಸೂಚನೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಕೆಲವು ನಿರ್ದಿಷ್ಟ ಹುದ್ದೆಗಳಿಗೆ ಪರೀಕ್ಷಾ ವಿಧಾನವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2017ರ ಸೆಕ್ಷನ್-5 ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ ನಿಯಮಗಳು 2017ರ ನಿಯಮ 21(5)ರ ಪ್ರಕಾರ ಆಯ್ಕೆ ಪರೀಕ್ಷೆಯನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಪರೀಕ್ಷಾ ವಿಧಾನ ಮತ್ತು ಪಠ್ಯಕ್ರಮವನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (05)ರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ:ಸಿ3(1).ವೃಂದ.ಬಲಕ.ಜಿಲ್ಲಾ.ಹಂ/ 2017-18 ದಿನಾಂಕ 02.02.2018 ರ ಪ್ರಕಾರ 250ಕ್ಕಿಂತ ಮೇಲ್ಪಟ್ಟು ದಾಖಲಾತಿ ಇರುವ ಶಾಲೆಗಳಲ್ಲಿ ಪದವೀಧರೇತರ ಮುಖ್ಯ ಶಿಕ್ಷಕರ ಹುದ್ದೆ ನಿಗಧಿ ಮಾಡಬಹುದಾಗಿರುತ್ತದೆ. ಜಿಲ್ಲೆಗಳಲ್ಲಿ 250 ವಿದ್ಯಾರ್ಥಿಗಳು ಇರುವ ಶಾಲೆಗಳ ಸಂಖ್ಯೆ ತುಂಬಾ ಕಡಿಮೆ ಇರುವುದರಿಂದ ಪದವೀಧರೇತರ ಮುಖ್ಯ ಶಿಕ್ಷಕರ ಸಂಖ್ಯೆ ಕಡಿಮೆ ಇರುತ್ತದೆ. ರಾಜ್ಯದಲ್ಲಿ ಮಂಜೂರಾದ ಪದವಿದರೇತರ ಮುಖ್ಯ ಶಿಕ್ಷಕರ ಸಂಖ್ಯೆ 1842 ಆಗಿವೆ.

ಸದರಿ ಹುದ್ದೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪದವೀಧರೇತರ ಮುಖ್ಯ ಶಿಕ್ಷಕರು (ದಿನಾಂಕ 19.05.2017 ರ ವೃಂದ ಬಲ ಆದೇಶದಲ್ಲಿ ಪದನಾಮಿಕರಿಸಿರುವಂತೆ ಹಿರಿಯ ಮುಖ್ಯ ಶಿಕ್ಷಕರು ಎಂಬುದಾಗಿದೆ) ಒಟ್ಟು 1842 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 770 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ ಬಾಕಿ 1072 ಹುದ್ದೆಗಳು ಖಾಲಿ ಇರುತ್ತವೆ. ಸದರಿ ಹುದ್ದೆ ಬಡ್ತಿ ಮೂಲಕ ತುಂಬುವ ಕಾರಣಕ್ಕಾಗಿ ಬಹುತೇಕ ಶಿಕ್ಷಕರು 55 ವರ್ಷ ವಯೋಮಿತಿ ಮೀರಿರುವ ಕಾರಣ ಶಿಕ್ಷಣ ಸಂಯೋಜಕ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.

ಪ್ರಸ್ತುತ ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಶಿಕ್ಷಣ ಸಂಯೋಜಕ ಹುದ್ದೆಗಳು 380 ಇದ್ದು, ಇದರಲ್ಲಿ ದಿನಾಂಕ [illegible] ರಲ್ಲಿ ಹಾಗೂ ಇತರ ದಿನಾಂಕಗಳಲ್ಲಿ ಜರುಗಿದ ಕೌನ್ಸಲಿಂಗ್ ನಲ್ಲಿ ಕೇವಲ 16 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, 364 ಹುದ್ದೆಗಳು ಖಾಲಿ ಉಳಿದಿರುತ್ತವೆ. ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಶಿಕ್ಷಣ ಸಂಯೋಜಕ ಹುದ್ದೆಗಳು ಅಗತ್ಯ ಹುದ್ದೆಗಳಾಗಿದ್ದು, ಶೈಕ್ಷಣಿಕ ಚಟುವಟಿಕೆಗಳಲ್ಲಿ ತಾಲ್ಲೂಕಿನ ಹಾಜರಾತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಒಂದು ಕರ್ತವ್ಯವಾಗಿರುತ್ತದೆ. ಶಾಲೆಯಿಂದ ಹೊರಗುಳಿದ ಮಕ್ಕಳ (ಓ.ಓ.ಎಸ್.ಸಿ) ಕುರಿತಾಗಿ ಈಗಾಗಲೇ ನ್ಯಾಯಾಲಯದಲ್ಲಿ ಪ್ರಕರಣವಿದ್ದು, ಹಾಜರಾತಿ ಅಧಿಕಾರಿಗಳಾದ ಶಿಕ್ಷಣ ಸಂಯೋಜಕ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಲು ನಿರ್ದೇಶನವಿರುತ್ತದೆ.

ಈ ಹಿನ್ನೆಲೆಯಲ್ಲಿ ಶಿಕ್ಷಣ ಸಂಯೋಜಕ (ಪ್ರಾಥಮಿಕ) ಈ ಹುದ್ದೆಗೆ ನಿಗದಿಪಡಿಸಿದ ಪದವೀಧರೇತರ ಮುಖ್ಯ ಶಿಕ್ಷಕರು ಮಾತ್ರ ಅರ್ಜಿ ಸಲ್ಲಿಸುವುದು ಎಂಬ ಷರತ್ತನ್ನು ಸಡಿಲಿಸಿ

ಪದವಿಧರೇತರ ಮುಖ್ಯ ಶಿಕ್ಷಕರ ಜೊತೆಗೆ ಮುಖ್ಯ ಶಿಕ್ಷಕ ವೃಂದದವರು ಸಹ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ ಎಂದು ಮಾರ್ಪಡಿಸಿ ಆದೇಶ ಹೊರಡಿಸಿದಲ್ಲಿ ಎಲ್ಲಾ ಹುದ್ದೆಗಳು ಭರ್ತಿಯಾಗುವ ಸಂಭವವಿರುವುದರಿಂದ, ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 47 ಪಿಬಿಎಸ್ 2020:**

**ಬೆಂಗಳೂರು, ದಿನಾಂಕ:12-11-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಶಿಕ್ಷಣ ಸಂಯೋಜಕ ಹುದ್ದೆಗಳಿಗೆ ಪದವಿಧರೇತರ ಮುಖ್ಯ ಶಿಕ್ಷಕರು ಮಾತ್ರ ಅರ್ಜಿ ಸಲ್ಲಿಸುವುದು ಎಂಬ ಅರ್ಹತೆಯನ್ನು ಸಡಿಲಿಸಿ, ಪದವಿಧರೇತರ ಮುಖ್ಯ ಶಿಕ್ಷಕರ (ದಿನಾಂಕ:19.05.2017 ರ ವೃಂದ ಬಲ ಆದೇಶದಲ್ಲಿ ಪದನಾಮಿಕರಿಸಿರುವಂತೆ ಹಿರಿಯ ಮುಖ್ಯ ಶಿಕ್ಷಕರು ಎಂಬುದಾಗಿದೆ) ಜೊತೆಗೆ ಪ್ರಾಥಮಿಕ ಶಾಲಾ ಎಲ್ಲಾ ಮುಖ್ಯ ಶಿಕ್ಷಕ ವೃಂದದವರು ಸಹ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ ಎಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

12/11/2021
**(ಹೆಚ್. ಎಸ್. ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ
(ಪ್ರಾಥಮಿಕ ಶಿಕ್ಷಣ) ಶಿಕ್ಷಣ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು(ಆ &ಇ)ಕರ್ನಾಟಕ, ಬೆಂಗಳೂರು.
2. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
6. ನಿರ್ದೇಶಕರು, (ಪ್ರಾಥಮಿಕ/ಪ್ರೌಢ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ಬೆಂಗಳೂರು.

**ಪ್ರತಿ:**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿದಾನ ಸೌಧ.

2 ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ,ಬೆಂಗಳೂರು.

3 ಸರ್ಕಾರದ ಉಪಕಾರ್ಯದರ್ಶಿಗಳ ಆಪ್ತ ಸಹಾಯಕರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

4. ಅಧೀನ ಕಾರ್ಯದರ್ಶಿ, (ಪ್ರಾಥಮಿಕ/ಪ್ರೌಢ), ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

5 ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.